ನೆವೆಂಬರ್-2007

ಕಲ್ಯಾಣ ಕಿರಣ

ಬೆಲೆ-6.00









ಸಚಿವ ರಾಮಚಂದ್ರಗೌಡರಿಂದ ಬಸವಣ್ಣನವರ ವಚನಗಳ ಮರಾಠಿ ಕೃತಿ ಭಾಷಾಂತರ ಬಿಡುಗಡೆ



ಸಚಿವ ರಾಮಚಂದ್ರ ಗೌಡರಿಗೆ ನೆನಪಿನ ಕಾಣಿಕೆ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ-37	ಬಸವ ಶಕೆ-874	ಆಜೀವ ಸದಸ್ಯತ್ವ 600 ರೂ.
ಸಂಚಿಕೆ-5	ಸೆಪ್ಟೆಂಬರ್-2007	ವಾರ್ಷಿಕ ಚಂದಾ 60/- ರೂ.

ಬಸವ ಭಾನುವಿನ ಕ್ರಾಂತಿ ಉಷೆ



ಓ ಕ್ರಾಂತಿ ವೀರ, ನಿಮ್ಮಯ ವಾಣಿ
ಕನ್ನಡ ನೆಲವನೇ ಕುಣಿದಾಡಿಸಿತು
ಬಸವ ತತ್ವವನ್ನೇ ಮೆರೆದಾಡಿಸಿತು
ವಿಶ್ವ ಧರ್ಮವ ಹಬ್ಬಿ ಹಸರಿಸಿತು
ಸಮತೆಯ ಧ್ವಜವ ಹಾರಿಸಿತು

ನಿಮ್ಮಯ ಬೋಧೆ ಬುದ್ಧಿಯನರಳಿಸಿ
ಸುಪ್ತ ಚೇತನಗಳ ಎಚ್ಚರಗೊಳಿಸಿತು
ನಿರಭಿಮಾನಿಗಳ ನರನಾಡಿಯ ಮಿಡಿಸಿ
ಧರ್ಮದ ದುಂದುಭಿ ಮೊಳಗಿಸಿತು
ಕರ್ಮದ ಜಂಜಡ ಹರಿದೊಗೆಯಿಸಿತು || 2 ||

ಸ್ತ್ರೀ ಜಗದ್ಗುರು ಪೀಠವ ಸ್ಥಾಪಿಸಿತು
ದೀನದಲಿತರ ಮೇಲೆ ಧರ್ಮದ ಹೊನಲನು
ಹರಿಸುತ ಹೊಸ ಚೇತನವ ತುಂಬುತ ಬಂದಿತು
ವಿಶ್ವ ಧರ್ಮದ ವೇದಿಕೆ ರಚಿಸಿ
ಸಮತೆಯ ಘೋಷಣೆ ಮೊಳಗಿಸಿತು || 3 ||

ಸುಯಿಧಾನ ಸುಗ್ರಂಥ ಮಾಲೆಯ ಸೃಷ್ಟಿಸಿ
ಗ್ರಂಥ ಕುಸುಮಗಳನು ಅರಳಿಸಿತು
ಕ್ರಾಂತಿಯೋಗಿ ಬಸವಣ್ಣನ ಚಿತ್ರಿಸಿತು
ಕಲ್ಯಾಣ ಕಿರಣದ ಕಾಲುವೆ ಮೂಲಕ
ಜ್ಞಾನದ ಸುಜಲವ ಹರಿಯಿಸಿತು || 4 ||

ಧರ್ಮಕ್ರಾಂತಿಯ ಧೀರಯೋಗಿಯೇ
ಬಸವ ಧರ್ಮದ ಜ್ಞಾನಮದಕರಿಯೇ
ಗುರು ಬಸವೇಶನ ಕರುಣೆಯ ಕುಂಚವು
ಸ್ವಾಮಿ ಲಿಂಗಾನಂದರೆಂಬ ಧೀಮಂತ ಗುರುವ
ಜಗಕೆ ನೀಡಿತು, ಬಸವ ಪಥಿಕರ ಬಾಳ ಬೆಳಗಿಸಿತು. || 5 ||

- ಮಾತಾಜಿ

★ ಕಲ್ಯಾಣ ಕಿರಣ ★

ಕಿರಣ ಗನ್ನಡಿ

ಪೂಜ್ಯಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ
76ನೆಯ ಜಯಂತಿ
ಹಾಗೂ
ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 50ನೆಯ ವರ್ಧಂತಿ ಉತ್ಸವ
ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ
ಸೆಪ್ಟೆಂಬರ್ 15-16ರಂದು

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10, Printed By Padmashree Printers, B'lore

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010



ಭಾರತದ ರಾಜಧಾನಿ ನವ ದೆಹಲಿಯಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ 2007, ಅಕ್ಟೋಬರ್ 27, 28 ಮತ್ತು 29ರಂದು

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2007ನೇ ಇಸವಿಯ ಅಕ್ಟೋಬರ್ 27, 28 ಮತ್ತು 29ರಂದು ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು ಭಾರತದ ರಾಜಧಾನಿ ನವದೆಹಲಿಯಲ್ಲಿ ಏರ್ಪಡಿಸಲಾಗಿದೆ.

1997ರ ಅಕ್ಟೋಬರ್ 17, 18 ಮತ್ತು 19ರಂದು ಮೂರು ದಿವಸಗಳ ಕಾಲ ಲಾಲ್ ಕಿಲ್ಲಾ (ಕೆಂಪು ಕೋಟೆ) ಮೈದಾನದಲ್ಲಿ 5ನೆಯ ಬಸವ ಧರ್ಮ ಸಮ್ಮೇಳನವನ್ನು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯಿತು. 2005ರ ಅಕ್ಟೋಬರ್ 21, 22, 23ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಲಾಲ್ ಕಿಲ್ಲಾ ಮೈದಾನದ ಸಮೀಪದ ದರಿಯಾ ಗಂಜ್‌ದಲ್ಲಿರುವ ಮಹಾವೀರ ವಾಟಿಕಾದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಇದೀಗ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು 2007ನೆಯ ಇಸವಿಯ ಅಕ್ಟೋಬರ್ 27, 28, 29 - ಶನಿವಾರ, ಭಾನುವಾರ, ಸೋಮವಾರದಂದು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

ಪ್ರತಿನಿಧಿ ಶುಲ್ಕ ಒಬ್ಬರಿಗೆ 600ರೂಗಳು. ಅಕ್ಟೋಬರ್ 26ರ ಮಧ್ಯಾಹ್ನದಿಂದ 29ರ ರಾತ್ರಿಯವರೆಗೆ ಊಟದ ವ್ಯವಸ್ಥೆಯನ್ನು ಮಾಡುವ ಜವಾಬ್ದಾರಿ ಸಮ್ಮೇಳನ ಸಮಿತಿಯದಾಗಿರುತ್ತದೆ. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟ ವ್ಯವಸ್ಥೆ ಮಾಡಲಾಗುತ್ತದೆ.

ನವ ದೆಹಲಿಯಲ್ಲಿ ಕಳೆದ ವರ್ಷ ಪ್ರಾರಂಭಗೊಂಡ ಅಕ್ಷರ ಧಾಮ ನೋಡಲು ಅರ್ಹವಾದ ಸ್ಥಳ. ಮಹಾತ್ಮಾ ಗಾಂಧಿ ಮತ್ತು ನೆಹರೂ ಸ್ಮಾರಕಗಳು ಸಹ ವಿಶೇಷವಾಗಿ ಇವೆ. ಈ ಎಲ್ಲಾ ಸ್ಥಳಗಳನ್ನು ನೋಡಲು ಕನಿಷ್ಠ 2 ದಿನಗಳಾದರೂ ಬೇಕು. ಆದ್ದರಿಂದ ಹೆಚ್ಚಿಗೆ 2-3 ದಿನ ಉಳಿಯಬೇಕು ಎನ್ನುವವರು ಇನ್ನು 400ರೂಗಳನ್ನು ಹೆಚ್ಚುವರಿಯಾಗಿ ಸೇರಿಸಿ, 1000ರೂಗಳನ್ನು ಕಟ್ಟಬೇಕು. ಪ್ರತ್ಯೇಕವಾಗಿ ಹೋಟೆಲ್‌ಗಳನ್ನು ಬುಕ್ ಮಾಡಿಕೊಳ್ಳಬೇಕು ಎನ್ನುವವರು ಪ್ರತಿನಿಧಿ ಶುಲ್ಕ 600ರೂ ಕಟ್ಟಿದರೆ ಸಾಕು. ಇನ್ನು ಹೆಚ್ಚುವರಿಯಾಗಿ ಅಥವಾ ತಮ್ಮ ಶಕ್ತ್ಯಾನುಸಾರ ಕಾಣಿಕೆ ಕೊಡುವವರು ಕೊಡಬಹುದು.

1. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು. ಏಕೆಂದರೆ ವಾಸ್ತವ್ಯಕ್ಕಾಗಿ ನಾವು ಹಾಲ್‌ಗಳನ್ನು ಬುಕ್ ಮಾಡಬೇಕಾಗುತ್ತದೆ. ಕಳೆದ ಎರಡೂ ಸಲ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಸಮ್ಮೇಳನ ಮಾಡಿದ್ದರಿಂದ ಅಲ್ಲಿ ಧರ್ಮಶಾಲೆಗಳು ಬಹಳ ಇರುವುದರಿಂದ ವಸತಿಯು ಸುಲಭವಾಗಿ ಸಿಕ್ಕಿತು. ಈ ಸಲ ಬಸವ ಮಂಟಪಕ್ಕೆ ಹತ್ತಿರದಲ್ಲಿರುವ ಮೈದಾನದಲ್ಲಿ ಸಮ್ಮೇಳನ ಮಾಡಲಾಗುತ್ತಿರುವುದರಿಂದ ಈ ಸ್ಥಳಕ್ಕೆ ಹತ್ತಿರದಲ್ಲಿರುವಂತೆ ವಸತಿ ವ್ಯವಸ್ಥೆ ಮಾಡಬೇಕಾಗುತ್ತದೆ.

2. ಸಮ್ಮೇಳನ ಸ್ಥಳಕ್ಕೆ ಸಮೀಪವಿರುವ ಲಾಡ್ಜಿಂಗ್ ಬೇಕು ಎನ್ನುವವರು ಸಹ ಮೊದಲೇ ತಿಳಿಸಬೇಕು. ಇವರಿಂದ ಲಾಡ್ಜಿಂಗ್ ಬಾಡಿಗೆಯ ಜೊತೆ ಸರ್ವಿಸ್‌ಚಾರ್ಜು ಸಹ ಸೇರಿಸಲಾಗುವುದು. ಕೆಲವರು ಬಹಳ ಕ್ಷುಲ್ಲಕ ರೀತಿಯಲ್ಲಿ ಹಣ ಕೊಡುವಾಗ ವರ್ತಿಸುವುದುಂಟು. ಬುಕ್ ಮಾಡಲು ಎಷ್ಟು ಸಲ ಓಡಾಡಬೇಕಾಗುತ್ತದೆ. ಮತ್ತು ಅಲ್ಲೆಲ್ಲ ಮೊದಲೇ ಹಣ ಕಟ್ಟದರೆ ಮಾತ್ರ ಬುಕ್ ಮಾಡಿಕೊಳ್ಳುತ್ತಾರೆ. ಹಾಗೆಯೇ ಹೆಸರು ಬರೆಸಿ ಬಿಡಲು ಅವು ಸರ್ಕಾರಿ ಅತಿಥಿ ಗೃಹಗಳಲ್ಲ. ಮತ್ತೆ ಕೆಲವರು ಫೋನ್ ಮೂಲಕ ಹೇಳುತ್ತಾರೆ. ನಂಬಿ ಅವರ ಪರವಾಗಿ ಹಣ ಕಟ್ಟುತ್ತೇವೆ. ಕಡೆಯ ಕ್ಷಣದಲ್ಲಿ ತಮಗೆ ಬರಲು ಆಗುತ್ತಿಲ್ಲ ಎನ್ನುತ್ತಾರೆ. ಆಗ ಯಾರೂ ಆ ಕೋಣೆಗೆ ಬರದೆ ಇದ್ದರೆ ಕಟ್ಟಿದ ನಮಗೆ ನಷ್ಟವಾಗುತ್ತದೆ. ಕಳೆದೆರಡು ಸಲದ ಅನುಭವದ ಮೇಲೆ ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ.

3. ಸಮ್ಮೇಳನಗಳನ್ನು ನಾವು ಕಡಿಮೆ ಮಾಡಿದ್ದೇಕೆ ಎಂದರೆ ಅನೇಕರು ಪ್ರತಿನಿಧಿ ಶುಲ್ಕವನ್ನು ಕೊಡದಿರುವುದು. ಶರಣ ಮೇಳ, ಕಲ್ಯಾಣ ಪರ್ವಕ್ಕೆ ಧಾವಿಸಿದಂತೆ ದೆಹಲಿ ಸಮ್ಮೇಳನಕ್ಕೂ ಬಂದರೆ ನಾವು ಖರ್ಚುವೆಚ್ಚವನ್ನು ಹೇಗೆ

ನಿಭಾಯಿಸಬೇಕು? ಊರು ತಿರುಗಲು, ಸಾಮಾನು ಖರೀದಿಸಲು ಹಣ ಇರುತ್ತದೆ. ಪ್ರತಿನಿಧಿ ಶುಲ್ಕ ತುಂಬಲು ಇರದೆ. ಧರ್ಮ ಸಂಸ್ಥೆಗೆ ಕೊಡಬೇಕಾದ ಶುಲ್ಕದ ಹಣದಲ್ಲಿ ಉಳಿಸಿಕೊಂಡು ವೈಯಕ್ತಿಕ ಸಾಮಾನು ಖರೀದಿಗೆ ಬಳಸಬೇಕೆಂಬ ಕ್ಷುಲ್ಲಕ ಮನೋಭಾವ ಕೆಲವರದು. ಈ ರೀತಿ ಮಾಡಬಾರದು. ಆದರಿಂದ ನಮಗೆ ಸಮ್ಮೇಳನ (ಶಿಬಿರ)ಗಳನ್ನು ನಡೆಸುವ ಉತ್ಸಾಹ ಕಡಿಮೆಯಾಗಿದೆ. ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮ ಗಿರಿಯ ಗಣ ಮೇಳಕ್ಕೆ ನಿರ್ಬಂಧ ವಿಧಿಸುವುದಿಲ್ಲ. ಆದರೆ ಪರವೂರಿನಲ್ಲಿ ಮಾಡುವಾಗ, ಎಲ್ಲ ಸಾಮಾನುಗಳು ತುಟ್ಟಿಯಾಗಿರುವ ಈ ಕಾಲದಲ್ಲಿ, ಸಮ್ಮೇಳನಗಳನ್ನು ಮಾಡುವುದು ಎಷ್ಟು ಶ್ರಮದ ಕೆಲಸ ಎಂಬುದನ್ನು ಶರಣ ಬಂಧುಗಳು ಮನಗಾಣಬೇಕು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

4. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ದೆಹಲಿ ಸುತ್ತಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತ್ಸಾಹ ನಮ್ಮದಾಗಿರುತ್ತದೆ. ಆಗ ಇಲ್ಲಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು? ಕೇವಲ ಊರು ನೋಡಲು ಬರುವುದೇ ಆದರೆ ದೆಹಲಿ ಯಾವಾಗಲೂ ಇರುತ್ತದೆ. ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

5. ಬೆಂಗಳೂರಿನಿಂದ ದೆಹಲಿಗೆ ನೇರವಾಗಿ ಹೋಗುವವವರಿಗೆ ರೇಲ್ವೆ ರಿಸರ್ವೇಷನ್‌ಗೆ ನೆರವು ನೀಡಲಾಗುವುದು.

ಬೆಲೆ: ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 1200-00
60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 900-00
(ಇವರು 60 ವರ್ಷ ಮೇಲಿನವರೆಂದು ಸಿದ್ಧಪಡಿಸಲು ಏನಾದರೂ ದಾಖಲೆ ತರಬೇಕು)

ಹೋಗುವಾಗ ಎಲ್ಲರೂ ಒಟ್ಟಿಗೆ ಹೋದರೂ ಬರುವಾಗ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಬರುವುದರಿಂದ ವಾಪಸ್ಸು ಬರುವ ದಿನವನ್ನು ತಿಳಿಸಬೇಕು. ತಡ ಮಾಡಿದರೆ ರಿಸರ್ವೇಷನ್ ಸಿಗುವುದು ಬಹಳ ಕಷ್ಟ. ಬೇಗನೆ ನಿರ್ಧಾರ ತೆಗೆದುಕೊಳ್ಳದೆ ಕೆಲವರು ಹಿಂದಿನ ಸಮ್ಮೇಳನದ ಅವಕಾಶವನ್ನು ಕಳೆದುಕೊಂಡರು.

ರೇಲ್ವೆ ರಿಸರ್ವೇಷನ್‌ಗೆ ಸಂಪರ್ಕಿಸಬೇಕಾದವರು: ಇಂದು ಶೇಖರ್ - 9945684230.

<u>ವಿ.ಸೂ :</u> ಇಲ್ಲಿ ಕೊಟ್ಟಿರುವುದು ಕೇವಲ ರೇಲ್ವೆ ಛಾರ್ಜು. ಇದರಲ್ಲಿ ಪ್ರತಿನಿಧಿ ಶುಲ್ಕ ಸೇರಿಸಿಲ್ಲ. ಅದನ್ನು ಪ್ರತ್ಯೇಕವಾಗಿ ಕೊಡಬೇಕು.

6. ಈಗ ವಿಮಾನ ಕಂಪನಿಗಳ ಸಂಖ್ಯೆ ಹೆಚ್ಚಿ ಸ್ಪರ್ಧೆ ಏರ್ಪಟ್ಟಿರುವುದರಿಂದ' ಮೊದಲಿಗಿಂತಲೂ ದರಗಳು ಕಡಿಮೆ ಇವೆ. ವಿಮಾನದಲ್ಲಿ ಹೋಗಿ ಬರಬೇಕು ಎನ್ನುವವರು ದೂರವಾಣಿ ಮೂಲಕ ತಿಳಿಸಬೇಕು. ರೇಟನ್ನು ತಿಳಿಸಲಾಗುವುದು. ಒಪ್ಪಿಗೆಯಾದರೆ ತಕ್ಷಣ ಹಣ ಕಳಿಸಿಕೊಡಬೇಕು. ರೇಟು ಇಷ್ಟೇ ಎಂದು ಹೇಳಲಾಗುವುದಿಲ್ಲ. ನಿಗದಿತ ದರ ಒಂದೇ ಇದ್ದರೂ ಸ್ಪರ್ಧೆಯ ಮೇಲೆ ಕಡಿಮೆಗೂ ಸಿಕ್ಕಬಹುದು. ಪ್ರತಿ ಗಂಟೆಗೂ ದರದಲ್ಲಿ ವಿವಿಧ ಏರಲೈನ್ಸ್‌ನಲ್ಲಿ ಸ್ಪರ್ಧಾತ್ಮಕ ಬದಲಾವಣೆ ಇರುತ್ತದೆ. ದೂರವಾಣಿ : 080-23325335

7. ಸಮ್ಮೇಳನ ಪ್ರತಿನಿಧಿ ಶುಲ್ಕ ಊಟ- ವಸತಿ ಸೇರಿ, 600 ರೂ. ಸಾಮೂಹಿಕ ವಸತಿ- ವ್ಯವಸ್ಥೆ ಇರುತ್ತದೆ.

ವಿಶೇಷ ಸೂಚನೆ : 1997ರ ಸಮ್ಮೇಳನದ ಸಮಯದಲ್ಲಿ ಕೆಲವರು ಪ್ರಮುಖರು ಸಂಗ್ರಹಿಸಿದ ಪ್ರತಿನಿಧಿ ಶುಲ್ಕವನ್ನು ಕೊಡದೆ ಆ ಹಣವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡರು. ಇದರಿಂದ ಸಮ್ಮೇಳನ ಸಮಿತಿಗೆ ತೊಂದರೆಯಾಯಿತಲ್ಲದೆ ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಲ್ಲಿ ಒಡಕು ಉಂಟಾಯಿತು. ಆದ್ದರಿಂದ ಈಗ ರಸೀತಿ ಪುಸ್ತಕಗಳನ್ನು ಕಳಿಸಲಾಗುವುದಿಲ್ಲ. ಕೇವಲ ಅರ್ಜಿ ಫಾರ್ಮುಗಳನ್ನು ಮಾತ್ರ ಆಯ್ದ ನೇತಾರರಿಗೆ ಕಳಿಸಲಾಗುವುದು. ಕಲ್ಯಾಣ ಕಿರಣದ ಸೆಪ್ಟಂಬರ್ ಸಂಚಿಕೆಯ 24 ಮತ್ತು 25ನೆಯ ಪುಟದಲ್ಲಿ ಅರ್ಜಿಯ ಮಾದರಿ ಇದೆ. ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ

ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು.

8. ಪ್ರತ್ಯೇಕ ರೂಂಗಳ ವ್ಯವಸ್ಥೆ ಬೇಕಾದವರು ಬೇರೆಯಾಗಿ ಹಣವನ್ನು ಮೊದಲೇ ಕಟ್ಟಬೇಕು. ಈ ಹಣವನ್ನು ಸಹ ಪ್ರತಿನಿಧಿ ಶುಲ್ಕ ಅಥವಾ ಅದಕ್ಕೂ ಮೀರಿದ ಕಾಣಿಕೆ ಕೊಡುವವರು ಮೊದಲೇ ಕಳಿಸಬೇಕು. ಏಕೆಂದರೆ ಪ್ರತ್ಯೇಕ ಕೋಣೆಗಳನ್ನು ಮೊದಲೇ ಕಾಯ್ದಿರಿಸಬೇಕಾಗುತ್ತದೆ. ಯಾವ ದಿನಾಂಕದಿಂದ ಯಾವ ದಿನಾಂಕಕ್ಕೆ ಬೇಕು ಎನ್ನುವುದನ್ನು ಸಹ ಮೊದಲೇ ತಿಳಿಸಬೇಕು. ಈ ಬಗ್ಗೆ ಇನ್ನಷ್ಟು ವಿವರಗಳನ್ನು ಅಕ್ಟೋಬರ್ ಕಲ್ಯಾಣ ಕಿರಣದಲ್ಲಿ ಕೊಡಲಾಗುವುದು.

9. ಬೆಂಗಳೂರಿನಿಂದ ದೆಹಲಿಗೆ ಕರ್ನಾಟಕ ಎಕ್ಸ್‌ಪ್ರೆಸ್ (ಪ್ರಯಾಣ 39 ತಾಸು) ಮಾತ್ರವಲ್ಲದೆ ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ವೇಗವಾಗಿ ಮತ್ತು ನೇರವಾಗಿ ಸಾಗಿ ಕೇವಲ 35 ತಾಸುಗಳಲ್ಲಿ ತಲುಪುತ್ತದೆ. ಕರ್ನಾಟಕ ಎಕ್ಸ್‌ಪ್ರೆಸ್ ಬೆಂಗಳೂರಿನಿಂದ ಸಂಜೆ 7-15 ಬಿಟ್ಟು ಒಂದೂವರೆ ದಿನ ಪ್ರಯಾಣಿಸಿ ಬೆಳಿಗ್ಗೆ 10-00 ಕ್ಕೆ ದೆಹಲಿ ತಲುಪುತ್ತದೆ. ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ (ಕರ್ನಾಟಕ ಸಂಪರ್ಕ ಕ್ರಾಂತಿ) ಯಶವಂತಪುರದಿಂದ ರಾತ್ರಿ 10-20ಕ್ಕೆ ಬಿಟ್ಟು ಒಂದೂವರೆ ದಿನ ಪಯಣಿಸಿ ಬೆಳಿಗ್ಗೆ 9 ಗಂಟೆಗೆ ದೆಹಲಿ ತಲುಪುತ್ತದೆ. ಟ್ರೇನುಗಳು ನಯಿದಿಲ್ಲಿ ರೇಲ್ವೆ ಸ್ಟೇಷನ್ ಮತ್ತು ನಿಜಾಮುದ್ದೀನ್ ರೇಲ್ವೆ ಸ್ಟೇಷನ್‌ನಲ್ಲಿ ನಿಲ್ಲುತ್ತವೆ. ಅಲ್ಲಿಂದ ಸಮ್ಮೇಳನ ಸಮಿತಿಯು ವ್ಯವಸ್ಥೆ ಮಾಡಿರುವ ವಸತಿ ಗೃಹಕ್ಕೆ ಹೋಗಬೇಕಾದರೆ ಲೋಕಲ್ ಬಸ್ ಮಾಡಬೇಕಾಗುತ್ತದೆ. ಅದರ ವೆಚ್ಚವನ್ನು ಪ್ರತಿನಿಧಿಗಳೇ ಭರಿಸಬೇಕು. ಕಳೆದ ಸಲ ನಮ್ಮ ಜನರಿಗೆ ಅನುಕೂಲವಾಗಲೆಂದು ನಾವು ಒಂದು ಕಂಪನಿಯ ಜೊತೆ ಮಾತನಾಡಿ ಹಣವನ್ನು ಮೊದಲೇ ಕಟ್ಟಿದ್ದೆವು. ಟ್ರೇನ್ ಇಳಿದು ಜನರು ಗುಂಪು ಗುಂಪಾಗಿ ಬೇರೆ ಆದುದರಿಂದ ಈ ವಿಷಯ ತಿಳಿಸಲು ಆಗಲೇ ಇಲ್ಲ. ಆ ಡ್ರೈವರ್ ಮತ್ತು ಕಂಡಕ್ಟರ್ ಜಗಳವಾಡಿ ಜನರಿಂದ ಪುನಃ ಹಣವನ್ನು ವಸೂಲಿ ಮಾಡಿದ್ದರು. ನಮ್ಮ ಹಣವೂ ಹೋಯಿತು, ಜನರ ಹಣವೂ ಹೋಯಿತು. ಲೋಕಲ್ ಬಸ್‌ಗಳು ರೇಲ್ವೆ ಸ್ಟೇಷನ್ ಹೊರಗೆ ಇರುತ್ತವೆ. ಆಗಲೇ ರೇಟು ಮಾತನಾಡಿ ಉಪಯೋಗಿಸಿಕೊಳ್ಳಬಹುದು. ಮೆಟ್ರೋ ಸ್ಟೇಷನ್‌ಗೆ ಹತ್ತಿರದಲ್ಲೇ ಸಮ್ಮೇಳನ ಸ್ಥಳ, ವಾಸ್ತವ್ಯ ಸ್ಥಳ, ಬಸವ ಮಂಟಪ ಇವೆ. ನಂತರ ಅದರಲ್ಲೇ ಓಡಾಡಬಹುದು. ಆದರೆ ಮೊದಲ ಬಾರಿ ಬಂದಾಗ ಲಗೇಜು ಸಹಿತ ಹತ್ತಲು ಇಳಿಯಲು ಅನಾನುಕೂಲವಾಗುತ್ತದೆ. ಆದ್ದರಿಂದ ಊರಿನಿಂದ ಬಂದ ತಕ್ಷಣ ಬಸ್ಸುಗಳನ್ನು ಕಾಂಟ್ರ್ಯಾಕ್ಟ್ ಮೇಲೆ ಉಪಯೋಗಿಸಿಕೊಳ್ಳುವುದೇ ಒಳ್ಳೆಯದು.

10. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದೆರಡು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲವಾಗುತ್ತದೆ. ಒಂದೆರಡು ದಿವಸ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು. ದೆಹಲಿಯಲ್ಲಿ ಇನ್ನೂ ಚಳಿ ಶುರುವಾಗಿರುವುದಿಲ್ಲ. ಆದ್ದರಿಂದ ಪ್ರತಿನಿಧಿಗಳು ರಗ್ಗು ಮುಂತಾಗಿ ಹೆಚ್ಚಿಗೆ ಲಗೇಜು ತರುವ ಅಗತ್ಯವಿರುವುದಿಲ್ಲ. ಊಟದ ತಟ್ಟೆ, ಲೋಟ ಜೊತೆಗೆ ತಂದರೆ ಒಳ್ಳೆಯದು.

11. ಸಮ್ಮೇಳನ ನಡೆಯುವ ಸ್ಥಳದ ಬಗ್ಗೆ ಅಕ್ಟೋಬರ್ ಕಲ್ಯಾಣ ಕಿರಣದಲ್ಲಿ ವಿವರ ನೀಡಲಾಗುವುದು.

12. ಶರಣ (ಶನಿ)ವಾರ ದಿ.27-10-2007ರಂದು ಬೆಳಿಗ್ಗೆ 10-30ಕ್ಕೆ ಸಮ್ಮೇಳನ ಉದ್ಘಾಟನೆ. ಮಧ್ಯಾಹ್ನ 3-30ರಿಂದ 5-30 ಚಿಂತನಗೋಷ್ಠಿ, ಸಂಜೆ 6-30 ರಿಂದ ಭಾರತೀಯ ಧರ್ಮಗಳ ಒಕ್ಕೂಟದಿಂದ ಚಿಂತನ ಗೋಷ್ಠಿ; ದಿ.28-10-2007 ಬೆಳಿಗ್ಗೆ 10-30 ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆ; ದಿ.29-10-2007ರಂದು ಬಸವ ಮಂಟಪ ಸಂದರ್ಶನ, ಪ್ರಸಾದದ ನಂತರ 3-30ರಿಂದ ಮೆರವಣಿಗೆ ಹಾಗೂ ಪಥ ಸಂಚಲನ; ಸಂಜೆ 6-30ರಿಂದ ಸಮಾರೋಪ ಸಮಾರಂಭ.

13. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನದಲ್ಲಿ ಸ್ಕಾರ್ಫ್‌ಗಳು ಕಳೆದು ಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಧನ ಸಹಾಯಕ್ಕೆ ವಿನಂತಿ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಮಹಾ ಪೋಷಕರು	:	ರೂ 10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	:	ರೂ 5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ಧಾನಿಗಳು	:	ರೂ 3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	:	ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	:	ರೂ 600/-	(ಆರು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	:	ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1. Basava Mahamane Charitable Trust, Payable at BANGALORE.

ಅಥವಾ

2. Basava Mahamane Charitable Trust, Payable at NEW DELHI

ವ್ಯವಹರಿಸುವ ವಿಳಾಸಗಳು :

1. ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ,
ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010, ಕರ್ನಾಟಕ ರಾಜ್ಯ
ದೂರವಾಣಿ: 080-23325335/23131476/ 9449588669

2. Pujya Sri Channabasavananda Swamiji
General Secretary, Basava Mahamane Charitable Trust
Mata Ashram, Basava Mantap, H-3/82,
Bengali Colony, Mahavir Enclave, New Delhi-110045
Ph: 011-64563860, 0-9212627150

ಬಸವ ಮಂಟಪ ಸ್ಥಳ ನಿರ್ದೇಶನ :

ನವ ದೆಹಲಿಯಲ್ಲಿರುವ ಬಸವ ಮಂಟಪವು ಮಹಾವೀರ ಎನ್‌ಕ್ಲೇವ್‌ದ ಬೆಂಗಾಲಿ ಕಾಲೋನಿಯಲ್ಲಿದೆ. ಉತ್ತಮ ನಗರ ಈಸ್ಟ್ ಮೆಟ್ರೋ ಸ್ಟೇಷನ್‌ಗೆ ಸಮೀಪವಾಗುತ್ತದೆ. ಅತ್ಯಂತ ಪ್ರಸಿದ್ಧವಾದ ಸಮೀಪದಲ್ಲಿರುವ ಗುರುತೆಂದರೆ ಸುಲಭ್ ಇಂಟರ್ ನ್ಯಾಷನಲ್ ಸಂಸ್ಥೆಯ ಕೇಂದ್ರ ಕಾರ್ಯಾಲಯ. ವಿಮಾನ ನಿಲ್ದಾಣದ ಕಡೆಯಿಂದ ಬರುವವರು ದ್ವಾರಕ ರಸ್ತೆಯಲ್ಲಿ ಬಂದು, ಪಾಲಮ್ ಫ್ಲೈ ಓವರ್- ದ್ವಾರಕ ಕ್ರಾಸ್ ಬಳಿ ಬಲಕ್ಕೆ ಪಾಲಮ್ -ದಾವಡಿ ರೋಡ್‌ಗೆ ಸೇರಬೇಕು. ಸುಲಭ್ ಇಂಟರ್ ನ್ಯಾಷನಲ್‌ಗೆ ಮೊದಲೇ ಸಿಗುವ ರಸ್ತೆಯಲ್ಲಿ ಎಡಕ್ಕೆ ಬೆಂಗಾಲಿ ಕಾಲೋನಿಗಾಗಿ ಹೊರಳಬೇಕು. ನ್ಯೂ ಡೆಲ್ಲಿ ರೇಲ್ವೆ ಸ್ಟೇಷನ್‌ದಿಂದ (ಸುಮಾರು 20 ಕಿ.ಮಿ) ಬರುವವರು ಮಂಗಲಪುರಿ ರಸ್ತೆಯಲ್ಲಿ ಬಂದು ಸುಲಭ್ ಇಂಟರ್ ನ್ಯಾಷನಲ್ ಆದ ಮೇಲೆ ಬಲಕ್ಕೆ ಹೊರಳಬೇಕು.

ಪರೋಪಕಾರ ಒಂದು ಅಪರಾಧವೆ ?

- ಮಾತಾಜಿ

ಕೆಲವೊಮ್ಮೆ ಕೆಲವು ಜನರು ಮತ್ತು ಅವರ ಹೇಳಿಕೆಗಳ ಅಧಾರದ ಮೇಲೆ ಪತ್ರಿಕೆ, ಟಿ.ವಿ. ಮಾಧ್ಯಮಗಳು ವರದಿ ಮಾಡುವ ರೀತಿ ಸಾರ್ವಜನಿಕರಲ್ಲಿ ಗೊಂದಲ ಹುಟ್ಟಿಸಿ, ವ್ಯಕ್ತಿಗಳ ಬಗ್ಗೆ ತಪ್ಪು ಕಲ್ಪನೆ ಉಂಟು ಮಾಡುತ್ತವೆ. ಮಂಡ್ಯ ಜಿಲ್ಲೆಯಲ್ಲಿ ಆದಿ ಚುಂಚನಗಿರಿ ಮಠದ ಶಾಖಾ ಮಠಕ್ಕೆ ಸಂಬಂಧಿಸಿದ ಒಂದು ವಿದ್ಯಾ ಸಂಸ್ಥೆಯ ಮೇಲ್ವಿಚಾರಕರಾದ ಓರ್ವ ಪೂಜ್ಯರ ಬಗ್ಗೆ ಮತ್ತು ಬೀದರ್ ಜಿಲ್ಲೆಯ ಓರ್ವ ಸ್ವಾಮಿಗಳ ಬಗ್ಗೆ ಅವರು ಯಾರಿಗೋ ಲೈಂಗಿಕ ಕಿರುಕುಳ ನೀಡಿದರು ಎಂದು ಒಮ್ಮೆಲೇ ಸುದ್ದಿಯು ಪ್ರಕಟವಾದಾಗ ಜನರು ಬಗೆ ಬಗೆಯ ಮಾತುಗಳನ್ನಾಡುವುದು ಕೇಳಿ ಬಂದಿತು. ಆದರೆ ಎಷ್ಟೋ ಸಲ ಮಾಧ್ಯಮಗಳು ಸುಳ್ಳು ಕಥೆಗಳನ್ನು ಸೃಷ್ಟಿ ಮಾಡಿ ದೊಡ್ಡ ವ್ಯಕ್ತಿಗಳ ಚರಿತ್ರೆಯನ್ನೇ ಕಲಂಕಗೊಳಿಸಿ, ಅವರ ಬದುಕಿನಲ್ಲಿ ಒಂದು ಕಪ್ಪು ಚುಕ್ಕೆ ಉಳಿಯುವಂತೆ ಮಾಡುತ್ತಾರೆ. ಇದಕ್ಕೆ ಜೀವಂತ ಉದಾಹರಣೆಗಳೆಂದರೆ ಕುಮರೆ ಮೋತಿ ವಿರಕ್ತ ಮಠದ ಸ್ವಾಮಿಗಳ ಪ್ರಕರಣ ಮತ್ತು ಗೌರಿ ಶಂಕರ ಸ್ವಾಮಿಗಳ ಪ್ರಕರಣ. ಒಂದು ದೊಡ್ಡ ಕುತಂತ್ರ ಜಾಲಕ್ಕೆ ಬಲಿಯಾದ ಗೌರಿ ಶಂಕರ ಸ್ವಾಮಿಗಳ ಪ್ರಕರಣದ ಬಗ್ಗೆಯಂತೂ ಕೇಳಿದವರೆಲ್ಲ ಇಂದಿಗೂ ಮರಮರ ಮರುಗಿ ಒಂದು ಹನಿ ಕಣ್ಣೀರು ಉದುರಿಸದೆ ಇರರು.

ಇತ್ತೀಚೆಗೆ ನಮ್ಮ ಸಂಸ್ಥೆಯ ಅನಾಥಾಲಯ ಕುರಿತು ಮಾಧ್ಯಮವು (ಮುಖ್ಯವಾಗಿ ಟಿ.ವಿ 9 ಚಾನಲ್) ಮಾಡಿದ (ಅಪ) ಪ್ರಚಾರವಂತೂ ಪೂರ್ವಾಗ್ರಹ ಪೀಡಿತ ವರದಿಯ ಪ್ರಸಾರವಾಗಿತ್ತು. ಘಟನೆಯ ಸಾರಾಂಶ ಹೀಗಿದೆ. ನಮ್ಮ ಟ್ರಸ್ಟ್ ವತಿಯಿಂದ ಐದು ಅನಾಥಾಲಯ/ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಗಳು ನಡೆಯುತ್ತಲಿವೆ. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಕ್ಷಣದ ಸಮಸ್ಯೆ ಒಂದು ಕಡೆ; ಕುಡುಕ ತಂದೆ ಅಥವಾ ಅನ್ಯ ಪುರುಷನೊಂದಿಗೆ ಓಡಿ ಹೋದ ತಾಯಿ, ಅಕಾಲ ಮೃತ್ಯುವನ್ನಪ್ಪಿದ ತಾಯಿ ತಂದೆ, ಕರಾಳ ಬಡತನ - ಹೀಗೆ ಒಂದೇ ಎರಡೇ ಹತ್ತಾರು ಸಮಸ್ಯೆಗಳು.

ಸ್ವಭಾವತಃ ಅಧ್ಯಾತ್ಮಿಕ ಪ್ರವೃತ್ತಿಯ ನಮಗೆ ಮತ್ತು ನಮ್ಮ ಸಾಧಕ ವೃಂದಕ್ಕೆ ಸಾಧನೆ ಮತ್ತು ಪ್ರವಚನ ಮಾಡುವುದರಲ್ಲೇ ಆಸಕ್ತಿ . ಹೀಗಾಗಿ ಶಾಲೆ, ಕಾಲೇಜು, ಅನಾಥಾಲಯ ಇವೆಲ್ಲ ವ್ಯವಹಾರ (Worldly affair)ವಾದ್ದರಿಂದ ಅವುಗಳ ಗೊಡವೆ ಬೇಡ ಎಂದು ಈ ಯಾವನ್ನೂ ಆರಂಭಿಸಿರಲಿಲ್ಲ. ನಾಲ್ಕು ವರ್ಷಗಳ ಹಿಂದೆ ಸ್ವಲ್ಪ ಬದಲಾವಣೆ - ವಿಚಾರಧಾರೆಯಲ್ಲಿ ಕಂಡಿತು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮ ಸೇವೆ, ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೆ; ಲಿಂಗದ ಬಾಯಿ ಜಂಗಮ ಇತ್ಯಾದಿ ಧರ್ಮಪಿತರ ದಿವ್ಯ ವಾಣಿಯಿಂದ ಪ್ರಭಾವಿತರಾದ ನಾವು ಸಾಮಾಜಿಕ ಸಂಕಷ್ಟಕ್ಕೆ ಸ್ಪಂದಿಸಬೇಕೆಂದು 4 ವರ್ಷಗಳ ಹಿಂದೆ ಅನಾಥಾಲಯಗಳನ್ನು ಬೆಂಗಳೂರು (ಕುಂಬಳಗೋಡು), ಧಾರವಾಡ, ಕೂಡಲ ಸಂಗಮ, ಬೀದರ್, ಬಸವ ಕಲ್ಯಾಣ ಮುಂತಾದಲ್ಲಿ ತೆರೆದೆವು. ಜಾತಿ ಮತ ಪಂಥ ಭೇದವಿಲ್ಲದೆ ಮಕ್ಕಳಿಗೆ ಪ್ರವೇಶ ನೀಡಿದೆವು. ಎಲ್ಲ ಕಡೆ ಸಾಧಕ ಪ್ರವೃತ್ತಿಯ ಸನ್ಯಾಸಿಗಳು, ಮಾತೆಯರುಗಳೇ ಅನಾಥಾಲಯಗಳನ್ನು ನೋಡಿಕೊಳ್ಳುತ್ತಿದ್ದಾರೆ. ಎಲ್ಲ ಕಡೆಯಲ್ಲೂ ನಮ್ಮ ಅನಾಥಾಲಯಗಳ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ. ಸರ್ಕಾರದಿಂದ ಇನ್ನೂ ಗ್ರ್ಯಾಂಟ್ ತೆಗೆದು ಕೊಂಡಿಲ್ಲವಾದರೂ ಸಹೃದಯರು ಕೊಡುವ ದೇಣಿಗೆಯಿಂದ, ಬಸವ ಗಂಗೋತ್ರಿಯಲ್ಲಿ ಮಾರಿದ ಸೈಟುಗಳ ಹಣದಿಂದ ಅನಾಥಾಲಯಗಳ ಖರ್ಚು -ವೆಚ್ಚ ನಿಭಾಯಿಸುತ್ತಿದ್ದೇವೆ. ನಿರ್ಗತಿಕ ಮಕ್ಕಳಂತೆ ನೋಡಿಕೊಳ್ಳದೆ ಅತ್ಯಂತ ಪ್ರೀತಿ ವಾತ್ಸಲ್ಯಗಳಿಂದ ನೋಡಿಕೊಳ್ಳಲಾಗುತ್ತಿದೆ. ಶಾಲೆಯ ಯೂನಿಫಾರ್ಮ್ ಅಲ್ಲದೆ ದಾನಿಗಳಾದ ಹೈದರಾಬಾದಿನ ಶರಣ. ಧನರಾಜ ಜೀರಗೆಯವರು ನೀಡಿರುವ ವಿಶೇಷ ಬಟ್ಟೆಗಳ ಯೂನಿಫಾರ್ಮ್ ಹೊಲಿಸಲಾಗಿದೆ. ನಮ್ಮ ಅನಾಥಾಲಯದ ಮಕ್ಕಳಿಗೆ ಒದಗಿಸಿರುವ ಸೌಲಭ್ಯ, ಪ್ರತಿಭಾ ಕಾರಂಜಿಯಲ್ಲಿ ಅವರ ಸಾಧನೆ, ಶಾಲೆಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳಗಳಿಕೆ - ಹೀಗೆ ಎಲ್ಲದರಲ್ಲೂ ನಮ್ಮ ಅನಾಥಾಲಯಗಳ ಮಕ್ಕಳಿಂದ ಒಳ್ಳೆಯ ಹೆಸರು ಪಡೆದಿದ್ದೇವೆ.

ಹೀಗಿರುವಾಗ ಇತ್ತೀಚೆಗೆ ಬಸವ ಗಂಗೋತ್ರಿ ಅನಾಥಾಲಯದಲ್ಲಿ ಎಸ್.ಎಸ್.ಎಲ್.ಸಿ ಓದುತ್ತಿದ್ದ ಆಶಾ ಎಂಬ ಒಬ್ಬ ಬಾಲಕಿ - 15 ವರ್ಷದವಳು ನಮ್ಮ ತೋಟದ ಆವರಣದಲ್ಲಿದ್ದ ಬಾವಿಗೆ ಬಿದ್ದು ದೊಡ್ಡ ಸುದ್ದಿ ಮಾಡಿದ್ದಲ್ಲದೆ ಸಂಸ್ಥೆಯ ಹೆಸರು ಕೆಡಲು ಕಾರಣಳಾದಳು, ನಮ್ಮ ಸಂಸ್ಥೆಯ ಬಗ್ಗೆ ದ್ವೇಷ, ಅಸಹನೆ ಇದ್ದ ಕೆಲವರು ವಿಪರೀತ ಸುಳ್ಳು ಸುದ್ದಿ ಸೃಷ್ಟಿಸಿ ಟಿ.ವಿ 9 ಚಾನಲ್‌ನಲ್ಲಿ ಪ್ರಚಾರ ಮಾಡಿಸಿದರು. ಲೈಂಗಿಕ ಕಿರುಕುಳ ನೀಡಲಾಯಿತು. ಅದಕ್ಕೇ ಆತ್ಮಹತ್ಯೆ ಮಾಡಿಕೊಂಡಳು ಎಂದು, ಅನಾಥಾಲಯದ ಮೇಲ್ವಿಚಾರಕರಾದ ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಅವರು ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದರೆಂದು - ಹೀಗೆಲ್ಲ ಬಗೆ ಬಗೆಯ ಸುದ್ದಿ ಹಬ್ಬಿಸಲಾಯಿತು. ಮೇಲ್ವಿಚಾರಕರಿಂದ ಹಿಡಿದು ಅಡಿಗೆಯವರ ವರೆಗೆ ಕೇವಲ ಹೆಣ್ಣು ಮಕ್ಕಳೇ ಇರುವ ಅನಾಥಾಲಯ ಅದು. ಪೂಜ್ಯ ಮಾತೆ ಕಸ್ತೂರಿದೇವಿ ದೈಹಿಕವಾಗಿ ಅಂಗವಿಕಲರು, ದುರ್ಬಲರು. ಅವರು ದೈಹಿಕ ಕಿರುಕುಳ ನೀಡಲು ಸಾಧ್ಯವೆ ? ಎಲುವಿಲ್ಲದ ನಾಲಿಗೆ ಹಲವನ್ನು ನುಡಿಯಿತು ಎಂಬಂತೆ ಟಿ.ವಿ. 9 ಚಾನಲ್ ಮತ್ತು ಕೆಲವು ಪತ್ರಿಕೆಗಳು ಸ್ಫೋಟಕ ಸುದ್ದಿ ಪ್ರಕಟಿಸಿ ಜನರ ಗಮನ ಸೆಳೆಯಲೋಸುಗ ಏನೇನೋ ಸೃಷ್ಟಿಸಿ ವರದಿ ಮಾಡಿದರು.

ವಾಸ್ತವ ಸಂಗತಿ ಎಂದರೆ ಆಶಾ ಎಂಬ ಆ ಹುಡುಗಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹುಡುಗನೊಡನೆ ಪ್ರೇಮ

ಸಂಬಂಧ ಬೆಳೆಸಿದ್ದಳಂತೆ. ಆಕೆಯ ವರ್ತನೆಯಿಂದ ಬೇಸತ್ತ ಎಲ್ಲರೂ ಬುದ್ಧಿ ಹೇಳಿದ್ದಲ್ಲದೆ ಶಾಲೆಯಲ್ಲಿ ಟೀಚರ್ ಕೂಡ ಬೈದಿದ್ದರಂತೆ. 'ಈ ವಯಸ್ಸಿಗೆ (15ವರ್ಷ) ಹೀಗೆಲ್ಲ ಪ್ರೀತಿ -ಪ್ರಣಯ ಎಂದು ವಿದ್ಯಾಭ್ಯಾಸ ಹಾಳು ಮಾಡಿಕೊಳ್ಳಬೇಡ.' ಎಂದು ಅಡಿಗೆ ಮಾಡುವ ರೇವಮ್ಮ ಎಂಬ ಮಹಿಳೆ ಕೂಡ ಬುದ್ಧಿ ಹೇಳಿದ್ದಳಂತೆ. ಆಕೆಯ ತಾಯಿಯನ್ನು ಕರೆಸಿ ಮಗಳ ವರ್ತನೆ ವಿವರಿಸಿ ವಾಪಸ್ಸು ಕರೆದೊಯ್ಯಲು ತಿಳಿಸಿದ್ದರಂತೆ. ಎಸ್.ಎಸ್.ಎಲ್.ಸಿ ಆಗುವವರೆಗೆ ಇರಿಸಿಕೊಳ್ಳಿರಿ ಎಂದು ಅವರ ತಾಯಿ ದುಂಬಾಲು ಬಿದ್ದುದರಿಂದ ಮತ್ತು ಆ ಹುಡುಗಿ ಕ್ಷಮೆ ಕೇಳಿ ಇನ್ನು ಮುಂದೆ ಹಾಗೆ ಮಾಡುವುದಿಲ್ಲ ಎಂದುದರಿಂದ, ಕ್ಷಮಿಸಿ ಇರಿಸಿಕೊಂಡರಂತೆ. ಆದರೆ ಆ ಹುಡುಗನನ್ನು ಕೆಲಸ ಬಿಡಿಸಿ ಕಳಿಸಿ ಸಮಸ್ಯೆಗೆ ಪರಿಹಾರ ಕಂಡುಕೊಂಡರಂತೆ. ಆದರೆ ಅವನು ಹೊರಗೆ ಹೋದ ಬಳಿಕವೂ ಅವರಿಬ್ಬರ ಸಂಭಾಷಣೆ ದೂರವಾಣಿ ಮೂಲಕ ಸಾಗುತ್ತಿತ್ತಂತೆ. ಒಂದು ದಿವಸ ಫೋನ್ ಬಂದ ಬಳಿಕ ಮಂಕಾದ ಹುಡುಗಿ ಮರುದಿನ ರಾತ್ರಿ ಎದ್ದು ಹೋಗಿ ಬಾವಿಗೆ ಬಿದ್ದಿದ್ದಾಳೆ. ಇಂಥ ಪ್ರೇಮ ಭಗ್ನ ಪ್ರಸಂಗ ಎಷ್ಟು ನಡೆಯುವುದಿಲ್ಲ? ನಮ್ಮ ನೇತೃತ್ವದಲ್ಲಿ ಐದಾರು ಸಂಸ್ಥೆಗಳು ನಡೆಯುತ್ತಿವೆ. ಎಲ್ಲೋ ಒಂದು ಕಡೆ ಒಬ್ಬ ಸಾಮಾನ್ಯ ಹುಡುಗಿ ತಪ್ಪು ಮಾಡಿ, ಸತ್ತರೆ ಅದಕ್ಕೆ ನಾನು ಹೇಗೆ ಹೊಣೆಯಾಗುತ್ತೇನೆ ? ಟಿ.ವಿ.9ದವರು ನನ್ನ ಹೆಸರನ್ನು ಹೇಳಿ ಹೇಳಿ ಪುನಃ ಪುನಃ ಅಪಪ್ರಚಾರ ಮಾಡಿದ್ದರಲ್ಲಿ ದುರುದೇಶ ಮಾತ್ರವಲ್ಲ ಕಾಣದ ಕೈಗಳ ಕೈವಾಡವಿದೆ ಎಂದು ಊಹಿಸಬಹುದು. ಸತ್ತ ಹುಡುಗಿಯ ತಾಯಿ, ತಾತ ಬಂದು ಬಾಯಿಗೆ ಬಂದಂತೆ ಮಾತಾಡುತ್ತ ತಮ್ಮ ಮಗಳನ್ನು ಕೊಲ್ಲಲಾಗಿದೆ ಎಂದು, 5-6 ಲಕ್ಷ ರೂಗಳ ಪರಿಹಾರ ಕೊಡಬೇಕೆಂದು ವ್ಯಾಪಾರಕ್ಕೆ ತೊಡಗಿದ್ದರು. ಅವರ ಮನೆಯಲ್ಲೇ ಪ್ರೇಮ ಪ್ರಕರಣದಲ್ಲಿ ಹತಾಶಳಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರೆ ? ಅವರ ವರ್ತನೆ ಬಗ್ಗೆ ಕೇಳಿ ಅಸಹ್ಯವೆನಿಸಿತು. ಇವರ ಮಕ್ಕಳಿಗೆ ವರ್ಷಗಟ್ಟಳೆ ಊಟ ಬಟ್ಟೆ ಕೊಟ್ಟು ಸಾಕಿ ಶಿಕ್ಷಣ ನೀಡಿ, ಅವಳೇ ತಪ್ಪು ಮಾಡಿ ಆತ್ಮಹತ್ಯೆ ಮಾಡಿಕೊಂಡರೆ ಅದನ್ನು ಅರಿತು, ಪಶ್ಚಾತ್ತಾಪ ಪಡುವ ಮನೋಭಾವವಿಲ್ಲವಲ್ಲ ಎಂದು ಖೇದವೆನಿಸಿತು.

ಅನಾಥಾಲಯ ಬೇಡವೇ ಬೇಡ

ದಿ. 7-9-207ರಂದು ಟಿ.ವಿ.9ದವರು ಅಪಪ್ರಚಾರ ಮಾಡುತ್ತಲೇ, ಹೈದರಾಬಾದಿನಲ್ಲಿ ಪ್ರವಚನ ಮಾಡುತ್ತಿದ್ದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಗೋಕಾಕಿನಲ್ಲಿ ಪ್ರವಚನ ಮಾಡುತ್ತಿದ್ದ ಪೂಜ್ಯ ಶ್ರೀ ಮಾತೆ ಸತ್ಯಾದೇವಿ ನೊಂದುಕೊಂಡು ಫೋನ್ ಮಾಡಿದರು. 'ನಾವು ಎಷ್ಟು ಕಷ್ಟ ಪಟ್ಟು ದುಡ್ಡು ಎತ್ತಿ ತಂದು ಈ ಮಕ್ಕಳನ್ನು ಸಾಕಿದೆವು. ಎಂಥಾ ಗೌರವಾಭಿಮಾನ ನಮ್ಮ ಅನಾಥಾಲಯಗಳ ಬಗ್ಗೆ ಹುಟ್ಟಿದ್ದವು' ಎಂದರು. ಮಾತೆ ಸತ್ಯಾದೇವಿಯಂತೂ, 'ನಾನಂತೂ ಊಟ ನಿದ್ರೆ ಮರೆತು ಅನಾಥ ಬಡ ಮಕ್ಕಳ ಆರೈಕೆ ಮಾಡುತ್ತಿದ್ದೇನೆ. ನಾಳೆ ಬೆಳಿಗ್ಗೇನೆ ಹೋಗಿ ಎಲ್ಲ ಮಕ್ಕಳನ್ನು ಮನೆಗೆ ಕಳಿಸಲು ಏರ್ಪಾಡು ಮಾಡಿ ಅನಾಥಾಲಯ ಮುಚ್ಚಿಬಿಡುತ್ತೇನೆ'. ಎಂದು ಅಳುತ್ತಾ ಹೇಳಿದರು. ಬಹಳ ಜನ ಅದರಲ್ಲೂ ಧಾರವಾಡ ಶರಣರು, 'ಅನಾಥಾಲಯದ ಜವಾಬ್ದಾರಿ ಯಾಕೆ ಹಾಕಿಕೊಂಡಿರಿ? ಬರೀ ಧರ್ಮ ಪ್ರಚಾರವೇ ಸಾಕಾಗಿತ್ತು. ಈ ಜವಾಬ್ದಾರಿಯಿಂದ ಪೂಜ್ಯ ಮಾತೆ ಸತ್ಯಾದೇವಿಯವರ ಪ್ರವಚನ ಪ್ರತಿಭೆ ವ್ಯರ್ಥವಾಗುತ್ತದೆ'. ಎಂದು ಆಗಲೇ 2-3 ಸಲ ತಕರಾರು ಮಾಡಿದ್ದರು.

ನಾನು ಹೇಳಿದೆ, 'ಇರಲಿ, ಉದ್ವಿಗ್ನವಾಗಬೇಡಿರಿ. ಒಂದು ಟಿ.ವಿ.9 ಚಾನಲ್ ಅಪಪ್ರಚಾರ ಮಾಡಿದ ಮಾತ್ರಕ್ಕೆ ಏನೋ ಅನಾಹುತವಾಯಿತು ಎಂದುಕೊಳ್ಳಬಾರದು' ಮಾಡಿದ ಒಳ್ಳೆಯ ಕಾರ್ಯಕ್ಕೆ ಬೆಲೆ ಇದ್ದೇ ಇರುತ್ತದೆ. ಅಕ್ಟೋಬರ್‌ದಲ್ಲಿ ಶಾಲೆಗಳಿಗೆ ರಜೆ ಬರುತ್ತದೆ. ಅಲ್ಲಿಯವರೆಗೆ ಆಲೋಚಿಸೋಣ. ಮುಚ್ಚಲೇ ಬೇಕು ಎಂದು ನೀವೆಲ್ಲ ಆಗ್ರಹಿಸುವುದಾದರೆ ರಜೆಗೆ ಮಕ್ಕಳನ್ನು ಕಳಿಸುವಾಗ ರಜೆಯ ನಂತರ ಬೇರೆ ಕಡೆ ಸೇರಿಸಿಕೊಳ್ಳಿಸಿ ಎಂದು ಪಾಲಕರಿಗೆ ಹೇಳಲು ಬರುತ್ತದೆ' ಎಂದು. ಹೆಣ್ಣು ಮಕ್ಕಳ ಸ್ವಾವಲಂಬನೆಯ ಬದುಕಿಗೆ ಆಸರೆಯಾಗಲು ಕನಿಷ್ಠಪಕ್ಷ ಮ್ಯಾಟ್ರಿಕ್‌ವರೆಗಾದರೂ ಓದಲು ಅವಕಾಶ ಮಾಡಿಕೊಡಬೇಕು ಎಂದು ನಮ್ಮ ಹಂಬಲ. ಆದರೆ ಇಂದಿನ ಚಲನ ಚಿತ್ರ, ಟಿ.ವಿ. ಸಂಸ್ಕೃತಯಿಂದ 8-9ನೆಯ ತರಗತಿಯ ಹುಡುಗಿಯರು ಪ್ರೇಮದ ಚೇಷ್ಟೆಗಳನ್ನು ಆರಂಭಿಸುತ್ತಾರೆ. ಅಂಥ ಹೆಣ್ಣು ಮಕ್ಕಳನ್ನು ಕಾಯುವುದು ಎಷ್ಟು ಕಷ್ಟ ಮದುವೆಯಾಗಿ ಸಾಕುವ ಶಕ್ತಿ ಇಲ್ಲದಿದ್ದರೂ ಕೆಲವು ಹುಡುಗರ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳನ್ನು ಪ್ರೇಮ ಭ್ರಾಂತರನ್ನಾಗಿ ಮಾಡುತ್ತಾರೆ. ಮೊಬೈಲ್ ಫೋನ್‌ಗಳು ಬಂದ ಮೇಲಂತೂ ಪ್ರೇಮ ಸಲ್ಲಾಪಕ್ಕೆ ಹೆಚ್ಚಿನ ಅವಕಾಶ ಸಿಕ್ಕಿದೆ. ಅನಾಥಾಲಯ ನಡೆಸುವುದೇ ಆದರೂ ಹೆಣ್ಣು ಮಕ್ಕಳಿಗೆ ಕೇವಲ 7ನೆಯ ತರಗತಿಯವರೆಗೆ ಮಾತ್ರ ಎಂದು ನಾನು ಆಲೋಚಿಸಿದ್ದೇನೆ.

ನಮ್ಮ 5 ಅನಾಥಾಲಯಗಳು ಅತ್ಯಂತ ಸಮರ್ಪಕವಾಗಿ ನಡೆಯುತ್ತಿದ್ದರೂ ಒಂದು ಪತ್ರಿಕೆ ಅಥವಾ ಟಿ.ವಿ.ಚಾನಲ್‌ದವರು, ಬಂದು ಅವುಗಳ ಕಾರ್ಯ ಚಟುವಟಿಕೆಯನ್ನು ಪ್ರಸಾರ ಮಾಡಲಿಲ್ಲ. ಅದೇ ಹುಡುಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡರೆ ಒಂದು ಪತ್ರಿಕೆಯವರೂ ಬಿಡದೆ, ಒಂದು ಟಿ.ವಿ.ಚಾನಲ್‌ನವರೂ ಮರೆಯದೆ ಬಂದು ವರದಿ ಮಾಡಿದರು. ಇದು ಭಾರತೀಯ ಪತ್ರಿಕೋದ್ಯಮ ಮತ್ತು ವಿದ್ಯುನ್ಮಾನ ಜಗತ್ತಿನ ಚಿಂತನೆಯ ದಿಕ್ಕು ! ಅನಾಥಾಲಯಗಳನ್ನು ಮುಚ್ಚಿದರೆ ಎಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗುವರು, ನಿರಾಶ್ರಿತರಾಗುವರು ಎಂಬ ಪರಿಜ್ಞಾನ ಸಹಿತ ಇಲ್ಲದೆ ಬೇಜವಾಬ್ದಾರಿಯಿಂದ ಪೀತ ಪತ್ರಿಕೆ ಮತ್ತು ಕುಸಂಸ್ಕೃತಿಯ ಚಾನಲ್‌ಗಳು ವರ್ತಿಸುತ್ತವೆ.

ಈ ಕಲ್ಯಾಣ ಕಿರಣದ ಓದುಗರಿಗೆ, ನಮ್ಮ ಸಂಸ್ಥೆಯ ಅಭಿಮಾನಿಗಳಿಗೆ ಒಂದು ಪ್ರಶ್ನೆ 'ಅನಾಥಾಲಯಗಳನ್ನು ನಾವು ಮುಂದುವರಿಸಬೇಕೋ ನಿಲ್ಲಿಸಬೇಕೋ? ಅಧ್ಯಾತ್ಮ ಜೀವಿಗಳು, ತ್ಯಾಗಿಗಳೂ ಆದ ಮಾತೆ ಸತ್ಯಾದೇವಿ. ಮಾತೆ ಕಸ್ತೂರಿದೇವಿಯಂಥವರು ಎಷ್ಟೆಲ್ಲ ಶ್ರಮಪಟ್ಟೂ ವಿನಾ ಕಾರಣ ದೂಷಣೆಗೆ ಒಳಗಾಗುವುದು ಸೂಕ್ತವೆ?' ಈ ಬಗ್ಗೆ ಓದುಗರ ಅಭಿಪ್ರಾಯ, ಸಲಹೆ ಸೂಚನೆ ಬರೆದು ಕಳಿಸಿರಿ.

ಬಂಜಗೆರೆಯ ಭೂತಚೇಷ್ಟೆ

(ಮುಂದುವರಿದ ಭಾಗ....2..)

- ಮಾತಾಜಿ

(ಆಗಸ್ಟ್ 2007 ರ ಸಂಚಿಕೆಯಿಂದ ಮುಂದುವರಿದಿದೆ. (ಆಗಸ್ಟ್ ಸಂಚಿಕೆಯ ಲೇಖನದಲ್ಲಿ ಪುಟ 40, 41 ರ ನಂತರ 42, 43, 44, 45 ಬರದೆ ಪುಟ ಜೋಡಣೆಯಲ್ಲಿ ತಪ್ಪಾಗಿದೆ. ಸರಿ ಪಡಿಸಿ ಓದಿಕೊಳ್ಳಬೇಕು.)

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ (ಮಹಾ) ಮನೆಯ ಮಗನೆಂದೆನಿಸಯ್ಯ.

ಎಂಬ ವಚನವಿದೆ. ಇದಕ್ಕೆ ಹಲವರು ಹಲವು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ ಅದು ಇವನಾರವ ಅಲ್ಲ, ಇವ ಹಾರುವ ಎಂದು ದೂರವಿಡದೆ ಇವ ನಮ್ಮವ ಎಂದು ಅಭಿಮಾನದಿಂದ ಕಾಣಿರಿ ಎಂದು ಬಸವಣ್ಣನವರು ದೈನ್ಯತೆಯಿಂದ ಬೇಡಿಕೊಂಡಿದ್ದಾರೆ ಎಂಬುದು ಒಂದು ವ್ಯಾಖ್ಯಾನ. ಬಸವಣ್ಣನವರು ದಲಿತರು, ನಿಮ್ನ ವರ್ಗದವರು ಇದ್ದುದರಿಂದ ಅವರನ್ನು ಇತರರು ಗೌರವಿಸುತ್ತಿರಲಿಲ್ಲ. ಅದಕ್ಕಾಗಿ ಅವರು ಇವನಾರವ ಎಂದು ಯಾರೂ ಭೇದಭಾವದಿಂದ ತಿರಸ್ಕರಿಸದೆ ಇವನಮ್ಮವ ಎಂದು ಆದರಿಸುವಂತೆ ಮಾಡು ಎಂದು ದೇವರಲ್ಲಿ ಬೇಡಿ ಕೊಂಡಿದ್ದಾರೆ ಎಂಬುದು ಇನ್ನೊಂದು ವ್ಯಾಖ್ಯಾನ. ಇವೆರಡೂ ಕುಚೋದ್ಯದ, ಬಸವಣ್ಣನವರನ್ನು ಅವಮಾನ ಪಡಿಸುವ, ಅಪಾರ್ಥ ಮಾಡಿದ ವ್ಯಾಖ್ಯಾನಗಳು.

ಗುರು ಬಸವಣ್ಣನವರು ಶರಣರೆಲ್ಲರ ಪ್ರಾಣವಾಗಿದ್ದರು. ಅವರನ್ನು ಗೌರವಿಸುವ ಸ್ತುತಿಪರ ವಚನಗಳು ನೂರಾರು. ಇವನ್ನೆಲ್ಲ ಬಸವ ದರ್ಶನ ಎಂಬ ಪುಸ್ತಕದಲ್ಲಿ ನಾನು ಸಂಗ್ರಹಿಸಿದ್ದೇನೆ. ಜಗತ್ತಿನಲ್ಲಿ ಯಾವ ಪ್ರವಾದಿಯೂ ತನ್ನ ಸಮಕಾಲೀನರಿಂದ ಅಷ್ಟೊಂದು ಸ್ತುತಿಸಿಕೊಂಡಿಲ್ಲ. ಅದೂ ಸಾಮಾನ್ಯ ಅನುಯಾಯಿಗಳಿಂದಲ್ಲ ದಾರ್ಶನಿಕ ದಿಗ್ಗಜರಾದ ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮೇಶ್ವರರಂತಹವರಿಂದ ಸ್ತುತಿಸಿಕೊಂಡಿದ್ದಾರೆ .

ಈ ವಚನದಲ್ಲಿ ಬಸವಣ್ಣನವರು ವಿಶ್ವಭ್ರಾತೃತ್ವ (Universal brotherhood)ವನ್ನು ಸಾರಿದ್ದಾರೆ. ಸಾಮಾನ್ಯವಾಗಿ ಅವರು ಇನ್ನೊಬ್ಬರಿಗೆ ಬೋಧೆ ಮಾಡುವ ಶೈಲಿಯಲ್ಲಿ ಹೇಳದೆ ತಮಗೇ ಸಂಬೋಧಿಸಿಕೊಳ್ಳುವ ಶೈಲಿಯನ್ನು ಪ್ರಯೋಗಿಸುವರು. ನಿಮ್ಮ (ಮಹಾ) ಮನೆಯ ಮಗನೆಂದೆನಿಸಯ್ಯ ಎಂಬ ಮಾತು ಗಮನಾರ್ಹ. ದೇವರಲ್ಲಿ ನಿಮ್ಮ (ಮಹಾ)ಮನೆಯಾದ ಈ ಜಗತ್ತಿನ ಮಗನೆಂದು ಎನ್ನಿಸಿ ಎಂದಿದ್ದಾರೆ. ಮೇಲಿನ ವ್ಯಾಖ್ಯಾನದಂತೆ ದೈನ್ಯತೆಯಿಂದ ಬೇಡುವುದಾಗಿದ್ದರೆ ನಿಮ್ಮ ಶರಣರ ಮನೆಯ ಮಗನಾಗಿಸು ಎನ್ನುತ್ತಿದ್ದರು. ದೇವರ ಮಹಾಮನೆಯಾದ ಈ ಜಗತ್ತಿನ ಮಗ, ವಿಶ್ವ ಕುಟುಂಬಿಯಾಗುವ ಹಂಬಲ ಹೊಂದಿರುವುದೇ ಅಲ್ಲದೆ, ಬಸವಣ್ಣನವರು ಇತರರಿಗಾಗಿ ಇವನಾರವ ಎಂದು ಯಾರನ್ನೂ ದೂರವಿಡದೆ ಇವನಮ್ಮವ ಎಂದು ಆದರಿಸಿ ವಿಶ್ವ ಕುಟುಂಬಿಯಾಗುವ ತತ್ವವನ್ನು ಬೋಧಿಸುತ್ತಾರೆ.

ಗುರು ಬಸವಣ್ಣನವರ ಮಾತಾಪಿತೃಗಳು

ಗುರು ಬಸವಣ್ಣನವರ ತಂದೆ ಶೈವಾಗಮಾಚಾರ್ಯನಾದ ಬಾಗೇವಾಡಿಯ ಪುರವರಾಧೀಶ್ವರ ಮಾದರಸ, ಮಾದಿರಾಜ, ತಾಯಿ ಮಾದಲಾಂಬಿಕೆ. ಬಂಜಗೆರೆ ಈ ಹೆಸರಿನಲ್ಲಿ ಬರುವ ಮಾದರ ಎಂಬ ಅಕ್ಷರಗಳನ್ನು ಪ್ರಸ್ತಾಪಿಸಿ ಇವು ಮಾದಿಗರ ಹೆಸರು ಎಂದು ಕುತರ್ಕ ಮಾಡಿದ್ದಾರೆ. ಬ್ರಹ್ಮ ಎಂಬ ಪದ ಬೊಮ್ಮ ಎಂದು ಕನ್ನಡ ಅಥವಾ ದ್ರಾವಿಡ ಭಾಷಾರೂಪವನ್ನು ತಾಳುವಂತೆ ಮಹಾದೇವ ಎಂಬುದು ಮಾದ ಎಂದು ಪರಿವರ್ತಗೊಳ್ಳುವುದು. ಉದಾ: ಮಲೆಯ ಮಹದೇಶ್ವರ ಎಂಬ ಹೆಸರು ಮಹದೇವ, ಮಾದಯ್ಯ, ಮಾದಪ್ಪ ಆಗಿರುವುದನ್ನು ಕಾಣಬಹುದು. ಶಿಷ್ಟ ಭಾಷೆಯ ಮಹದೇವರಸ ಮಾದರಸ, ಮಾದಿರಾಜ, ಎಂದು ರೂಢಿಗೆ ಬಂದಿದೆ. ಕನ್ನಡ ನಾಡಿನಲ್ಲಿ ಮಾದರಸ, ಮಾದಿರಾಜ, ಬಸವರಸ ಹೆಚ್ಚಾಗಿ ರೂಢಿಯಲ್ಲಿಲ್ಲದಿದ್ದರೂ ಆಂಧ್ರ ನಾಡಿನ ಕಮ್ಮೆ ಬ್ರಾಹ್ಮಣರಲ್ಲಿ ಬಹು ಪರಿಚಿತವಾಗಿವೆ. ಇನ್ನು ಕೆಲವರು ಆಂಧ್ರದ ಕಮ್ಮಾ ಜಾತಿಯ ಜೊತೆಗೆ ಸಮೀಕರಿಸಿ, ಅವರು ಶೂದ್ರರು ಎಂದು ಕರೆದಿದ್ದಾರೆ. ಅಧಿಕೃತ ಮೂಲಗಳಿಂದ ಈಗ ನಮಗೆ ಕಮ್ಮೆ ಬ್ರಾಹ್ಮಣ ಜನಾಂಗ ಆಂಧ್ರದಲ್ಲಿದ್ದು ಗುರು ಬಸವಣ್ಣನವರ ಪೂರ್ವಜರು ಅಲ್ಲಿಂದ ವಲಸೆ ಬಂದವರು ಎಂಬ ಮಾಹಿತಿ ದೊರೆತುದರಿಂದ ಹಲವಾರು ಸಂದೇಹಗಳು ನಿವಾರಣೆಯಾಗಿವೆ. ಪಾಲ್ಕುರಿಕೆ ಸೋಮನಾಥ, ಹರಿಹರ, ಭೀಮಕವಿ ಮುಂತಾದ ಎಲ್ಲರೂ ಬಸವಣ್ಣನವರ ತಂದೆ ಶಿವಶಾಸ್ತ್ರ ಆಗಮ ಪ್ರವೀಣ ಮಾದರಸ, ತಾಯಿ ಸದಾಚಾರ ಸಂಪನ್ನೆಯಾದ ಮಾದಲಾಂಬಿಕೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಾಗಿ ಮಣಿಗವಳ್ಳಿಯ ಶಾಸನ ಪ್ರಸ್ತಾಪಿಸುವ ಚಂದ್ರರಸ, ಚಂದ್ರಾಂಬಿಕೆ ಮತ್ತು ಅವರ ಮಗ ಬಸವನೇ ಬೇರೆ. ಅರ್ಜುನವಾಡ ಶಾಸನ ಪ್ರಸ್ತಾಪಿಸುವ ಹಾಲಬಸವಿದೇವ ಬೇರೆ. ಬಹುಶಃ ಆಂಧ್ರದಿಂದ ಬಂದ ಹಲವಾರು ಬ್ರಾಹ್ಮಣ ಮನೆತನಗಳು ಬಾಗೇವಾಡಿಯ ಸುತ್ತಮುತ್ತ ನೆಲೆಸಿರಬಹುದು. ಅದಕ್ಕಾಗಿ ಅವರ ಸಂಪ್ರದಾಯದಂತೆ ಬಸವ, ಬಸವರಸ, ಹಾಲಬಸವಿದೇವ ಎಂಬ ಹೆಸರುಗಳು ವಿಪುಲವಾಗಿವೆ.

ಗುರು ಬಸವಣ್ಣನವರ ಪತ್ನಿ, ಸೋದರ ಮಾವ ಬಲದೇವನ ಮಗಳು (ನೀಲ)ಗಂಗಾಂಬಿಕೆ ತನ್ನ ಪತಿಯ ತಾಯಿ ತಂದೆಯರ ಹೆಸರನ್ನು ಹೀಗೆ ಹೇಳಿದ್ದಾರೆ. (ಶಿವಶರಣೆಯರ ವ. ಸಂ.ಪು- 220, ವ .679)

ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೂ ಮಾದಲಾಂಬಿಕಾನಂದನನು ?

ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ ನೋಳ್ಪನೆಂತೂ
ಮಾದರಸನ ಮೋಹದ ಮಗನು ?
ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೂ
ಗಂಗಾಪ್ರಿಯ ಕೂಡಲ ಸಂಗನ ಶರಣ ಚೆನ್ನ
ಮಾದಲಾಂಬಿಕಾ ನಂದನ, ಮಾದರಸನ ಮೋಹದ ಮಗ

ಎಂಬ ಪದಗಳು ಬಹಳ ಮಹತ್ವ ಪೂರ್ಣವಾದವು.

ಮಡಿವಾಳ ಮಾಚಿದೇವರ ಒಂದು ವಚನ ಹೀಗಿದೆ (570)

ಕಲಿಯುಗದಲ್ಲಿ ಶಿವಭಕ್ತಿಯನು ಪ್ರಬಲವ ಮಾಡಬೇಕೆಂದು
ಮರ್ತ್ಯಲೋಕಕ್ಕೆ ಇಳಿದು
ಶೈವಾಗಮಾಚಾರ್ಯ ಮಂಡಗೆಯ ಮಾದಿರಾಜನ ಸತಿ
ಮಾದಾಂಬಿಕೆಯ ಗರ್ಭದಿಂದವತರಿಸಿದ,
ಬಸವಣ್ಣನೆಂಬ ನಾಮಕರಣವಂ ಧರಿಸಿ
ಕೂಡಲ ಸಂಗಮದೇವರ ದಿವ್ಯ ಶ್ರೀಪದ್ಮಾರಾಧಕನಾಗಿ,
ಮರ್ತ್ಯಕ್ಕೆ ಪ್ರತಿ ಕೈಲಾಸವೆಂಬ ಕಲ್ಯಾಣಮಂ ಮಾಡಿ.

(ವ.ಸಂ.8, ವ 570, ಪುಟ-217)

ಕರಪೂರ ನಿರಹಂಕಾರ ಸುಜ್ಞಾನಿದೇವಿಯರ
ಬಸುರಲ್ಲಿ ಬಂದರೆನ್ನಬಹುದೆ ಪ್ರಭುದೇವರ ?
ಮಂಡಗೆಯ ಮಾದಿರಾಜ-ಮಾದಲಾಂಬಿಕೆಯಮ್ಮನವರ
ಬಸುರಲ್ಲಿ ಬಂದರೆನ್ನಬಹುದೆ ಬಸವೇಶ್ವರನ

(ಘಟ್ಟಿವಾಳಯ್ಯ, ವ.451, ಪು-158, ವ.ಂ.7)

ನಿರ್ವಿವಾದವಾಗಿ ಬಸವಣ್ಣನವರ ತಾಯಿ ಮಾದಲಾಂಬಿಕೆ, ತಂದೆ ಮಂಡಗೆಯ ಮಾದಿರಾಜ.

ಬಂಜಗೆರೆ ಜಯಪ್ರಕಾಶ್ ಬಸವಣ್ಣನವರಿಗೆ ಒಬ್ಬ ಅಣ್ಣನಿದ್ದ, ಆದರೆ ಅವನ ಹೆಸರು ಯಾವ ಕಾವ್ಯ-ಪುರಾಣಗಳಲ್ಲಿ ವಚನಗಳಲ್ಲಿ ಸಹ ಪ್ರಸ್ತಾಪವಾಗಿಲ್ಲ ಎನ್ನುತ್ತಾರೆ. ಇರಬಹುದು, ಇಲ್ಲದಿರಬಹುದು ಇದು ನಮಗೆ ಏನೂ ಸಂಬಂಧವಿಲ್ಲ ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಬಹು ಬೇಗನೆ ಮೃತ್ಯು ವಶರಾಗುತ್ತಿದ್ದರು. ಮಾದರಸನಿಗೆ ಮೊದಲ ಪತ್ನಿಯಲ್ಲಿ ಒಬ್ಬ ಮಗ - ದೇವರಾಜ ನಾಮಾಂಕಿತ ಹೊಂದಿದವನು ಇದ್ದಿರಬಹುದು. ಮೊದಲ ಹೆಂಡತಿಯ ಮರಣಾನಂತರ ಮಾದಲಾಂಬಿಕೆಯನ್ನು ವಿವಾಹವಾಗಿದ್ದು ಆಕೆಯಲ್ಲಿ ಹುಟ್ಟಿದ ಮಕ್ಕಳು ನಾಗಲಾಂಬಿಕೆ ಮತ್ತು ಬಸವಣ್ಣನವರು ಇದ್ದಿರಲೂಬಹುದು

ಜನನ ಮೂಲದಿಂದ ಬಸವಣ್ಣನವರು ಬ್ರಾಹ್ಮಣರು ಎಂಬುದಕ್ಕೆ ಅದೇ ಸಮುದಾಯದಲ್ಲಿ ಹುಟ್ಟಿದ ಡಾ|| ಮುದಿಗೊಂಡ ಶಿವಪ್ರಸಾದರ ಭಾಷಣ ಒಂದು ಮಹತ್ವದ ದಾಖಲೆ. ದಿ. 18-8-2007 ರಂದು 3ನೆಯ ಆವೃತ್ತಿಯಾಗಿ ಬಿಡುಗಡೆಯಾದ ಲಿಂಗಾಯತರು ವೀರಶೈವರಲ್ಲ ಎಂಬ ನನ್ನ ಒಂದು ಪುಸ್ತಕದಲ್ಲಿ ತೆಲುಗು ವಿದ್ವಾಂಸ ಸೋಮಶೇಖರ ಶರ್ಮರ "ಪಾಲ್ಕುರಿಕೆ ಸೋಮನಾಥ" ಎಂಬ ಪುಸ್ತಕದ ಕೆಲವು ಉಲ್ಲೇಖನೀಯ ಹೇಳಿಕೆಗಳು ಬಹಳ ಮಹತ್ವ ಪೂರ್ಣವಾಗಿವೆ.

ಆಂಧ್ರದ ಬ್ರಾಹ್ಮಣ ಸಮುದಾಯದಲ್ಲಿ ಲಿಂಗಿ ಬ್ರಾಹ್ಮಣರು ಒಂದು ಜನಾಂಗ. ಇವರು ಸ್ಥಾವರಲಿಂಗದ ಚುಳುಕಾದ ರೂಪವನ್ನು ಮತ್ತು ಜನಿವಾರವನ್ನು ಎರಡನ್ನೂ ಧರಿಸುವರು. ಉಪನಯನ ಮಾಡುವ ದಿನದಂದೆ ಲಿಂಗವನ್ನೂ ಕೊಡುವರು ಜನಿವಾರದ ತುದಿಗೆ ಲಿಂಗವನ್ನು ಕಟ್ಟುವರು. ಇವರಲ್ಲಿ ಸಮಾನತೆ ಇಲ್ಲ; ವರ್ಣಾಶ್ರಮ ಪಾಲನೆ ಇದೆ. ಹೆಣ್ಣು ಮಕ್ಕಳಿಗೆ ಉಪನಯನವೂ ಇಲ್ಲ, ಲಿಂಗವನ್ನೂ ಕೊಡುವುದಿಲ್ಲ. ಮೊದಮೊದಲಿಗೆ ಲಿಂಗಿ ಬ್ರಾಹ್ಮಣರು ಇತರ ಶೈವ ಮತ್ತು ವೈಷ್ಣವ ಬ್ರಾಹ್ಮಣರೊಡನೆ ವಿವಾಹ ಸಂಬಂಧ ಬೆಳೆಸುತ್ತಿರಲಿಲ್ಲ. ಇತ್ತೀಚೆಗೆ ಶೈವ ಬ್ರಾಹ್ಮಣರೊಡನೆ ಬೆಳೆಸುತ್ತಿದ್ದಾರೆ.

ಬ್ರಾಹ್ಮಣ ಹೆಣ್ಣು ಮಕ್ಕಳಿಗೆ ಮದುವೆ ಸಮಯದಲ್ಲಿ ಲಿಂಗಧಾರಣೆ ಮಾಡುವರು ಆದರದು ಬಾಣ ಲಿಂಗ. (ಉಮಾದೇವಿ ಶಿವಪ್ರಸಾದರನ್ನು ಕೇಳಿದೆ. ಅವರು ಬೆಳ್ಳಿಯ ದಾರ ಹೊಂದಿದ, ವಿಶಿಷ್ಟ ಆಕಾರದ ಕರಡಿಗೆಯಲ್ಲಿ ಇಟ್ಟುಕೊಂಡಿದ್ದ ಲಿಂಗವನ್ನು ತೋರಿಸಿ, ಇದಕ್ಕೆ 'ಬಾಣ ಲಿಂಗ' ಎನ್ನುತ್ತಾರೆ. ಗಂಗಾ ನದಿಯಲ್ಲಿ ಸಿಕ್ಕುವ ಕಲ್ಲು, ಇದನ್ನು ಗುಂಡಗೆ ಮಾಡಲಾಗಿರುತ್ತದೆ ಎಂದರು. ಅದು ಅವರ ಕಾಳಿನಂತೆ ಇತ್ತು.) ಗಂಡಸರು ಸ್ಫಟಿಕ ಲಿಂಗವನ್ನು ಧರಿಸುತ್ತಾರೆ ಉಮಾ

ದೇವಿ ಹೇಳಿದರು. ಈ ಬಗ್ಗೆ ನಾನು ಹಿಂದೆಯೇ ಬರೆದಿದ್ದೆ. ಲಿಂಗಧಾರಣೆಯಲ್ಲಿ ಭೇದ, ಲಿಂಗಗಳಲ್ಲಿಯೂ ಭೇದವಿದೆ. ಚನ್ನಬಸವಣ್ಣನವರ ಹೆಸರಿನಲ್ಲಿ ಬರೆದು ಸೇರಿಸಿರುವ ಒಂದು ಕೃತ್ರಿಮ ವಚನ ತಟ್ಟನೆ ನೆನಪಾಯಿತು.

ಪುಣ್ಯತೀರ್ಥ ಕ್ಷೇತ್ರಂಗಳಲ್ಲಿ ತಂದ ಶಿಲೆಯ
ಪರೀಕ್ಷಿಸಿ ಸಂಸ್ಕಾರಂಗೈಯಲು
ಅದು ಲಿಂಗವಾಗಿಪ್ಪುದಯ್ಯಾ
ಸದ್ವಂಶೀಯರಾದ ವಟುಗಳ ಪರೀಕ್ಷಿಸಿ ಸಂಸ್ಕಾರಂಗೈಯಲು
ಗುರುಜಂಗಮವಾಗಿರ್ಪರಯ್ಯಾ
ಇಂತಹುದನಾರೈಯದೆ, ಸಂಸ್ಕಾರ ವಿರಹಿತ
ಗುರುಲಿಂಗ ಜಂಗಮವ ಪೂಜಿಸುವ
ಅರೆಮರುಳರನೆನಗೊಮ್ಮೆ ತೋರದಿರಯ್ಯಾ
ಕೂಡಲ ಚೆನ್ನ ಸಂಗಮದೇವಾ (418)

ತೀರ್ಥಕ್ಷೇತ್ರ ಬಹಳ ಪವಿತ್ರ ; ಅಲ್ಲಿಯ ಕಲ್ಲು ಪವಿತ್ರ ಎಂಬ ನಂಬಿಕೆ ವೈದಿಕರು, ಶೈವರು, ವೀರಶೈವರದೇ ವಿನಾ ಲಿಂಗಾಯತ ಧರ್ಮದ್ದಲ್ಲ, ಇದು ಜಡ ಪ್ರಾಧಾನ್ಯತೆಯ ಧರ್ಮವಲ್ಲ, ಚೈತನ್ಯ ಪ್ರಾಧಾನ್ಯತೆಯ ಧರ್ಮ. ಯಾವ ಊರಿನ ಕಲ್ಲು ಆದರೇನು ಅದಕ್ಕೆ ಗುರು ಚಿತ್ಕಳೆ ತುಂಬುವುದು ಮುಖ್ಯ. ಅದೇ ರೀತಿ ಮೇಲ್ಕಂಡ ವಚನದಲ್ಲಿ ಹೇಳಿರುವಂತೆ ವಟುವು ಸದ್ವಂಶೀಯನು ಇರಬೇಕೆಂದಿಲ್ಲ. ಚನ್ನಯ್ಯ - ಕಕ್ಕಯ್ಯರ ಮನೆಯ ದಾಸ-ದಾಸಿಯರ ಸಂಗದಿಂದ ಹುಟ್ಟಿದವನು ಇರಬಹುದು.

ಸೋಮಶೇಖರ ಶರ್ಮ ಬರೆಯುತ್ತಾರೆ (ಲಿಂಗಾಯತರು ವೀರಶೈವರಲ್ಲ ಪುಟ 17) ಜಬಸವಣ್ಣನವರಿಗೆ ಶೂದ್ರ ಜನರಿಗೂ ಧರ್ಮ ಸಂಸ್ಕಾರ ಕೊಡಬೇಕು, ಯಜ್ಞೋಪವೀತವನ್ನು ಕೊಡಬೇಕು ಎಂದಿತ್ತು. ಆದರೆ ಅದನ್ನು ಬ್ರಾಹ್ಮಣರು ಒಪ್ಪಲು ಸಾಧ್ಯವಿರಲಿಲ್ಲ ಅದಕ್ಕಾಗಿಯೇ ಅವರು ಜನಿವಾರವನ್ನೇ ತೊರೆದು ಹೊರಗೆ ಹೋದರು. ಬಸವಣ್ಣನವರ ಈ ವಿಚಾರಧಾರೆಯನ್ನು ಆ ಜನಾಂಗದ ಕೆಲವರು ಅನುಮೋದಿಸುತ್ತಾರೆ, ಕೆಲವರು ವಿರೋಧಿಸುತ್ತಾರೆ. ಮಾದಿರಾಜ ವಿರೋಧಿಸಿದರೆ, ಬಲದೇವ ಅನುಮೋದಿಸುತ್ತಾನೆಜಿ ಎಂದು ಶರ್ಮಾ ಬರೆದಿದ್ದಾರೆ. (ಪುಟ 18) ಇದು ಆಲೋಚನಾರ್ಹ ಸತ್ಯ. ಮಾದಿರಾಜ ಮಗನ ಜೊತೆ ಸಂಬಂಧ ಕಡಿದುಕೊಂಡರೆ ಬಲದೇವ ಮಗಳನ್ನು ಮದುವೆ ಮಾಡಿಕೊಡುತ್ತಾನೆ. ಅದೇ ಸಮಯದಲ್ಲಿ, ಆ ನಂತರವೂ ಕೂಡ ಲಿಂಗಿ ಬ್ರಾಹ್ಮಣರು ಬಸವಣ್ಣನವರು ಕೊಟ್ಟ ಹೊಸಧರ್ಮವನ್ನು ಸ್ವೀಕಾರ ಮಾಡಿದ್ದಾರೆ. ಮಲ್ಲಿಕಾರ್ಜುನ ಪಂಡಿತಾರಾಧ್ಯರು ಸಹ ಬಸವಣ್ಣನವರ ಪೂರ್ವಾಶ್ರಮದ ಜಾತಿಯವರು, ಕಟ್ಟಾ ಬ್ರಾಹ್ಮಣರು. ಬಸವಣ್ಣನವರು ಶೂದ್ರಾದಿಗಳಿಗೆ ಧರ್ಮ ಸಂಸ್ಕಾರ ಕೊಡುವ ಬಗ್ಗೆ ತಂದ ಸುಧಾರಣೆಯನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯರು ಸಮರ್ಥಿಸುವುದಿಲ್ಲ. (ಪುಟ 18) ಅವರ ಅಭಿಪ್ರಾಯ, "ಶೂದ್ರ ವರ್ಣದವರನ್ನು ಉದ್ಧರಿಸಲಿಕ್ಕಾಗಿ ಬ್ರಾಹ್ಮಣರು ಸಮಾಜದಲ್ಲಿಯ ತಮ್ಮ ಸ್ಥಾನವನ್ನು ಕಳೆದುಕೊಳ್ಳಬೇಕಾಗಿಲ್ಲ. ಬಸವಣ್ಣನ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆದರೆ ನಾನು ನನ್ನ ಬ್ರಾಹ್ಮಣ್ಯ ಬಿಡಲಾರೆ." ಎನ್ನುತ್ತಾರೆ (ಪುಟ 19).

ಜೈನ ಧರ್ಮದ ಹೆಚ್ಚುತ್ತಿದ್ದ ಪ್ರಭಾವ ಕಡಿಮೆ ಮಾಡಲು ಬಸವಣ್ಣನ ಧರ್ಮ ಬೇಕು ಎನಿಸಿ ಅವರು ದೀಕ್ಷಾಬದ್ಧರಾಗಲು ನಂತರ ಹೊರಟರು. ದುರ್ದೈವವೆಂಬಂತೆ ಬಸವಣ್ಣನವರು ಲಿಂಗೈಕ್ಯರಾದ ಸುದ್ದಿ ಪ್ರಯಾಣದಲ್ಲಿರುವಾಗಲೇ ತಿಳಿಯಿತು. ಆಗ ಅವರು ತುಂಬಾ ದುಃಖಿತರಾಗಿ ಶ್ರದ್ಧಾಂಜಲಿ ಗೀತೆಯನ್ನು ಬರೆದಿದ್ದಾರೆ. ನನಗೆ ಈವರೆಗೂ ಬಗೆ ಹರಿಯದ ಸಂದೇಹ ಈಗ ಪರಿಹಾರವಾಯಿತು. ಕರ್ನಾಟಕದ ಬಸವಣ್ಣನವರು ಆಂಧ್ರದ ಪಂಡಿತಾರಾಧ್ಯರಿಗೆ ಒಮ್ಮೆ ವಿಭೂತಿಯನ್ನು ಕಳಿಸುತ್ತಾರೆ. ಅದನ್ನು ಧರಿಸಿದ ಮೇಲೆ ಅವರಿಗೆ ಕನ್ನಡ ಬರುತ್ತದೆ. ಬಸವಣ್ಣನವರ ಬಗೆಗೆ ಇದ್ದ ಅಸಹನೆ ಕಡಿಮೆಯಾಗಿ ಗೌರವಾಭಿಮಾನ ಮೂಡುತ್ತದೆ. ಇದೇಕೆ ಉಭಯತರ ನಡುವೆ ಈ ಸಂಬಂಧ ? ಬಹುಶಃ ಆಂಧ್ರದ ಕಮ್ಮೆನಾಡು ಲಿಂಗಿ ಬ್ರಾಹ್ಮಣರ ಜೊತೆ ಕರ್ನಾಟಕಕ್ಕೆ ವಲಸೆ ಬಂದಿದ್ದ ಬ್ರಾಹ್ಮಣರ ಸಂಬಂಧಗಳು, ಒಡನಾಟ ಸಾಗಿಯೇ ಇದ್ದವು. ಅಂತೂ ಯಾವಾಗಲೋ ನಂತರ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಇಷ್ಟಲಿಂಗ ಧಾರಿಗಳಾದರು. ಅದು ಸುದೈವವಾಗದೆ ದುರ್ದೈವವೇ ಆಯಿತು. ಪಂಚಪೀಠಾಧೀಶರು ಲಿಂಗೀ ಬ್ರಾಹ್ಮಣರ, ಮತಾಂಧ ವೀರಶೈವದ ಹಳೆಯ ಕೊಳೆಯನ್ನು ಪುನಃ ಲಿಂಗಾಯತ ಧರ್ಮದೊಳಕ್ಕೆ ತೂರಿಸಿದರು, ಕಲುಷಿತಗೊಳಿಸಿದರು.

ಬಂಜಗೆರೆಯ ಕುತರ್ಕದಂತೆ ಬಸವಣ್ಣನವರು ಜನನ ಮೂಲದಿಂದ ಮಾದಿಗರಾಗಿದ್ದರೆ ಬಲದೇವ ಮಂತ್ರಿ ಮಗಳನ್ನು ಕೊಟ್ಟು ಮದುವೆ ಮಾಡುತ್ತಿದ್ದನೆ ? ತೀರಾ ಪ್ರತಿಭಾವಂತ, ಪ್ರೀತಿಯ ತಂಗಿಯ ಮಗ ಅದಕ್ಕಾಗಿ ಕೊಟ್ಟು

ಮದುವೆ ಮಾಡಿದ ಎಂದುಕೊಳ್ಳೋಣ. ಬ್ರಾಹ್ಮಣನ ಮಗಳನ್ನು ಮಾದಿಗ ತರುಣನಿಗೆ ಕೊಟ್ಟು ವರ್ಣಾಂತರ ವಿವಾಹ ಮಾಡಿದ್ದರೆ ಸುಮಾರು 40 ವರ್ಷಗಳ ನಂತರ ನಡೆಯುವ ಕಲ್ಯಾಣ ಕ್ರಾಂತಿ ಮಂಗಳ ವೇಡೆಯಲ್ಲೇ ನಡೆದು ಬಿಡುತ್ತಿರಲಿಲ್ಲವೆ ?

ಅನೈತಿಕ ಸಂಬಂಧದಿಂದ ಮಾದಿಗರಲ್ಲಿ ಹುಟ್ಟಿದ ತರುಣನಿಗೆ ಆಸ್ಥಾನದಲ್ಲಿ ಕಾಯಕ (ಉದ್ಯೋಗ) ಸಿಗಬಹುದಿತ್ತೆ? ಬಂಜಗೆರೆಯ ಕುಕಲ್ಪನೆಯ ಪ್ರಕಾರ ಮಾದಿಗ ದಂಡೋರ ಜನ ವಿಪರೀತ ಬುದ್ಧಿವಂತರಿದ್ದ ಕಾರಣ ಅವರ ಬುದ್ಧಿವಂತಿಕೆಯ ಮೇಲೆ ಬಸವಣ್ಣನವರಿಗೆ ಸಿಕ್ಕಿರುವುದು ಸಂಭಾವ್ಯ ಸತ್ಯ ? ಒಳ್ಳೇದು ಒಪ್ಪಿಕೊಳ್ಳೋಣ. ದಲಿತ ಶರಣನಾದ ಸಂಬೋಳಿನಾಗಿ ದೇವನ ಮನೆಗೆ ಹೋಗಿ ಬಸವಣ್ಣನವರು ಪೂಜೆ-ಪ್ರಸಾದ ಮಾಡಿದಾಗ ಪುರೋಹಿತ ವರ್ಗದವರು ಹೊಲೆಯಾಯಿತೆಂದು ಬೊಬ್ಬೆ ಇಟ್ಟುದೇಕೆ ? ಇಬ್ಬರೂ ಒಂದೇ ಜಾತಿಯವರಾಗಿದ್ದರಲ್ಲವೆ ? ಹೊಲೆಯನ ಮನೆಗೆ ಹೋಗಿ ಹೊಲೆಯಾಗಿ ಬಂದು ಎಲ್ಲವನ್ನೂ ಮೈಲಿಗೆ ಮಾಡುವರೆಂದು ಸಭೆಯನ್ನು ಹೊರಗೆ ಏರ್ಪಡಿಸಿದ್ದೇಕೆ? ದಿನಾಲು ಬಸವಣ್ಣನವರು ಅದೇ ಆಸ್ಥಾನದಲ್ಲಿ ಇರುತ್ತಿದ್ದರಲ್ಲ!

ಬಂಜಗೆರೆಯ ಪ್ರಕಾರ ಗುರು ಬಸವಣ್ಣನವರು ಮತ್ತು ಅಕ್ಕನಾಗಲಾಂಬಿಕೆ ಶಿವ ಸಂತಾನ. ಪವಿತ್ರ ಪದ 'ಶಿವ ಸಂತಾನ' ಎಂಬುದನ್ನು ಪಾಪಿ ಲೇಖಕ ಅಪವಿತ್ರಗೊಳಿಸಿದ್ದಾರೆ. ಮಾದಿರಾಜ ವಾಮಾಚಾರ ತಾಂತ್ರಿಕನಾಗಿದ್ದು ತನ್ನ ಸ್ತ್ರೀ ಪ್ರಧಾನ ಸಾಧನೆಗಾಗಿ ಡೊಂಬಿನಿ, ಮಾತಂಗಿನಿ, ರಜಕಿನಿ (ಕೆಳಜಾತಿಯವರು) ಮುಂತಾದ ಸ್ತ್ರೀಯರನ್ನೂ ಉಪಯೋಗಿಸಿಕೊಂಡು ಕರ ಸಂಜಾತ ಮಗನನ್ನಾಗಿ ಪಡೆದನು ಎಂದು (ಪುಟ 64-68) ಬರೆದಿದ್ದಾನೆ. ಶೈವಾಗಮಾಚಾರ್ಯರು ಹೀಗೆ ಮಾಡುತ್ತಿದ್ದರಂತೆ. ಅಂದರೆ ಇಲ್ಲಿ ತಂದೆ ಮಾದಿರಾಜ ಶೈವಾಗಮಾಚಾರ್ಯ ಅಂದರೆ ತಂದೆ ಬ್ರಾಹ್ಮಣ, ತಾಯಿ ಮಾದಿಗಳು ! ಶೈವ ಮಾರ್ಗಗಳಲ್ಲಿ ಅನೇಕ ಪಂಥಗಳಿವೆ. ಕೇವಲ ಕಾಪಾಲಿಕರು ವಾಮಮಾರ್ಗಿಗಳೇ ವಿನಾ ಇನ್ನಿತರ ಶೈವ ಮಾರ್ಗಿಗಳಲ್ಲ, ಅದರಲ್ಲೂ ವೈದಿಕ, ಆಗಮಿಕ ಬ್ರಾಹ್ಮಣರಂತೂ ಕಟ್ಟಾ ಆಚಾರ ನಿಷ್ಠರು, ಮಡಿವಂತರು. ಶೈವಾಗ ಮಗಳು ಸಂಸ್ಕೃತ ಕೃತಿಗಳು, ಕಲಿಯುವ ಅಧಿಕಾರವಿದ್ದುದು ಬ್ರಾಹ್ಮಣರಿಗೆ ಮಾತ್ರ. ಶೈವಾಗಮಾಚಾರ್ಯ ಬ್ರಾಹ್ಮಣನಿದ್ದಿರಲೇ ಬೇಕು. ಅಂದಾಗ ಟಬ್ರಾಹ್ಮಣರು ಹೇಗಾದರೂ ಮಾಡಿ ಬುದ್ಧಿವಂತರೆಲ್ಲ ಬ್ರಾಹ್ಮಣ ಅಂಶ ಜನ್ಯರು ಎಂದು ಬರೆಯುವ ಚತುರಮತಿಗಳುಟಿ ಎಂದು ವ್ಯಂಗ್ಯವಾಡಿದ ಬಂಜಗೆರೆ ಜಯಪ್ರಕಾಶ ಏಕೆ ಶೈವಾಗಮಾಚಾರ್ಯನಾದ ಮಾದಿರಾಜನನ್ನು ಬಸವಣ್ಣನವರ ತಂದೆಯನ್ನಾಗಿ ಮಾಡಿದರೋ, ತಂದೆಯೊಬ್ಬನಿದ್ದಾನೆ ಎಂದು ಒಂದು ಕಡೆ ಹೇಳಿ ಇನ್ನೊಂದು ಕಡೆ ಏಕೆ 'ಶಿವ' ಸಂತಾನವನ್ನಾಗಿ ಮಾಡಿದರೋ ? ಬಹುಶಃ ತಾನು ಬರೆದುದು ತನಗೇ ಮರೆವಾಗಿರಬಹುದು. ತಂದೆ ಶೈವಾಗಮಾಚಾರ್ಯ ಬ್ರಾಹ್ಮಣನಾದುದರಿಂದ ಜಯಪ್ರಕಾಶರ ಪ್ರಕಾರ ತಾಯಿ ಮಾದರ ಮಹಿಳೆಯೇ ಇರಬಹುದು. ಏಕೆಂದರೆ ಬಸವಣ್ಣನವರು ಮಾದರ ಮೂಲದವರಾಗಬೇಕಲ್ಲ ?

"ಶಿವ ಸಂತಾನ " ಎಂದರೆ ದೇವರ, ಶಿವನ ಆಜ್ಞೆಯಂತೆ ಜಗತ್ತಿನಲ್ಲಿ ಹುಟ್ಟಿದವನು ಎಂದು ಅರ್ಥವನ್ನು ಮಾಡಬಹುದು ಇನ್ನೊಂದು (divine breed) ದಿವ್ಯ ಜೀವನ ನಡೆಸುತ್ತಿದ್ದ ದಂಪತಿಗಳ ಸಂತಾನ ಎಂದೂ ಅರ್ಥ ಮಾಡಬಹುದು ಕರ ಸಂಜಾತ ಎನ್ನುವ ಪದವನ್ನೂ ವಿಕೃತಾರ್ಥದಲ್ಲಿ ಪುಸ್ತಕದಲ್ಲಿ ಬಳಸಲಾಗಿದೆ. ಇದರಲ್ಲಿ ಏನು ಅರ್ಥವನ್ನು ಈ ಪುಣ್ಯಾತ್ಮ ಹುದುಗಿಸಿದ್ದಾನೆ. ಬಹುಶಃ ದತ್ತು ಪಡೆದ ಮಗ ಎಂದಿರಬಹುದು. ಇದಕ್ಕೆ ಶಿಶು ಮಗ ಎಂಬ ಪ್ರಯೋಗವೂ ಸೇರಿದೆ. ಈ ಪದಗಳು ಆಧ್ಯಾತ್ಮ ಜೀವನದ ಅಮೂಲ್ಯಾರ್ಥದ ಪದಗಳು. ಶೈವ ತತ್ತ್ವದ ಪ್ರಕಾರ ಗುರುವು ಶಿಷ್ಯನ ತಲೆಯ ಮೇಲೆ ಹಸ್ತವನ್ನಿಟ್ಟು ಕರ್ಣದಲ್ಲಿ ಮಂತ್ರೋಪದೇಶ ಮಾಡುತ್ತಾನೆ.

ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು
ಎನ್ನ ಮಸ್ತಕದ ಮೇಲೆ ಇರಿಸಿದಾಗಳೇ
ಎನ್ನ ಭವಂ ನಾಸ್ತಿಯಾಯಿತು ಎನ್ನ ತನ್ನಂತೆ ಮಾಡಿದ

ಎನ್ನುತ್ತಾರೆ ಅಕ್ಕಮಹಾದೇವಿ. ಶಿಷ್ಯರುಗಳೆಲ್ಲ ಗುರುಗಳ ಕರ ಸಂಜಾತರು; ಗುರು-ಶಿಷ್ಯ ಸಂಬಂಧ ತಂದೆ-ಮಕ್ಕಳ ಸಂಬಂಧವಾದ ಕಾರಣ ಶಿಷ್ಯರುಗಳು ಗುರುಗಳ ಶಿಷ್ಯ ಮಕ್ಕಳು, ಗ್ರಾಮೀಣ ಭಾಷೆಯಲ್ಲಿ ಶಿಶು ಮಕ್ಕಳು ಎಂದು ಕರೆಯಲಾಗುವುದು. ಇಂಥ ಅಧ್ಯಾತ್ಮಿಕ ಹಿನ್ನೆಲೆಯುಳ್ಳ ಪವಿತ್ರ ಪದಗಳನ್ನೆಲ್ಲ ಅಪಾರ್ಥ ಮಾಡಿರುವ ಜಯಪ್ರಕಾಶ ವ್ಯಂಗ್ಯವಾಗಿ ಕರ ಸಂಜಾತ, ಶಿಶುಮಗ ಈ ಪದಗಳನ್ನೂ ಬಳಸುತ್ತಾರೆ. ಯಾವ ಒಂದು ಪವಿತ್ರ ಆಧ್ಯಾತ್ಮಿಕ ಅನುಭವ, ಜೀವನ ಹಿಂದೆ ಗೌರವಿಸಲ್ಪಡುತ್ತಿದ್ದವೋ ಅವೆಲ್ಲ ಇಂಥ ಶುಷ್ಕ, ನಾಸ್ತಿಕ ಸಾಹಿತಿಗಳಿಂದ ಲೇವಡಿಗೆ ಒಳಗಾಗುತ್ತಿರುವುದು ನಾಡಿನ, ಸಾಹಿತ್ಯ ಕ್ಷೇತ್ರದ ದುರ್ದೈವ.

ಬಸವಣ್ಣನವರ ತಾಯಿ ಮಾದಲಾಂಬೆ ಎಂದು ಒಪ್ಪಿಕೊಂಡು ತಂದೆ ವಾಮಾಚಾರಿ, ಮಾದರಸ (ಪುಟ 64)

ಎಂದಿರುವುದು ಮಾತ್ರವಲ್ಲ ತಂದೆಯ ಹೆಸರು ಚಂದ್ರಶೇಖರ ಸ್ವಾಮಿ ಮುಂತಾಗಿ ಇದೆ ಎಂದು ಬಂಜಗೆರೆ ಬರೆದಿದ್ದಾರೆ. (ಪುಟ 65) ಈ ಹೆಸರು ಎಲ್ಲಿಲ್ಲಿಯೂ ಪ್ರಸ್ತಾಪವಾಗಿಲ್ಲ; ಇದಕ್ಕೆ ಯಾವ ಆಧಾರವೂ ಇಲ್ಲ. ಇಂಥ ಮಾತುಗಳಿಂದ ಮಾದಲಾಂಬಿಕೆಯ ಪಾತಿವ್ರತ್ಯಕ್ಕೆ ಕಳಂಕ ಹಚ್ಚಿದಂತಾಗಿದೆ. ಪ್ರೊ. ಕಲಬುರ್ಗಿ ಸಹ ಮಾದಿರಾಜನಿಗೆ ಬಸವಣ್ಣ ಉದರ ಸಂಜಾತ ಮಗನಲ್ಲ ಎಂದು ಒಂದು ಕಡೆ ಹೇಳಿದ್ದಾರೆ (ಪುಟ 68) ಎಂದು ಬ.ಜ.ಪ್ರ. ಬರೆದಿದ್ದಾರೆ. ಆದರೆ ಈ ಮಾತನ್ನು ತಾವೆಲ್ಲಿಯೂ ಹೇಳಿಲ್ಲ ಎಂದು ಪ್ರೊ. ಕಲಬುರ್ಗಿ ನಿರಾಕರಿಸಿದ್ದಾರೆ.ವಾದಕ್ಕಾಗಿ ಒಂದು ಮಾತು ಬರೆಯಬಹುದು. ಮಣಿಗೆವಳ್ಳಿಯ ಚಂದರಸ ಚಂದ್ರಮಾಂಬೆಯ ಮಗನಾಗಿ ಬಸವಣ್ಣನವರು ಜನಿಸಿ ತಾಯಿ ತಂದೆ ಇಬ್ಬರೂ ಬೇಗನೆ ತೀರಿ ಹೋದುದರಿಂದ ಮಗುವನ್ನು ಚಂದ್ರಮಾಂಬೆಯ ಸೋದರಿ ಮಾದಲಾಂಬಿಕೆ ಸಾಕಿರಬಹುದು. ಆಗ ಮಾದರಸ - ಮಾದಲಾಂಬೆಯರು ಸಾಕು ತಂದೆ ತಾಯಿ ಆಗುತ್ತಾರೆ. ಆದೇಕೆ ಕರ ಸಂಜಾತ ಎಂಬ ಪದವನ್ನು ವ್ಯಂಗ್ಯವಾಗಿ ದ್ವಂದ್ವಾರ್ಥವಿಟ್ಟು ಬ.ಜ. ಪ್ರಕಾಶ್ ಬಳಸಬೇಕು ?

ಸಂಗನ ಬಸವಣ್ಣ: ಶಿವ ಸಂತಾನ ಎಂಬ ಪದಕ್ಕೆ ಕೀಳಾಗಿ (ಹಲವಾರು ತಂದೆಯರಿಗೆ ಹುಟ್ಟಿದವರು) ಅರ್ಥ ಮಾಡಿದಂತೆ ಸಂಗನ ಬಸವಣ್ಣ ಪದವನ್ನೂ ಈ ಪಾಪಾತ್ಮ ಅರ್ಥಮಾಡಲೆಳಸಿದ್ದಾನೆ. 'ಸಂಗ' ಪದ ಬಸವರಸ ಬಾಲಕನಾಗಿದ್ದಾಗಿನಿಂದಲೂ ಬಲು ಅಪ್ಯಾಯಮಾನವಾಗಿತ್ತು. ಶಿವನ ಪ್ರತಿರೂಪವಾದ ಸಂಗಮನಾಥ ಬಾಲಕ ಬಸವರಸನ ಸರ್ವಸ್ವ

ನಡೆವಲ್ಲಿ ನುಡಿವಲ್ಲಿ ಸಂಗ ಶರಣೆಂದೆನುತ ; ಉಡುವಲ್ಲಿ ಉಂಬಲ್ಲಿ ಸಂಗ ಶರಣೆಂದೆನುತ
ತೊಡುವಲ್ಲಿ ಪೊದೆವಲ್ಲಿ ಸಂಗಶರಣೆಂದೆನುತ ; ಕೊಡುವಲ್ಲಿ ಕೊಂಬಲ್ಲಿ ಸಂಗಶರಣೆಂದೆನುತ
ಸಂಗನ ನಾಮದೊಳು ಅಚ್ಚುವಿಡಿದಂತಿರ್ದು ; ಲಿಂಗವಂ ನಂತರದೊಳು ಅಗಲದಂತಿರ್ದು
ಬಸವರಸನ ಸರ್ವಚಟುವಟಿಕೆಗಳಲ್ಲೂ ಸಂಗಮನಾಥನ ಧ್ಯಾನ ಹಾಸು ಹೊಕ್ಕಾಗಿತ್ತು.
ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು ಕೇಳವ್ವಾ ಕೆಳದಿ
ಪನ್ನಗಭೂಷಣನಲ್ಲದ ಗಂಡರು
ಇನ್ನೆನಗಾಗದ ಮೊರೆ ನೋಡವ್ವಾ
ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ
ನಿಮ್ಮಾಣೆಯಯ್ಯಾ, ಕೂಡಲ ಸಂಗಮದೇವಾ.

ಸಂಗನನ್ನು ತನ್ನ ಪ್ರಾಣವಾಗಿ ಮಾಡಿಕೊಂಡಿದ್ದರಿಂದ ಸಂಗನ ಬಸವಣ್ಣ ಎಂಬ ವಿಶೇಷಣ ಬಸವಣ್ಣನವರಿಗೆ ಬಂತು. ಆಧ್ಯಾತ್ಮ ಜೀವಿಗಳು ತಾಯಿ ತಂದೆ, ಮನೆತನದ ಹೆಸರುಗಳೊಡನೆ ಗುರುತಿಸಿಕೊಳ್ಳಲು ಇಷ್ಟಪಡದೆ ಗುರು ಅಥವಾ ದೇವನ ಹೆಸರಿನೊಡನೆ ಗುರುತಿಸಿಕೊಂಡು ಪ್ರಸಿದ್ಧರಾಗುತ್ತಾರೆ. ಗುಹೇಶ್ವರನ ಶರಣ ಪ್ರಭುದೇವರು ಎಂದಂತೆ ಸಂಗನ ಬಸವಣ ಎಂಬುದು ಜನಪ್ರಿಯವಾಗಿದೆ. ಆದಕ್ಕಾಗಿ "ದೇವರಿಗೆ ಬಿಟ್ಟವರು" - ಬಸವಿ ಎಂಬ ಅರ್ಥದಲ್ಲಿ ಜಯಪ್ರಕಾಶ್ ಬರೆಯಬಹುದೆ ?

ಲಿಂಗಾಯತ ಧರ್ಮದಲ್ಲಿ ಶರಣ ಸತಿ - ಲಿಂಗಪತಿ ಎಂಬ ಅಮೂಲ್ಯ ತತ್ತ್ವವಿದೆ. ನವವಿಧ ಭಕ್ತಿಗಳಲ್ಲಿ ಸತಿ (ಸಖಿ) ಭಕ್ತಿಯೂ ಒಂದು. ದೇವರನ್ನು ಪತಿ ಎಂದು ಸಾಧಕನು ತನ್ನನು ತಾನು ಸತಿ ಎಂದು ಭಾವಿಸಿಕೊಂಡು ಆರಾಧಿಸುವನು. ಅಕ್ಕಮಹಾದೇವಿಯಂತೆ ದೇವರಿಗೇ ಮೀಸಲಾಗಿ ವೈರಾಗ್ಯ ಜೀವನದಲ್ಲಿ ಉಳಿಯುವುದೇ ಅಲ್ಲದೆ ಶರಣರು - ಪುರುಷರು ಕೂಡ ತಾವು ಮಾನಸಿಕವಾಗಿ ಸತಿ ಭಾವ ತಾಳುವರು ಉದಾ : ಬಸವಣ್ಣನವರು, ಷಣ್ಮುಖ ಶಿವಯೋಗಿಗಳು. ಸವದತ್ತಿ ಯಲ್ಲಮ್ಮ, ತುಳಜಾಪುರ ಭವಾನಿಗೂ ಮಹಿಳೆಯರನ್ನು ದೇವರಿಗೆ ಬಿಟ್ಟು ದೇವದಾಸಿಯರನ್ನಾಗಿ ಮಾಡುವರು. ಆದರೆ ಈ ಎರಡೂ ಬಗೆಯ ಜನರನ್ನು ಒಂದೇ ರೀತಿ ಪರಿಗಣಿಸಬಹುದೆ ? ಮೊದಲಿನವರು ಜ್ಞಾನ ಶಿಖರದ ತುದಿಯನ್ನು ಏರಿದವರಾದರೆ ಎರಡನೆಯವರು ಅಜ್ಞಾನದ ಕೆಸರಿನ ಗುಂಡಿಯಲ್ಲಿ ಬಿದ್ದವರು. ಮೊದಲಿನವರು ದಿವ್ಯಾನುಭಾವದ ಮೇರುವಾದರೆ ಎರಡನೆಯವರು ಮೂಢನಂಬಿಕೆಯ ಆಗರ.

ಬಸವಣ್ಣ ಗಂಡು ಬಸವಿ, ನಾಗಾಯಿ ಹೆಣ್ಣು ಬಸವಿ ?

ಇಂಥ ಕೀಳು ಮಟ್ಟದ ಪದಗಳನ್ನು ಧರ್ಮಪಿತರು, ವೀರಮಾತೆ ಅಕ್ಕಲಾಂಬಿಕೆಯವರು ಕುರಿತಾಗಿ ಬರೆದು ತಾನು ಪಾಪ ಮಾಡುತ್ತಿದ್ದೇನೆ. ಅದಕ್ಕಾಗಿ ದೇವರ ಕ್ಷಮೆ ಕೇಳುತ್ತಿದ್ದೇನೆ. ಆದರೆ ಪಾಪಿ ಲೇಖಕನ ಕೃತಿಯನ್ನು ವಿಶ್ಲೇಷಿಸಲು ಬರೆಯುವುದು ಅನಿವಾರ್ಯವಾಗಿದೆ.

ಬಸವಣ್ಣ ಮತ್ತು ಅಕ್ಕನಾಗಮ್ಮ ಕೂಡಲ ಸಂಗಮದಲ್ಲಿ ಆಶ್ರಯ ಪಡೆದ ಪ್ರಸಂಗವನ್ನು ಬ.ಜ.ಪ್ರ ಪುಟ 41ರಲ್ಲಿ

ವಿಕೃತವಾಗಿ ಅರ್ಥೈಸುತ್ತಾರೆ. 'ಬಸವಣ್ಣ ಹಾಗೂ ನಾಗಾಯಿ ದೇವರ ಸೇವೆಗೆ ಅಂಕಿತರಾದವರು' ಎಂದು ಹೇಳುತ್ತಾ 'ಬಸವಣ್ಣ ಗಂಡು ಬಸವಿ' ಅಕ್ಕನಾಗಾಯಿ ಹೆಣ್ಣು ಬಸವಿ ಅರ್ಥಾತ್ ದೇವದಾಸಿಯಾದಳು ಎಂದಿದ್ದಾರೆ.

ಕೂಡಲಸಂಗಮದಲ್ಲಿದ್ದ ಬಸವ ಪೂರ್ವದ ಗುರುಕುಲವು ಪಾಶುಪತ ಸಂಪ್ರದಾಯದ ಗುರುಕುಲ. 12ನೆಯ ಶತಮಾನದ, ಬಾಲಕ ಬಸವರಸ ಓದುತ್ತಿದ್ದ ಕೂಡಲ ಸಂಗಮದ ರೂಪವನ್ನು ಮೊದಲು ಚಿತ್ರಿಸಿಕೊಳ್ಳಬೇಕು. ಗ್ರಾಮ (ಊರು), ಅಗ್ರಹಾರ ಇವೆಲ್ಲವೂ ಮಲಪ್ರಭಾ ನದಿಯ ದಂಡೆಯ ಮೇಲೆ ಇದ್ದವು. ಇಲ್ಲಿ ಕಲ್ಲಿನ ಪಡಿಗಳು ಬಹಳವಿದ್ದುದರಿಂದ ಇದಕ್ಕೆ ಕಪ್ಪಡಿ (ಕಲ್ಪಡಿ) ಸಂಗಮ ಎನ್ನಲಾಗುತ್ತಿತ್ತು. ಗುರುಕುಲವು ಸನ್ಯಾಸಿಗಳು, ಸಾಧಕರ ವಿದ್ಯಾಕೇಂದ್ರವಾಗಿತ್ತು. ದೇವಾಲಯ, ದರ್ಶನ ಇನ್ನೊಂದು ಭಾಗವಾಗಿತ್ತು. ಕೂಡಲ ಸಂಗಮ ಗ್ರಾಮದ ಒಂದು ಅಂಗವಾಗಿದ್ದ ಅಗ್ರಹಾರದಲ್ಲಿದ್ದ ಶಿವಸ್ವಾಮಿಗೆ ನಾಗಲಾಂಬಿಕೆಯನ್ನು ಮದುವೆ ಮಾಡಿಕೊಡಲಾಗಿತ್ತು. ಆಕೆ ಗಂಡನ ಮನೆಯಲ್ಲಿ ವಾಸವಾಗಿದ್ದಳೇ ವಿನಾ ದೇವಸ್ಥಾನದಲ್ಲಿ ಪರಿಚಾರಿಕೆ ಅಥವಾ ದೇವದಾಸಿಯಾಗಿರಲಿಲ್ಲ. ಬಸವರಸ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತ ಸಂಗಮೇಶ್ವರನ ಅರ್ಚಕನಾಗಿದ್ದರು. ಮುನಿ ಮಾರ್ಗದ ಆ ಗುರುಕುಲದಲ್ಲಿ ಮಹಿಳೆಯರಿಗೆ ಪ್ರವೇಶವು ಸಾಧ್ಯವಿರಲಿಲ್ಲ. ಮುತ್ತಬ್ಬೆ ಮುಂತಾದವರು ಮುನಿಗಳ ಸೇವೆ ಮಾಡುತ್ತಿದ್ದರು ಎಂದರೆ ಸಾಮಾನ್ಯವಾಗಿ ಊರಿಗೆ ಯಾರೇ ಮಹಾತ್ಮರು ಬಂದು ಗುಡಿಗಳಲ್ಲಿ ಹತ್ತಿರದ ಗುಡ್ಡ, ಬೆಟ್ಟ, ಗವಿಗಳಲ್ಲಿ ಉಳಿದರೆ ಜನರು ಭಕ್ತಿಯಿಂದ ಹೋಗಿ ದರ್ಶನ, ಆಶೀರ್ವಾದ ಪಡೆಯುವುದು ಹಣ್ಣು - ಹಂಪಲು ಕಾಣಿಕೆ ನೀಡುವುದು ಮುಂತಾಗಿ ಇಂದಿಗೂ ಮಾಡುತ್ತಾರೆ. ಮುನಿಗಳ ಸೇವೆ ಎಂಬುದನ್ನು ಹೀನ ಅರ್ಥದಲ್ಲಿ ಮಾಡಬೇಕಾಗಿಲ್ಲ. ಶೈವಾಗಮ ಪಥದ ಪಾಶುಪತ ಸಂಪ್ರದಾಯ ಶುದ್ಧ ಆಚಾರ - ವಿಚಾರ, ಯೋಗ ಮಾರ್ಗದ ಸಂಪ್ರದಾಯ. ಒಂದು ಕಡೆಯಲ್ಲಿ ತಾಯಿ ನೀಲಾಂಬಿಕೆಯವರು ಬಸವಣ್ಣನವರನ್ನು "ಮುನಿಮಾರ್ಗಶೀಲ" ಎಂದು ಬಣ್ಣಿಸುತ್ತಾರೆ. 'ಜಾತವೇದ ಮುನಿ'- ಗುರುಕುಲದ ಪೀಠಾಧಿಪತಿಯ ಹೆಸರೇ ಗುರುಕುಲ ಪಾಶುಪತ ಸಂಪ್ರದಾಯದ್ದು ಎಂಬುದನ್ನು ಖಚಿತ ಪಡಿಸುತ್ತದೆ. ಇವರ ನಂತರ ಬಂದ ಗುರು ದೇವರಾಜ ಮುನಿಪ. ಆತನ ಹೆಸರಿನಲ್ಲೂ ಮುನಿ ಎಂಬ ಪದವಿದೆ. ಡಾ|| ಬಾಡಾಲ ರಾಮಯ್ಯನವರ ಅಭಿಪ್ರಾಯದ ಪ್ರಕಾರ ಈ ದೇವರಾಜ ಪೂರ್ವಾಶ್ರಮ ಸಂಬಂಧಿ. ನಂತರ ಆತ ಗುರುಕುಲದ ಪೀಠಾಧಿಕಾರಿಯಾದ. ಇಂಥ ಸನ್ಯಾಸಿ ಸಂಪ್ರದಾಯದ ಗುರುಕುಲ, ಮಠ, ದೇವಾಲಯದಲ್ಲಿ ನಾಗಲಾಂಬಿಕೆ ದೇವದಾಸಿ; ಬಸವಿ, ಪರಿಚಾರಿಕೆ ಆಗಿದ್ದಳು ಎಂಬುದು ಇಡೀ ಭಾರತೀಯ ಅಧ್ಯಾತ್ಮಿಕ ಪರಂಪರೆಗೇ ಬಳಿದ ಮಸಿ.

ಮಾದಿಗ ದಂಡೋರ - ಬಾಲ ಬಸಪ್ಪ

ಮಾದಿಗ ದಂಡೋರ ಸಮುದಾಯದಲ್ಲಿ ಬಸಪ್ಪ, ಬಸಮ್ಮ ಎಂಬ ಹೆಸರುಗಳು ಬಹಳ, ಬ್ರಾಹ್ಮಣರಲ್ಲಿ ಇಲ್ಲವೇ ಇಲ್ಲ ಆದ್ದರಿಂದ ಬಸವಣ್ಣನವರು ಮಾದಿಗರು ಮತ್ತು ಮಾದಿಗರಲ್ಲಿ ಮಕ್ಕಳನ್ನು ಬಾಲ ಬಸಪ್ಪ ಹೆಣ್ಣು ಮಕ್ಕಳನ್ನು ಬಸವಿಗಳನ್ನಾಗಿ ಮಾಡುವ ಪದ್ಧತಿ ಇದೆ ಎಂಬುದು ಬಂಜಗೆರೆಯ ಕುತರ್ಕ. ಈಗಾಗಲೇ ಹೇಳಲಾಗಿದೆ ಕರ್ನಾಟಕದ ಬ್ರಾಹ್ಮಣರಲ್ಲಿ 'ಬಸವ' ಹೆಸರು ಇಲ್ಲ ಆದರೆ ಕಮ್ಮೆ ನಾಡಿನ ಲಿಂಗಿಬ್ರಾಹ್ಮಣರಲ್ಲಿ ಅದು ಜನಪ್ರಿಯ ಹೆಸರು. ಬಸವಣ್ಣರ ಮುತ್ತಾತಂದಿರು ಆಂಧ್ರ ನಾಡಿನಿಂದ ವಲಸೆ ಬಂದವರು. ಬಸವಣ್ಣನವರ ಸಾಮಾಜಿಕ ಕಳಕಳಿಯಿಂದ ದಲಿತರು ಉನ್ನತ ಸ್ಥಾನಗಳಿಸಿದಾಗ

ಕೃತಜ್ಞತೆಯಿಂದ ತಮ್ಮ ಮನೆಗಳಲ್ಲಿ ಬಸವಣ್ಣನ ಹೆಸರನ್ನು ಇಡಲಾರಂಭಿಸಿದ್ದಾರೆ. ಮಂಗಳವೇಡೆಯ ಸುತ್ತ ಮುತ್ತ ಮಾದಿಗ ದಂಡೋರ ಜನ ಬಹಳ ಇದ್ದು ಅಲ್ಲಿ ಈ ಹೆಸರು ಬಹಳ ಎಂದು ಬ.ಜ.ಪ್ರ ಬರೆದಿದ್ದಾರೆ ಮಂಗಳವೇಡೆಯಲ್ಲಿ ಬಸವಣ್ಣನವರು ಇದ್ದ ಅವಧಿ 5 ವರ್ಷ (1155-1160). ಸಾಕ್ಷಾತ್ಕಾರ ಹೊಂದಿ, ಇಷ್ಟಲಿಂಗ ಕಂಡು ಹಿಡಿದು, ನವ ಧರ್ಮದ ನೀಲನಕ್ಷೆ ಮನದಲ್ಲಿ ಹೊಂದಿ ತರುಣ ಬಸವಣ್ಣನವರು ಕೂಡಲ ಸಂಗಮದಿಂದ ಹೊರಟು ಮೊದಲು ಬಂದುದು ಮಂಗಳವೇಡೆಗೆ. ಮದುವೆಯಾದುದು, ಕರಣಿಕ ವೃತ್ತಿ ಆರಂಭಿಸಿದ್ದು, ಜೊತೆಗೆ ಧರ್ಮಪ್ರಸಾರ ಆರಂಭಿಸಿದ್ದು ಅಲ್ಲಿಯೆ. ಅಲ್ಲಮಪ್ರಭುದೇವರು ಬಂದು ಮಂಗಳವೇಡೆಯ ಲಿಂಗವಂತರಿಗೆಲ್ಲ ಧರ್ಮ ಬೋಧೆ ಮಾಡಿದರು ಎಂದು ಉಲ್ಲೇಖ ಬರುತ್ತದೆ. ಅಂದರೆ ಪ್ರಭುದೇವರು ಬರುವಷ್ಟರಲ್ಲಿ ಲಿಂಗಾಯತ ಸಮಾಜ ಬಹಳ ಹಬ್ಬಿತ್ತು. ದಲಿತರು ಹೆಚ್ಚು ಸಂಖ್ಯೆಯಲ್ಲಿ ಲಿಂಗಾಯತರಾಗಿದ್ದರು.

'ಬಸವ' ಎನ್ನುವ ಪದಕ್ಕೆ ಹಲವಾರು ಅರ್ಥಗಳಿವೆ. ಮೂಲತಃ ಅದು ಸಂಸ್ಕೃತದ ವೃಷಭ ಪದದ ತದ್ಭವ. ಹಿಂದಿನ

ಕಾಲದಲ್ಲಿ ದೇವಾಲಯಗಳಿಗೆ ಆಕಳ, ಹೋರಿಗಳನ್ನು ಹರಕೆ ರೂಪದಲ್ಲಿ ಬಿಡುತ್ತಿದ್ದರು. ಅಂಥ ಆಕಳಿನ ಹಾಲನ್ನು ಯಾರು ಬೇಕಾದರೂ ಅಗತ್ಯವಿದ್ದವರು ಹಿಂಡಿಕೊಳ್ಳಬಹುದಿತ್ತು. ಅದನ್ನು ಧರ್ಮದ ಕಪಿಲೆ ಎನ್ನುತ್ತಾರೆ. ಬಸವಣ್ಣನವರು ಒಂದು ವಚನದಲ್ಲಿ ತಮ್ಮನ್ನು ಧರ್ಮದ ಕವಿಲೆ ಎಂದು ಕರೆದುಕೊಳ್ಳುತ್ತಾರೆ. "ದೇವರ ಬಸವ" "ಧರ್ಮದ ಕಪಿಲೆ" ಎಂದು ದೇವಾಲಯಗಳಿಗೆ ನೀಡಿದ ಎತ್ತು, ಹೋರಿ, ಆಕಳನ್ನು ಕರೆಯುತ್ತಿದ್ದರು. ಆ ಅರ್ಥದಲ್ಲಿ ಬಸವ ಬಸವಿ ಪದ ರೂಢಿಗೊಂಡು ಕೆಳವರ್ಗದ ಜನರಲ್ಲಿ ದೇವದಾಸಿ, ಊರ ವೇಶ್ಯೆ ಎಂಬರ್ಥದಲ್ಲಿ ಬಳಕೆಯಾಗ ತೊಡಗಿತು. ಒಂದು ಪದಕ್ಕೆ ಹಲವಾರು ಅರ್ಥ ಇರುವಾಗ ಯಾವ ಹಿನ್ನೆಲೆಯಲ್ಲಿ ಪದವನ್ನು ಅರ್ಥ ಮಾಡಬೇಕು ಎಂಬ ವಿವೇಚನೆ ಇರಬೇಕು.

ಜಯಪ್ರಕಾಶ್ ಬರೆಯುತ್ತಾರೆ "ಬಸವ ಎಂಬುದು ಏಕ ವಚನ ಶಿಷ್ಟ ಸಂಪ್ರದಾಯದವರು ಹಾಗೆ ಕರೆದುಕೊಳ್ಳುವುದಿಲ್ಲ, ಕೆಳವರ್ಗದ ಜನ ಮಾತ್ರ ಏಕ ವಚನ ಬಳಕೆ ಮಾಡುತ್ತಾರೆ. ಬಸವ ಪ್ರಯೋಗ ನೋಡಿದರೆ ಜನ್ಮತಃ ಅವರು ಕೆಳವರ್ಗದವರಿರಬೇಕು."

ಇದೂ ಹುಚ್ಚು ತರ್ಕವೆ ! ಹೆಸರು ಏಕ ವಚನವೇ ಇರುತ್ತದೆ. ಅದಕ್ಕೆ ವಿಶೇಷಣ ಸೇರುತ್ತವೆ. ಅದರಲ್ಲಿಯೂ ಮಂತ್ರವಾಗುವುದು. ಕೇವಲ ಹೆಸರು ಮಾತ್ರ. "ಬಸವ" ಎಂಬ ಮೂರಕ್ಷರ ಹೃದಯ ಕಮಲದಲ್ಲಿ ನೆಲೆಗೊಂಡಡೆ ಅಭೇದ್ಯ ಭೇದ್ಯವಾಯಿತು. ಅಸಾಧ್ಯ ಸಾಧ್ಯವಾಯಿತು ಎನ್ನುತ್ತಾರೆ ಶರಣರು. ಮಂತ್ರ ಪುರುಷರಾದ ಶಿವ, ರಾಮ, ಕೃಷ್ಣ ಎಲ್ಲರ ಹೆಸರು ಮಾತ್ರ ಮಂತ್ರಕ್ಕೆ ಬಳಸಲಾಗುವುದು.

ಅಸಂಬದ್ಧ ತರ್ಕದಿಂದ ಕೂಡಿದ ಅನುದೇವಾ ಹೊರಗಣವನು ಪುಸ್ತಕವನ್ನು ಸಮರ್ಗವಾಗಿ ವಿಮರ್ಶೆ ಮಾಡಲಾಗಿದೆ. ಇಂಥ ಅಸಂಬದ್ಧ ಅವಿವೇಕದ ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿದ್ದು ಅಭಿನಂದನೀಯ ಕೆಲವರು, ಸರ್ಕಾರವನ್ನು, ಸಾಹಿತಿಗಳನ್ನು ಎದುರು ಹಾಕಿಕೊಳ್ಳಲಾರದ (ಗದುಗಿನ ಜಗದ್ಗುರುಗಳಂಥವರು) ಮನೋಭಾವದವರು. "ಅನುದೇವಾ ಪುಸ್ತಕವನ್ನು ವಿರೋಧ ಮಾಡಿದ್ದರಿಂದ ಅದರ ಮಹತ್ವ ಹೆಚ್ಚಾಯಿತು. ಪುಸ್ತಕ ಹೆಚ್ಚು ಖರ್ಚಾದವು ಲೇಖಕ/ಪ್ರಕಾಶಕರಿಗೆ ಲಾಭವಾಯಿತು. ಉದಾಸೀನ ಮಾಡಬೇಕಿತ್ತು" ಎಂದು ನಮ್ಮನ್ನು ಟೀಕಿಸಿದರು. ಇದು ಅಪಾಯಕಾರಿ ಮನೋಭಾವ. ಬೆಂಕಿಯ ಕಿಡಿ ಸಣ್ಣದೆಂದು ಉದಾಸೀನ ಮಾಡಬಾರದು. ಹಾವಿನ ಮರಿ ಚಿಕ್ಕದೆಂದು ಭಾವಿಸಬಾರದು. ಮೌನವಾಗಿ ಉಳಿದಿದ್ದರೆ ಬಂಜಗೆರೆಯ ಅಸಂಬದ್ಧ ಊಹೆಗಳಿಗೆ ಎಲ್ಲರ ಮೌನ ಸಮ್ಮತಿ ಇದೆ ಎಂದು ತಪ್ಪು ಸಂದೇಶ ರವಾನೆಯಾಗುತ್ತಿತ್ತು. ನಾಳೆ ಇದನ್ನೇ ಪಠ್ಯ ಪುಸ್ತಕ ಸಹ ಮಾಡುತ್ತಿದ್ದರು. ಕುತೂಹಲದಿಂದ ಜನರು ಜಾಸ್ತಿ, ಪುಸ್ತಕ ಖರೀದಿಸಿರಬಹುದು. ಓದುತ್ತಲೇ ವಿವಾದಗಳಿವೆ ಎಂಬ ಕಲ್ಪನೆ ಬರುತ್ತದೆ ಎಲ್ಲವನ್ನು ಯಥಾ ಸ್ಥಿತಿಯಲ್ಲಿ ನಂಬಲು ಹೋಗುವುದಿಲ್ಲ. ಅಸತ್ಯವನ್ನು ಪ್ರತಿಭಟಿಸುವುದು ಗಣಾಚಾರ.

ಪುಸ್ತಕದ ಮುಟ್ಟುಗೋಲಿನ ನಂತರ ದಲಿತರ ಕೆಲವು ಸಂಘಟನೆಗಳವರು ಮುಟ್ಟುಗೋಲಿನ ವಿರುದ್ಧ, ಪುಸ್ತಕದ ಪರ (ಕ್ಷೀಣ ಧ್ವನಿಯಲ್ಲಿ) ಹೋರಾಟ ಮಾಡಿದರೆಂಬುದು ತಿಳಿದು ಬಂದಿತು. ಧಾರವಾಡದಲ್ಲಿ ಬಸವರಾಜ ದೇವರು ಎಂಬ ಯಾವ ತತ್ತ್ವಕ್ಕೂ ಬದ್ಧರಾಗದ ಓರ್ವರು ಅಂಥ ಒಂದು ಹೋರಾಟದ ನೇತೃತ್ವ ವಹಿಸಿದ್ದು ತಿಳಿಯಿತು. ಉಡುಪಿ ಕೃಷ್ಣ ದೇವಾಲಯದ ವಿರುದ್ಧ ನಡೆದ ಹೋರಾಟ ಮುಗಿಯಿತು ಅಂತ ಕಾಣುತ್ತದೆ. ಅದಕ್ಕೇ ಬಸವಣ್ಣನವರು ಹಾಗೂ ಲಿಂಗಾಯಿತ ಸಮಾಜದ ವಿರುದ್ಧ ಹೋರಾಟಕ್ಕೆ ತೊಡಗಿದಂತೆ ಕಾಣುತ್ತದೆ. ಇಂಥವರನ್ನು ಕುರಿತೇ ಬಸವಣ್ಣನವರು ಹೇಳಿರುವುದು "ನೆರಮನೆಯ ದುಃಖಕ್ಕೆ ಅಳುವವರ ಮೆಚ್ಚ ಲಿಂಗದೇವ" ಎಂದು. ಹಿಂದುಳಿದ ವರ್ಗವಾದ ಕುರುಬ ಜನಾಂಗದ ಸ್ವಾಮಿಗಳು ಎಂಬ ಅಭಿಮಾನದಿಂದ ನಮ್ಮ ಕಲ್ಯಾಣ ಪರ್ವಕ್ಕೆ ಆಹ್ವಾನಿಸಿದ್ದೆವು. ಆಗ ಲಿಂಗಾಯತ ಮಠಾಧೀಶರನ್ನು ಕುರಿತು ಜಾತಿವಾದಿಗಳೆಂದು ಮೈಕಿನ ಮೇಲೆ ಥೂ ಎಂದು ಉಗುಳಿ ಬೈದರು; ತುಂಬಾ ಬೇಸರವಾಯಿತು. ಕೋಳಿ ಮೊಟ್ಟೆಯನ್ನು ಬಿಸಿಯೂಟದಲ್ಲಿ ಕೊಡುವ ಸರ್ಕಾರದ ಯೋಜನೆಯನ್ನು ಬೆಂಬಲಿಸಿ ನಮ್ಮ ಹೋರಾಟ ಖಂಡಿಸಿ ಹೇಳಿಕೆ ಕೊಟ್ಟರು. ನಂತರ 2-3 ವಾರಗಳಲ್ಲಿಯೇ ಬೆಂಗಳೂರು ಬಸವ ಮಂಟಪಕ್ಕೆ ಬಂದು ಉಳಿದುಕೊಳ್ಳಲು ಬಯಸಿದರು. ಅವಕಾಶ ಕೊಟ್ಟೆವಾದರೂ "ಕೋಳಿ ಮೊಟ್ಟೆ ಬೇಕೆನ್ನುವವರಿಗೆ ಬಸವ ಮಂಟಪ ಏಕೆ ?" ಎಂದು ಹೇಳಿ ಕಳಿಸಿದೆ. "ನಾನು ಹಾಗಂದಿಲ್ಲ" ಎಂದು ಜಾರಿಕೊಂಡರು. ಈ ಟೀವಿ ಅವರ ಹೇಳಿಕೆಯನ್ನು ಹಲವಾರು ಬಾರಿ ಬಿತ್ತರಿಸಿತ್ತು. ಹೀಗೆ ಹೊತ್ತಿಗೊಂದು ಪರಿಯ ಧ್ಯೇಯ, ಹೋರಾಟ. ತಮಗೆ ಸಂಬಂಧವಿಲ್ಲದ ಆಚಾರ - ವಿಚಾರ, ಸಂಸ್ಕೃತಿಯ ರಕ್ಷಣೆ ಅವರವರಿಗೆ ಬಿಟ್ಟಿದ್ದು. ಇವರಿಗೇಕೆ ಅದರ ಉಸಾಬರಿ !

(ಮುಗಿಯಿತು.)

ಅಧ್ಯಾತ್ಮಿಕ ಸರೋವರ

ಡಾ|| ಉಮಾದೇವಿ ಶಿವಪ್ರಸಾದ್

ಹೈದರಾಬಾದಿನ ಪ್ರೊ. ಡಾ|| ಉಮಾದೇವಿ ಮುದಿಗೊಂಡ ಶಿವಪ್ರಸಾದ್ ಅವರು ಬಸವ ಪಂಚಮಿ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿದ್ದರು. ಅವರು ಆಂಧ್ರದ ಉದ್ದಾಮ ಕವಿ ಪಾಲ್ಕುರಿಕೆ ಸೋಮನಾಥನ ಬಗ್ಗೆ ವಿಶೇಷ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. ಪಂಚ ಭಾಷಾ ವಿಶಾರದನಾಗಿದ್ದ ಪಾಲ್ಕುರಿಕೆ ಸೋಮನಾಥನು ಎಷ್ಟು ರೀತಿಯಲ್ಲಿ ಬಸವಣ್ಣನವರನ್ನು ಸ್ತುತಿಸಿದ್ದಾನೆ ಎಂಬುದನ್ನು ಮಾರ್ಮಿಕವಾಗಿ ಬಣಿಸಿದ್ದರು. ಪ್ರೊ. ಉಮಾದೇವಿ ಕಾರ್ಯಕ್ರಮ ನೋಡಿ ಬಹಳ ಪ್ರಭಾವಿತರಾಗಿದ್ದು, ಎರಡು ಉಪಮೆಗಳನ್ನು ಹೀಗೆ ನೀಡಿದರು.

1. ನಾನು ಈವರೆಗೂ ಎಷ್ಟೋ ಕಾರ್ಯಕ್ರಮಗಳನ್ನು, ಗುರುಗಳನ್ನು ಕಂಡಿದ್ದೇನೆ. ಆದರೆ ಇಂಥ ಆತ್ಮೀಯ ವಾತಾವರಣವನ್ನು ಎಲ್ಲೂ ಕಂಡಿಲ್ಲ. ತೌರ ಮನೆಯಲ್ಲಿ ಮಕ್ಕಳು ಅನುಭವಿಸುವ ಸಂಭ್ರಮವಿಲ್ಲಿದೆ. ಮಾತಾಜಿಯವರು ತಾಯಿಯ ಸ್ಥಾನದಲ್ಲಿದ್ದು ಎಲ್ಲರ ಮೇಲೆ ತಮ್ಮ ಅಂತಃಕರಣ ಪೂರಿತ ಕೃಪಾದೃಷ್ಟಿಯನ್ನು ಬೀರುತ್ತಿರುವರು. ಶರಣರೆಲ್ಲ ಒಬ್ಬರಿಗೊಬ್ಬರು ಅಣ್ಣ - ತಮ್ಮ, ಅಕ್ಕ - ತಂಗಿಯರಂತೆ ಸಂಭ್ರಮದಿಂದ ಓಡಾಡುತ್ತಲಿರುವರು. ಕೆಲವೊಮ್ಮೆ ಮಾತಾಜಿ (ಕಾರ್ಯಕ್ರಮ ನಡೆದಾಗ ನಮಸ್ಕರಿಸಲು ಬಂದರೆ) ಗದರುವರು. ಆ ಕೋಪದಲ್ಲಿಯೂ ವಾತ್ಸಲ್ಯವಿದೆ. ಈ ಕಾರ್ಯಕ್ರಮ ಅವಿಭಕ್ತ ಕುಟುಂಬದ ಒಂದು ತೌರಿನ ಹಬ್ಬದಂತಿದೆ.

ನಾವು ಆಂಧ್ರದಲ್ಲಿ ಮತ್ತು ಭಾರತದ ಇತರ ಪ್ರಾಂತ್ಯಗಳಲ್ಲಿ ಪರಸ್ಪರ ಸಂಧಿಸಿದಾಗ ನಮಸ್ಕಾರ ಎನ್ನುತ್ತೇವೆ. ಇಲ್ಲಿ ನೀವು ಶರಣು ಶರಣಾರ್ಥಿ ಎಂದಾಗ ನನಗೆ ರೋಮಾಂಚನವಾಯಿತು. ನಾನು ನಿನಗೆ ಶರಣು ಬಂದಿದ್ದೇನೆ ಎಂದು ಉಭಯತರೂ ಹೇಳುವುದು ಎಷ್ಟು ಹೃದಯ ಸ್ಪರ್ಶಿ ಮತ್ತು ಅರ್ಥ ಗರ್ಭಿತ !!

2. ನನಗೆ ಇಲ್ಲಿಯ ಕಾರ್ಯಕ್ರಮದ ಶಿಸ್ತು, ಭಕ್ತಿ ನೋಡಿ ಬಹಳ ಸಂತೋಷವಾಗಿದೆ. ಪೂಜ್ಯ ಮಾತಾಜಿ ಮಾಡಿಸಿದ ಪ್ರಾರ್ಥನೆಯಂತೂ ಅದ್ಭುತ ಪರಿಣಾಮ ಬೀರಿತು. ಅವರ ಕಂಠದ ಮಾಧುರ್ಯಕ್ಕೆ ಮಾರು ಹೋಗಿದ್ದೇನೆ. ಪ್ರಾರ್ಥನೆ ಮಾಡುವಾಗ ನನಗೆ ಅನಿಸಿದ್ದು ಈ ಸಭೆ ಒಂದು ಶುಭ್ರ ನೀರಿನ ಸರೋವರ. ಪೂಜ್ಯ ಮಾತಾಜಿ ಈ ಭಕ್ತಿ ಸರೋವರದಲ್ಲಿ ವಿಹರಿಸುವ ರಾಜ ಹಂಸೆ; ನಾವು ನೀವೆಲ್ಲ ತೇಲುತ್ತಿರುವ ಮರಿ ಹಂಸೆಗಳು.

ಇಂಥ ದಿವ್ಯ ವಾತಾವರಣದಲ್ಲಿ ಭಾಗಿಗಳಾಗಲು ನಮಗೆ ಅವಕಾಶ ಸಿಕ್ಕಿದ್ದಕ್ಕೆ ನಮ್ಮ ಜೀವನ ಧನ್ಯವಾಯಿತು ಎಂದು ನಮಗೆ ಅನ್ನಿಸುತ್ತಿದೆ.

ಚಿತ್ರ ನಾಯಕನ ಹಳ್ಳಿಯಲ್ಲಿ ಬಸವ ಪಂಚಮಿ

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತಿದೆ ಚಳ್ಳಕೆರೆ ತಾಲ್ಲೋಕಿನ ಚಿತ್ರನಾಯಕನ ಹಳ್ಳಿ. 2007ರ ಮೇ 10ರಂದು ಬಸವ ಮಂಟಪ ಉದ್ಘಾಟನೆ, ಮತ್ತು ಗುರು ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆಯಿಂದ ಸುದ್ದಿ ಮಾಡಿದ ಈ ಕುಗ್ರಾಮ ಗ್ರಾಮಾಂತರ ಪ್ರದೇಶದಲ್ಲಿ ಬಸವ ತತ್ವವನ್ನು ಪಸರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪ್ರತಿ ವರ್ಷ ಬಸವ ಪಂಚಮಿಯಂದು ಗ್ರಾಮದ ಬಡ ಮಕ್ಕಳಿಗೆ ಶಿಶುವಿಹಾರಗಳಲ್ಲಿ ಹಾಲನ್ನು ಹಂಚುವ ಪರಿಪಾಠ ಇಟ್ಟುಕೊಂಡ ಚಿತ್ರನಾಯಕನ ಹಳ್ಳಿಯ ರಾಷ್ಟ್ರೀಯ ಬಸವ ದಳದವರು ಈ ಸಲ ಹಾಲು ವಿತರಣೆಯ ಜೊತೆಗೆ ಬಡವರಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಔಷಧಿ ವಿತರಣೆಯ ಕಾರ್ಯಕ್ರಮ ಹಮ್ಮಿಕೊಂಡು ಸುತ್ತಮುತ್ತಲಿನ ಗ್ರಾಮಗಳವರಿಗೆ ನೆರವಾದುದಲ್ಲದೆ ಮಾದರಿಯಾಗಿ ನಿಂತರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿಗೆ ಪಾತ್ರರಾದ ಡಾ|| ಕೆ.ಟಿ. ಸ್ವಾಮಿ ವಹಿಸಿದ್ದರು. ತಾಲ್ಲೋಕು ವೈದ್ಯಾಧಿಕಾರಿ ಡಾ|| ಡಿ.ವಿ.ಸೀತಾರಾಮ್ ಉದ್ಘಾಟಿಸಿದರು. ಪೂಜ್ಯ ಶ್ರೀ ದಾನೇಶ್ವರಿ ಮಾತಾಜಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಓಬಳಾಪುರದ ಡಾ|| ರಾಘವೇಂದ್ರ, ದೊಡ್ಡ ಉಳ್ಳಾರ್ತಿಯ ಡಾ|| ಪಂಕಜ, ಚಳ್ಳಕೆರೆಯ ಡಾ|| ಎಂ.ಎನ್.ಮೃತ್ಯುಂಜಯ ಭಾಗವಹಿಸಿ ರೋಗಿಗಳ ತಪಾಸಣೆ ಮತ್ತು ಔಷಧಿ ವಿತರಣೆ ನೆರವೇರಿಸಿದರು. ವೆಂಕಟೇಶ ರೆಡ್ಡಿ ಸ್ವಾಗತಿಸಿದರು. ಪ್ರತಿಭಾ, ರಾಷ್ಟ್ರೀಯ ಬಸವ ದಳ, ಚಳ್ಳಕೆರೆ ಸಭಾ ನಿರ್ವಹಣೆ ಮಾಡಿದರು.

ಕಲ್ಯಾಣ ಕ್ರಾಂತಿಯ ಸಂಸ್ಮರಣೋತ್ಸವ

ಕಲ್ಯಾಣ ಪರ್ವದ ಸಮಯದಲ್ಲಿ ಚರ್ಚಿಸಿ, ಕಲ್ಯಾಣ ಕ್ರಾಂತಿಯು ಫಾಲ್ಗುಣ ಮಾಸದಲ್ಲಿ ನಡೆದಿದ್ದರೂ ಹೋಳಿ ಹುಣ್ಣಿಮೆಯ ಸಮಯವಾದ್ದರಿಂದ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ದಸರಾ ಸಮಯದಲ್ಲಿ ಮಾಡಲು ನಿರ್ಣಯಿಸಲಾಗಿದೆ. ಆದ್ದರಿಂದ ಶರಣ ಬಂಧುಗಳು ಆಶ್ವಯುಜ ಪ್ರತಿಪದೆಯಿಂದ ಮಹಾನವಮಿಯವರೆಗೆ ದಿನಾಲು ಒಬ್ಬ ಶರಣರ ಚರಿತ್ರೆ ಓದಿ, ವಿಜಯ ದಶಮಿಯ ದಿನ ಮಹಾಮಂಗಲ ಮಾಡಬೇಕೆಂದು ಸೂಚಿಸುತ್ತೇವೆ.

1. ಪ್ರತಿಪದೆ- ಧರ್ಮಗುರು ಬಸವಣ್ಣನವರು 2. ದ್ವಿತೀಯ - ಚಿನ್ಮಯ ಜ್ಞಾನಿ ಚನ್ನಬಸವಣ್ಣ 3. ಶೂನ್ಯ ಪೀಠಾಧೀಶ ಅಲ್ಲಮಪ್ರಭು 4. ವೀರ ವಿರಾಗಿಣಿ ಅಕ್ಕಮಹಾದೇವಿ 5. ಬಸವ ಯೋಗಿ ಸಿದ್ಧರಾಮೇಶ್ವರ 6. ವೀರ ಮಾತೆ ಅಕ್ಕನಾಗಲಾಂಬಿಕೆ 7. ವೀರ ಗಣಾಚಾರಿ ಮಡಿವಾಳ ಮಾಚಿದೇವ 8. ದಾಸೋಹ ಮೂರ್ತಿ ನೀಲಾಂಬಿಕಾ ತಾಯಿ 9. ಹುತಾತ್ಮ ಚೇತನ ಹರಳಯ್ಯ - ಹೀಗೆ ಪಠಿಸಿ, ವಿಜಯ ದಶಮಿಯಂದು ಮೆರವಣಿಗೆ ಮಾಡಿ ಕಾರ್ಯಕ್ರಮ ಮಂಗಲಗೊಳಿಸಬೇಕು.

ಇಷ್ಟಲಿಂಗಯೋಗ

-ಶರಣ ಸಚ್ಚಿದಾನಂದ

(...ಜುಲೈ ಸಂಚಿಕೆಯಲ್ಲಿರುವ ಲೇಖನದೊಂದಿಗೆ ಓದಬೇಕಾಗಿ ವಿನಂತಿ)

"Birds of the same feather flock together" ಎಂದು ಆಂಗ್ಲ ಗಾದೆಯಿದೆ. ಒಂದೇ ರೀತಿಯ ರೆಕ್ಕೆಯ ಹಕ್ಕಿಗಳು ಪರಸ್ಪರ ಆಕರ್ಷಣೆಗೊಳ್ಳುತ್ತವೆ ಎನ್ನುವುದು ಇದರ ತೋರು ಅರ್ಥವಾದರೆ; ಒಂದೇ ಗುಣಧರ್ಮದ ವಸ್ತುಗಳು, ವ್ಯಕ್ತಿಗಳು ಪರಸ್ಪರ ಹತ್ತಿರವಾಗುತ್ತಾರೆ ಎನ್ನುವುದು ಇದರ ಭಾವಾರ್ಥ. ಅದೇ ರೀತಿ ಕಣ್ಣಿನ ಆಲಿಯೂ ಕಪ್ಪು ಮತ್ತು ಹೊಳಪಾಗಿದ್ದು, ಇಷ್ಟಲಿಂಗವು ಕೂಡ ಕಪ್ಪು ಮತ್ತು ಹೊಳಪಾಗಿದೆ. ಆದ್ದರಿಂದ ಇಷ್ಟಲಿಂಗ ನೋಡುತ್ತ ನೋಡುತ್ತಾ ದೀರ್ಘ ಕಾಲದ ವರೆಗೆ ಕುಳಿತರೆ, ಇಷ್ಟಲಿಂಗಕ್ಕೆ ಕಣ್ಣುಗಳು ಆಕರ್ಷಣೆಗೊಂಡು ಸ್ಥಿರವಾಗಿ ನಿಲ್ಲುತ್ತವೆ. ಇಷ್ಟಲಿಂಗವು ವಿಶ್ವ ಚೈತನ್ಯ ಶಕ್ತಿಯನ್ನು ನಮ್ಮ ಕಣ್ಣುಗಳ ಮುಖಾಂತರವಾಗಿ ಸರ್ವಾಂಗಕ್ಕೆ ಒದಗಿಸಲಾರಂಭಿಸುತ್ತದೆ. ಆಗ ನಮ್ಮ ಶರೀರದಲ್ಲಿ ಅನೇಕ ರಸಾಯನಿಕ ಕ್ರಿಯೆಗಳು ನಡೆಯುತ್ತವೆ. ದೇಹ ಹಗುರವಾದಂತೆ ಭಾಸವಾಗಿ ಮನವು ತೇಲಾಡುತ್ತದೆ ಜೊತೆಗೆ ಕಣ್ಣುಗಳಿಂದ ನೀರು ಬರಲು ಆರಂಭಿಸುತ್ತದೆ.

ಅಂಗೈಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವರಿಯುತ್ತ, ಸುರಿಯುತ್ತ ಎಂದಿಪ್ಪೆನೋ?
ನೋಟವೇ ಪ್ರಾಣವಾಗಿ ಎಂದಿಪ್ಪೆನೋ? ಕೂಟವೇ ಪ್ರಾಣವಾಗಿ ಎಂದಿಪ್ಪೆನೋ?
ಎನ್ನಂಗವಿಕಾರದ ಸಂಗವಳಿದು ಲಿಂಗದೇವಯ್ಯ ಲಿಂಗ ಲಿಂಗವೆನ್ನುತ್ತ.

ಈ ರೀತಿಯ ಅನುಭವವಾಗಬೇಕು.

ಕೆಲವೊಮ್ಮೆ ಚಿಕ್ಕಮಕ್ಕಳು ಮಾತು ಕೇಳದೆ ಹಟ ಮಾಡುತ್ತವೆ. ಚಂಚಲ ಸ್ವಭಾವವನ್ನು ವ್ಯಕ್ತಪಡಿಸುತ್ತವೆ. ಆಗ ತಾಯಿ ಚಂದ್ರನನ್ನು ತೋರಿಸಿಯೋ, ಗೆಜ್ಜೆ ಶಬ್ದ ಮಾಡಿಯೋ ಮಗುವನ್ನು ರಮಿಸುತ್ತಾಳೆ. ಅದೇ ರೀತಿ ಕಣ್ಣಾಲಿಗಳು ಕೂಡ ಕೆಲವೊಮ್ಮೆ ನಿಲ್ಲುವುದಿಲ್ಲ. ಇವುಗಳನ್ನು ಏಕಾಗ್ರಗೊಳಿಸಲಿಕ್ಕೆ ಇರುವ ಸಾಧನವೇ ಅಷ್ಟವಿಧಾರ್ಚನೆ ಮತ್ತು ಲಿಂಗಸ್ತವನ. ಹೊರಜಗತ್ತಿನ ವ್ಯವಹಾರಗಳಲ್ಲಿಯೇ ಹೆಚ್ಚು ತೊಡಗಿಸಿಕೊಳ್ಳುವ ವ್ಯಕ್ತಿಯ ಮನಸ್ಸು ಕೂಡ ಪೂಜೆಗೆ ಕುಳಿತ ತಕ್ಷಣವೇ ನಿಲ್ಲುವುದಿಲ್ಲ. ಅದಕ್ಕಾಗಿ ಇಷ್ಟಲಿಂಗಯೋಗ ಮಾಡುವ ಸಾಧಕ/ಭಕ್ತ ಮೊದಲು ಜಲ, ಗಂಧ, ಅಕ್ಷತೆ, ಪತ್ರೆ, ಧೂಪ, ದೀಪ, ನೈವೇದ್ಯ ಹಾಗು ಘಂಟಾನಾದಗಳಿಂದ ಇಷ್ಟಲಿಂಗವನ್ನು ಅರ್ಚಿಸಿ, ತಾನು ಪೂಜೆಗೆ ಕುಳಿತ ಜಾಗದಲ್ಲಿ ಮಂಗಳಮಯುವಾದ ವಾತವರಣವನ್ನು ನಿರ್ಮಿಸಿಕೊಳ್ಳಬೇಕು. ನಂತರ ಲಿಂಗಸ್ತವನ - ಇಷ್ಟಲಿಂಗವನ್ನು ನೋಡುತ್ತ ಲಿಂಗದೇವನ ಗುಣಗಾನ ಮಾಡುವ, ಆತ್ಮ ನಿವೇದನೆ ಮಾಡುವ ವಚನಗಳನ್ನು ಹಾಡಬೇಕು/ಹೇಳಬೇಕು. ಹೊರಜಗತ್ತಿನಲ್ಲಿ ವ್ಯವಹರಿಸುವ ಮನಸ್ಸು ಈಗ ಒಂದು ವಿಶೇಷವಾದ ಸ್ತರಕ್ಕೆ ಬರುತ್ತದೆ. ಇಂಥ ಮನಸ್ಸಿನ ಸಹಾಯದಿಂದ, ಅನಿಮಿಷ (ಅರೆತೆರೆದ) ದೃಷ್ಟಿಯಿಂದ ಇಷ್ಟಲಿಂಗವನ್ನು ನೋಡುತ್ತ , ನೋಡುತ್ತ ದೀರ್ಘವಾದ ಉಸಿರಾಟದೊಡನೆ ಔಂ ಲಿಂಗಾಯನಮಃ ಮಂತ್ರವನ್ನು ಮನಸ್ಸಿನಲ್ಲಿಯೇ ಉಚ್ಚರಿಸುತ್ತ ಹೋದಂತೆ, ವಿಶೇಷವಾದ ಅನುಭವಗಳಾಗುತ್ತವೆ. ಮೈಮನಗಳು ಹಗುರವಾಗಿ ಅಪಾರವಾದ ಆನಂದವಾಗುತ್ತದೆ.

ಈ ರೀತಿ ಇಷ್ಟಲಿಂಗಯೋಗ ಮಾಡುವಾಗ ನಮ್ಮ ಬಲಬದಿಗೆ ಭುಜಕ್ಕಿಂತ ಸ್ವಲ್ಪ ಎತ್ತರದಲ್ಲಿ ಒಂದು ದೀಪವನ್ನು ಇಟ್ಟುಕೊಳ್ಳಬೇಕು. ಇಷ್ಟಲಿಂಗದಲ್ಲಿ ಮೂಡಿದ ಆ ಜ್ಯೋತಿಯ ಪ್ರತಿಬಿಂಬವನ್ನು ನಿರೀಕ್ಷಿಸುತ್ತ ಮಂತ್ರಾನುಸಂಧಾನ ಮಾಡಬೇಕು. ಆಗ ಆ ಸ್ಥಿತಿಯಿಂದ ಏಳಲು ಮನಸ್ಸೇ ಒಪ್ಪುವುದಿಲ್ಲ. ಮೊದಲು ಮೊದಲು ಇಷ್ಟಲಿಂಗಯೋಗ ಮಾಡುವಾಗ, ಕರಸ್ಥಲದಲ್ಲಿ ಇಷ್ಟಲಿಂಗ ನೋಡುವಾಗ, ಕೈ ಸ್ವಲ್ಪ ನೋವು ಬರಲಾರಂಭಿಸುತ್ತದೆ. ಆದರೆ ನೋವನ್ನು ಸ್ವಲ್ಪ ತಡೆದುಕೊಂಡು ಹಾಗೆಯೇ ಇಷ್ಟಲಿಂಗ ನಿರೀಕ್ಷಣೆ ಮುಂದುವರೆಸಿದರೆ, ನೋವು ಮಾಯವಾಗಿ, ಇಷ್ಟಲಿಂಗವು ನನ್ನ ಕೈಯಲ್ಲಿದೆಯೋ ಅಥವಾ ಹಾಗೆಯೇ ಗಾಳಿಯಲ್ಲಿ ತೇಲುತ್ತಿದೆಯೋ ಎನ್ನುವಂತೆ ಭಾಸವಾಗುತ್ತದೆ. ಇಷ್ಟಲಿಂಗದಲ್ಲಿ ಮೂಡಿದ ಜ್ಯೋತಿಯ ಪ್ರತಿಬಿಂಬದ ಹೊರತು ಮತ್ತೇನೂ ಕಾಣುವುದಿಲ್ಲ. ಆಗ ನಾನು ನೆಲದ ಮೇಲೆ ಕುಳಿತಿದ್ದೀನೋ ಅಥವಾ ಹಾಗೆಯೇ ಗಾಳಿಯಲ್ಲಿ ತೇಲುತ್ತಿದ್ದೇನೆಯೋ ಎನ್ನುವಷ್ಟು ಶರೀರ ಹಗುರವಾಗುತ್ತದೆ, ಹಾಗು ಅಪಾರವಾದ ಆನಂದವಾಗುತ್ತದೆ. ಅದಕ್ಕಾಗಿ ಸಾಧಕ/ಭಕ್ತ ಕೈನೋವು ಬಂದ ತಕ್ಷಣ ಪೂಜೆ ಮುಗಿಸಿಬಿಟ್ಟರೆ, ಮುಂದೆ ಸಿಗುವ ಆನಂದದಿಂದ ವಂಚಿತರಾಗಬೇಕಾಗುತ್ತದೆ. ವಯಸ್ಸಾದವರು ಕೈಯನ್ನು ಇಟ್ಟುಕೊಳ್ಳಲಿಕ್ಕೆ ಯೋಗದಂಡವನ್ನು ಮಾಡಿಸಿಕೊಂಡರೆ ಒಳ್ಳೆಯದು.

ಇಷ್ಟಲಿಂಗಯೋಗಕ್ಕೂ ಮನಸ್ಸಿನ ಆನಂದಕ್ಕೂ ಇರುವ ಸಂಬಂಧವನ್ನು ಸಮುದ್ರನೋಡಲು ಹೋದಾಗ ಆಗುವ ಆನಂದಕ್ಕೆ ಹೋಲಿಸಬಹುದು. ಸಮುದ್ರದ ದಂಡೆಗೆ ಹೋದಾಗ, ಮೊದಲು ಕಪ್ಪೆಚಿಪ್ಪುಗಳು ಶಂಖಗಳು ದೊರಕುತ್ತವೆ. ಇವುಗಳನ್ನು ನೋಡಿದಾಗ ಸ್ವಲ್ಪ ಆನಂದವಾಗಬಹುದು. ಹಡಗಿನಲ್ಲಿ ಕುಳಿತು ಸಮುದ್ರದ ಒಳಭಾಗಕ್ಕೆ ಹೋದಾಗ ಸಮುದ್ರದ ವೈಶಾಲ್ಯತೆಯನ್ನು ಕಂಡು ಮೊದಲಿಗಿಂತ ಸ್ವಲ್ಪ ಹೆಚ್ಚು ಆನಂದವಾಗುತ್ತದೆ. ಅಲ್ಲಿ ಅಲೆಗಳಿದ್ದರೂ ಭೋರ್ಗರೆಯುವ ಶಬ್ದವಿರುವುದಿಲ್ಲ. ವಿಶೇಷವಾದ ಸಾಧನಗಳಿಂದ ಸಮುದ್ರದ ಆಳಕ್ಕೆ ಹೋದರೆ ಅಲ್ಲಿ ಮೀನುಗಳು ಭಯಂಕರವಾದ ಜಲಚರಗಳು, ತಿಮಿಂಗಲಗಳು ಇರುತ್ತವೆ. ಇವುಗಳಿಗೆ ಹೆದರದೆ ಮುಂದುವರೆದರೆ ಸಮುದ್ರದ ತಳಭಾಗಕ್ಕೆ ಹೋದಾಗ ಸಮುದ್ರದ ಅಮೂಲ್ಯ ಸಂಪತ್ತಾದ ಮುತ್ತು ರತ್ನ ಹವಳಗಳು ಅಲ್ಲಿ ದೊರಕುತ್ತವೆ. ಆಗ ಮನಸ್ಸಿಗೆ ಅಪಾರವಾದ ಆನಂದವಾಗುತ್ತದೆ. ಇದು ಮೊದಲಿನ ಎರಡೂ ಆನಂದಗಳಿಗೆ ಮೀರಿದ ಆನಂದ!

ಅದೇ ರೀತಿ ಇಷ್ಟಲಿಂಗಾರ್ಚನೆ ಮಾಡುವಾಗ ಅಷ್ಟವಿಧಾರ್ಚನೆಯಿಂದಾಗುವ ಆನಂದ ಕಪ್ಪೆಚಿಪ್ಪು ಶಂಖ ನೋಡಿದಾಗ ಆದ

ಆನಂದದಂತೆ ಮೊದಲಿನದು. ಅಷ್ಟವಿಧಾರ್ಚನೆಯನ್ನು ದಾಟಿ, **ಲಿಂಗಸ್ತವನಕ್ಕೆ** ಬಂದಾಗ ಸಮುದ್ರದ ಮಧ್ಯದಲ್ಲಿ ನಿಂತು ನೋಡಿದಷ್ಟು ಆನಂದವಾಗುತ್ತದೆ. ಯಾವಾಗ ಲಿಂಗಾನುಸಂಧಾನ ಎನ್ನುವ ವಿಶೇಷವಾದ ಕ್ರಿಯೆಯಿಂದ ನಮ್ಮ ಮನಸ್ಸೆಂಬ ಸಮುದ್ರದ ಆಳಕ್ಕೆ ಇಳಿಯುತ್ತೇವೆಯೋ ಆಗ ನಮ್ಮ ಮನಸ್ಸಿನ ಆಳದಲ್ಲಿ ಇರುವ, ಸಂಕಲ್ಪ-ವಿಕಲ್ಪದಿಂದ ಕೂಡಿದ ಚಂಚಲವಾದ ಮನಸ್ಸೆಂಬ ಮೀನಿನ ದರ್ಶನವಾಗುತ್ತದೆ. ಅಲ್ಲೇ ಇರುವ ಕಾಮ ಕ್ರೋಧಾದಿಗಳೆಂಬ ಜಲಚರ, ಅಹಂಕಾರ ಎನ್ನುವ ತಿಮಿಂಗಲಗಳೂ ಗೋಚರಿಸುತ್ತವೆ. ಇವೆಲ್ಲವುಗಳನ್ನು(ಮೆಟ್ಟಿ)ಮೀರಿ ಮನಸ್ಸಿನ ಚಂಚಲತೆಗೆ ಹೆದರದೇ ಲಿಂಗಾನುಸಂಧಾನದ ಆಳಕ್ಕೆ ಇಳಿಯುತ್ತಿದ್ದಂತೆ, ಆನಂದದ ಸ್ಥಿತಿ ಆರಂಭವಾಗುತ್ತದೆ. ಯಾವಾಗ ಲಿಂಗಧ್ಯಾನ ಎನ್ನುವ ತಳಕ್ಕೆ ಇಳಿಯುತ್ತೇವೆಯೋ ಅಲ್ಲಿಯೇ ಅಂತರಂಗದ ಅಮೂಲ್ಯ ನಿಧಿಯಾದ ಲಿಂಗದೇವನ ಸ್ವರೂಪವಾದ ಆತ್ಮ ಚೈತನ್ಯದ ದರ್ಶನವಾಗುತ್ತದೆ. ಇದನ್ನು ಅಕ್ಕನವರ ಅನುಭಾವ ವಾಣಿಯಲ್ಲಿ ಕೇಳಿ ತಿಳಿದುಕೊಂಡರೆ ಇನ್ನೂ ಚೆನ್ನಾಗಿರುತ್ತದೆ.

ಕೋಟಿ ರವಿ ಶಶಿಗಳಿಗೆ ಮೀಂಟಿದ ಪ್ರಭೆ ಬಂದು।
ನಾಟಿತ್ತು ಎನ್ನ ಕರದೊಳಗೆ ಇದ ಕಂಡು।
ದಾಟಿದೆನು ಭವದ ಕುಳಿಗಳನ್ನು ॥

ಲಿಂಗದೇವರು ಎನ್ನುವ ತತ್ವ ಪರಮ ಸತ್ಯವಾದುದು. ಇದು ಜೀವಾತ್ಮನಲ್ಲಿ ಹಲವಾರು ಹಂತಗಳಲ್ಲಿ ಹಾಯ್ದು ಬಂದಿದೆ. ಸಾಧಕನ ಮನಸ್ಸಿಗೆ ಗ್ರಹಿಸಿಕೊಳ್ಳುವ ಶಕ್ತಿ , ಸಾಮರ್ಥ್ಯ ಬಂದಾಗ ಪರಮ ಸತ್ಯವು ಅನುಭಾವಕ್ಕೆ ಬರುತ್ತದೆ. ಆ ಗ್ರಹಿಕೆಯ ಶಕ್ತಿಯನ್ನು ಪಡೆದುಕೊಂಡು, ಕೋಟಿ ರವಿ ಶಶಿಗಳಿಗೆ ಮೀಂಟಿದ ಪ್ರಭೆಯನ್ನು ನಮ್ಮ ಕರಸ್ಥಲದಲ್ಲಿ, ಮನಸ್ಥಲದಲ್ಲಿ, ಭಾವಸ್ಥಲದಲ್ಲಿ ಕಂಡುಕೊಳ್ಳುವುದೇ ಇಷ್ಟಲಿಂಗ ಯೋಗದ ಗುರಿ.

'ಕಣ್ಣು ಎಲ್ಲವನ್ನೂ ನೋಡಬಲ್ಲುದು ತನ್ನ ತಾನು ನೋಡಲಾರದು ತನ್ನನ್ನು ತಾನು ನೋಡಲು ಕನ್ನಡಿ ಬೇಕು; ಆತ್ಮ ಎಲ್ಲವನ್ನೂ ತಿಳಿಯಬಲ್ಲುದು ಆದರೆ ತನ್ನ ತಾ ತಿಳಿಯಲಾರದು, ತನ್ನ ತಾ ತಿಳಿಯಲಿಕ್ಕಾಗಿಯೇ ಇಷ್ಟಲಿಂಗ ದರ್ಪಣ ಬೇಕು' ಎಂದು ಪೂಜ್ಯ ಅಪ್ಪಾಜಿಯವರು ಹೇಳಿದ್ದಾರೆ. ಕನ್ನಡಿಯ ಮುಂದೆ ನಿಂತು ಕಣ್ಣು ಮುಚ್ಚಿಕೊಂಡರೂ ತನ್ನ ರೂಪು ತಾನೆ ನೋಡಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿ ಇಷ್ಟಲಿಂಗ ದರ್ಪಣ ಕೈಯಲಿದ್ದು ಲಿಂಗದೇವನಲ್ಲಿ ನಂಬಿಕೆ, ಅವನ ಕಾರುಣ್ಯದ ಮಹಿಮೆ ಅರಿಯದಿದ್ದರೆ, ಮನದಲ್ಲಿ ಭಕ್ತಿ ಹುಟ್ಟದಿದ್ದರೆ ಇಷ್ಟಲಿಂಗಯೋಗ ಫಲ ಕೊಡಲಾರದು.

ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು?
ನಮ್ಮ ಲಿಂಗದೇವನ ಅರಿಯದವರ ಕೈಯಲ್ಲಿ ಲಿಂಗವಿದ್ದು ಫಲವೇನು?

ಇಷ್ಟಲಿಂಗದ ಮಹತ್ವವನ್ನು ಅರಿತು ಭಕ್ತಿಯಿಂದ ಅರ್ಚಿಸದಿದ್ದರೆ ಅದು ಮಂಗನ ಕೈಯಲ್ಲಿರುವ ಮಾಣಿಕ್ಯವಿದ್ದಂತೆ. ಕುರುಡನ ಕೈಯಲ್ಲಿರುವ ಕನ್ನಡಿಗೆ ಸಮ. ಹೇಡಿಯ ಕೈಯಲ್ಲಿರುವ ಆಯುಧದಂತೆ. ಅದಕ್ಕಾಗಿ ನಾವು ಇಷ್ಟಲಿಂಗದ ಮಹತ್ವವನ್ನು ಅರಿತು ಆಚರಿಸಬೇಕು. ಇಂದು ದುರ್ದೈವದ ಸಂಗತಿಯೆಂದರೆ, ಅನೇಕ ಜನ ಲಿಂಗಾಯತರ ಕೈಯಲ್ಲಿ ರುವ ಇಷ್ಟಲಿಂಗ ಮಂಗನ ಕೈಯಲ್ಲಿರುವ ಮಾಣಿಕ್ಯ, ಅಂಧಕನ ಕೈಯ ದರ್ಪಣದಂತೆ, ಹೇಡಿಯ ಕೈಯಲಿರುವ ಆಯುಧಗಳಾಂತಾಗಿದೆ.

ಒಂದು ಊರಿನಲ್ಲಿ ಒಬ್ಬ ಶೂರನಾದ ಶ್ರೀಮಂತನಿದ್ದ ಅವನಿಗೆ ಒಬ್ಬ ಮಗನಿದ್ದ. ವ್ಯಾಪಾರಕ್ಕಾಗಿ ಬೇರೆ ಊರಿಗೆ ಹೋಗುವ ಸಂದರ್ಭ ಬಂದಾಗ ಮಗನ ಕೈಯಲ್ಲಿ ಪಿಸ್ತೋಲ್ ಕೊಟ್ಟ ಕಳ್ಳರು ಬಂದರೆ ಅವರಿಗೆ ಇದರಿಂದ ಹೆದರಿಸು ಪ್ರಸಂಗ ಬಂದರೆ ಹೊಡೆದುಹಾಕು ಎಂದು ಹೇಳಿ ಹೋದ. ಮರುದಿನ ರಾತ್ರಿ ಆ ಮನೆಗೆ ಕಳ್ಳರು ನುಗ್ಗಿದರು. ಎಲ್ಲಾ ಹಣ ಒಡವೆಗಳನ್ನು ದೋಚಿಕೊಂಡು ಹೋಗುತ್ತಿರುವುದನ್ನು ನೋಡಿದ ಹೇಡಿ ಮಗನು, ಪಿಸ್ತೋಲ್ ಕೂಡ ಕದ್ದುಕೊಂಡು ಹೋಗಬಹುದು ಎಂದು ತಿಳಿದು ಪಿಸ್ತೋಲ್ ಜೊತೆ ತಾನು ಅವಿತುಕೊಂಡನು. ಮರುದಿನ ತಂದೆ ಬಂದು ನೋಡಿದಾಗ ವಿಷಯ ತಿಳಿದು, ನೀನು ಪಿಸ್ತೋಲ್‌ದಿಂದ ಯಾಕೆ ಅವರನ್ನು ಹೊಡೆಯಲಿಲ್ಲ ಎಂದು ಕೇಳಿದಾಗ, ಇದನ್ನು ಕದ್ದುಕೊಂಡು ಹೋಗಬಹುದು ಎಂದು ಜೋಪಾನವಾಗಿ ಮುಚ್ಚಿಟ್ಟಿದ್ದೆ ಎಂದು ಹೇಳಿ ಪಿಸ್ತೋಲನ್ನು ತೆಗೆದು ತೋರಿಸಿದ. ಇಂಥ ಅಜ್ಞಾನಿ ಮತ್ತು ಹೇಡಿ ಮಗನನ್ನು ಪಡೆದುದಕ್ಕಾಗಿ ಆ ತಂದೆ ಅಳಬೇಕೋ ನಗಬೇಕೋ ಎಂದು ತಿಳಿಯದಾದ.

ಬಸವ ತತ್ವದ ಸ್ಪರ್ಶವಾಗದೇ ಇರುವ ಅನೇಕ ಲಿಂಗಾಯತರ ಪರಿಸ್ಥಿತಿಯೂ ಹೀಗೆಯೇ ಆಗಿದೆ. ಇಷ್ಟಲಿಂಗ ಕಟ್ಟಿಕೊಳ್ಳದಕ್ಕೆ ಕಾರಣ ಕೇಳಿದರೆ ಹೊರಗಡೆ ಓಡಾಡುತ್ತೇವೆ ಮೈಲಿಗೆಯಾಗುತ್ತೆ ಎಂದು ಹೇಳುತ್ತಾರೆ. ಎಂಥಾ ಹಾಸ್ಯಾಸ್ಪದವಾದ ಮಾತು! ಇಷ್ಟಲಿಂಗವು ಸಾಕ್ಷಾತ್ ಲಿಂಗದೇವನ ಸ್ವರೂಪ. ಮೈಲಿಗೆಯನ್ನು ಕಳೆದು ನಿರ್ಮಲತ್ವವನ್ನು ಕೊಡುವುದು, ಅನಿಷ್ಟವನ್ನು ಕಳೆದು ಇಷ್ಟಾರ್ಥವನ್ನೀವ ವಸ್ತುವೇ ಇಷ್ಟಲಿಂಗ. ಇದಕ್ಕೆ ಎಲ್ಲಿಯಾದರೂ ಮೈಲಿಗೆಯಾಗಲು ಸಾಧ್ಯವೇ?! ಮತ್ತೆ ಕೆಲವರು ದಿನನಿತ್ಯ ಪೂಜಿಸಲು ಆಗುವುದಿಲ್ಲ ಅದಕ್ಕೇ ಧರಿಸಲು ಆಗುವುದಿಲ್ಲ ಎನ್ನುತ್ತಾರೆ. ದಿನನಿತ್ಯ ಪೂಜಿಸಲಿಕ್ಕಾಗದಂಥ ಅನಿವಾರ್ಯವಿದ್ದರೆ ಅನುಕೂಲವಾದಾಗ ಪೂಜಿಸಬೇಕು. ಇದರಿಂದ ಲಿಂಗದೇವನೇನು ಕೋಪಗೊಳ್ಳುತ್ತಾನೆಯೇ? ಃಲಿಂಗದೇವನ ಪೂಜಿಸಿದ ಫಲ ಕೈಯ ಮೇಲೆಃಎಂದು ಗುರು ಬಸವಣ್ಣನವರು ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ಅನೇಕ ಲಿಂಗಾಯತರಿಗೆ ಇಷ್ಟಲಿಂಗದ ಮಹತ್ವ ತಿಳಿಯದೇ ಇರುವುದಕ್ಕೆ ಕಾರಣವೇನು? ಹತ್ತಲ ಗಿಡ ಮದ್ದಲ್ಲ ಎನ್ನು ವಂತೆ, ಪರಂಪರಾಗತವಾಗಿ ಯಾವುದೇ

ಕಷ್ಟಗಳಿಲ್ಲದೆಯೇ ಇಷ್ಟಲಿಂಗ ಕೈಗೆ ಸಿಕ್ಕಿರುವುದರಿಂದ ಇದರ ಮಹತ್ವ ಅನೇಕರಿಗೆ ತಿಳಿಯುತ್ತಿಲ್ಲ, ಅರಿತುಕೊಳ್ಳುವ ಪ್ರಯತ್ನವನ್ನು ಮಾಡುತ್ತಿಲ್ಲ. ಏಕೆಂದರೆ ದೇವಸ್ಥಾನಗಳಿಗೆ ಹೋಗುವಾಗ ಇವರನ್ನು ಯಾರೂ ದೂಡಲಿಲ್ಲ, ನೀವು ಒಳಗೆ ಬರಬೇಡಿ ಎಂದು ಹೇಳಲಿಲ್ಲ. ನಾವು ಸಿದ್ಧರಾಮೇಶ್ವರರಂತೆ ಅಯ್ಯಾ... ಅಯ್ಯಾ.. ಎಂದು ಒರಲಲಿಲ್ಲ, ಬಳಲಲಿಲ್ಲ ವಸುಧೀಶ ಭೂಪಾಲನಂತೆ ಲಿಂಗದರ್ಶನವಿಲ್ಲದೆ ಕೊರಗಲಿಲ್ಲ, ನೋವನ್ನು ಅನುಭವಿಸಲಿಲ್ಲ. ಹೀಗಾಗಿ ನಮಗೆ ಇದರ ಅರಿವು ಆಗುತ್ತಿಲ್ಲ. ನಮಗೆ ಇಷ್ಟಲಿಂಗ ಕೊಡುವಾಗ ಹಲವಾರು ಪರೀಕ್ಷೆ ಗಳನ್ನೊಡ್ಡಿ ಕೊಟ್ಟಿದ್ದರೆ ಇದರ ಮಹತ್ವ ಗೊತ್ತಾಗುತ್ತಿತ್ತೇನೋ?! ಆದರೆ ಕರುಣಾಮಯಿಯಾದ ಅಪ್ಪ ಬಸವಣ್ಣನವರು ಯಾವುದೇ ಪರೀಕ್ಷೆಯಿಲ್ಲದೆ ಮನುಕುಲದ ಮೇಲಿನ ಅಪಾರವಾದ ಮಮತೆಯಿಂದ ಉದಾರವಾಗಿ ಬಯಸಿ ಬಂದವರಿಗೆಲ್ಲ ಕೊಟ್ಟರು. ಅವರ ಮಮತೆ ಕರುಣೆಯನ್ನು, ಅರಿಯಲಾರದಷ್ಟು ಯತಿಗೆಟ್ಟು ಋಣಗೇಡಿಯಾಗಿರುವ ಲಿಂಗಾಯತರನ್ನು ನೋಡಿ ಮನಸ್ಸಿಗೆ ತುಂಬಾ ನೋವಾಗುತ್ತದೆ.

ಅನೇಕ ಯೋಗಗಳನ್ನು ಸಿದ್ಧಿಸಿಕೊಂಡಿರುವ ಸಿದ್ಧರಾಮೇಶ್ವರರು, ಸಾಧಕ ಜೀವನದಲ್ಲಿರುವಾಗ ದೇವರಿಗಾಗಿ ತುಂಬಾ ಹಂಬಲಿಸಿದರು. ಃನೀ ಬಾರಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ, ನೀ ಬಾರದಿದ್ದರೆ ನಾನು ಕಲ್ಲು ಮರನಾಗಿಹೆ ಃ ಎಂದು ಬಳಲಿದರು, ದೇವರಿಗಾಗಿ ಕಣ್ಣೀರಿಟ್ಟಿದ್ದರು. ಕಡೆನಾಡ (ಶ್ರೀಶೈಲ) ಲಿಂಗವ ನಡುನಾಡಿಗೆ(ಸೊನ್ನಲಾಪುರಕ್ಕೆ) ತಂದು ಪ್ರತಿಷ್ಠಾಪಿಸಿದರು. ಇದಾವುದೂ ಅವರಿಗೆ ತೃಪ್ತಿ ಕೊಡಲಿಲ್ಲ, ಆದರೆ ಇಷ್ಟಲಿಂಗವನ್ನು ನೋಡಿದಾಗ, ಕಪಿಲಸಿದ್ದ ಮಲ್ಲಿಕಾರ್ಜುನ(ಸ್ಥಾವರ) ಲಿಂಗವನ್ನು ಬಿಟ್ಟು ಯೋಗಿನಾಥ(ಇಷ್ಟಲಿಂಗದೇವ) ನನ್ನು ಅಪ್ಪಿಕೊಂಡ ಬಗೆ ಹೃದಯಸ್ಪರ್ಶಿಯಾಗಿದೆ.

ಎಲ್ಲಾ ಪ್ರಮಥರು ಲಿಂಗವ ಧರಿಸುತ್ತಿರಲು
ನಾನು ಒಲ್ಲೆನೆಂಬುದು ಕರ್ಮದ ಬಲೆಯೋ ಮಾಯದ ಬಲೆಯೋ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನ, ನಾ ಧರಿಸಿಕೊಂಬುವೆ ಲಿಂಗವ
ನೀ ಕರೆಸಿಕೊಂಬುವನಾಗು ನಿನ್ನ ಪೂಜೆಗೆ ಮತ್ತೋರ್ವನ
ನಾನು ನಿನ್ನವನ್ನಲ್ಲೆಲೆ ದೇವಾ.

ನಾನೀಗ ಇಷ್ಟಲಿಂಗವನ್ನು ಧರಿಸುತ್ತೇನೆ. ಕಪಿಲಸಿದ್ಧಮಲ್ಲಿಕಾರ್ಜುನ(ಸ್ಥಾವರ ಲಿಂಗ)ನೇ ನೀನು ನಿನ್ನ ಪೂಜೆಗೆ ಬೇರೊಬ್ಬರನ್ನು ಕರೆಸಿಕೊ.. ಎಂದು ಹೇಳುವುದನ್ನು ಅರಿತುಕೊಂಡಾದರೂ ಸ್ಥಾವರ ಆರಾಧಕ, ಬಹು ದೇವತೋಪಾಸಕ ಲಿಂಗಾಯತರಿಗೆ ಬುದ್ಧಿ ಬರಬೇಕು.

ಕಸವ ಕೊಂಡು ಹೊಸ ಧಾನ್ಯವ ಕೊಟ್ಟೊಡೆ ಒಲ್ಲೆನೆಂಬ ಚದುರರಾರು?
ಜಲವ ಕೊಂಡು ಅಮೃತವ ಕೊಟ್ಟೊಡೆ ಒಲ್ಲೆನೆಂಬ ಭಾಷೆಯದಾರದು?
ಎನ್ನಂತರಂಗದ ಅಜ್ಞಾನವ ಕೊಂದು ಸುಜ್ಞಾನವಪ್ಪ ತಮ್ಮ ಕರತೇಜವನಿತ್ತರೆ
ಒಲ್ಲೆನೆಂಬ ಪಾತಕಿ ಯಾರು ಕಪಿಲಸಿದ್ಧಮಲ್ಲಿಕಾರ್ಜುನ ಮಡಿವಾಳ ತಂದೆ.

ಎಂದು ಸಿದ್ಧಪುರುಷನಾಗಿದ್ದ ಸಿದ್ಧರಾಮೇಶ್ವರರೇ ಇಷ್ಟಲಿಂಗವನ್ನು ಧರಿಸಿಕೊಂಡರು. ಕೆಲವರು ಇಷ್ಟಲಿಂಗವನ್ನು ಕಟ್ಟಿಕೊಳ್ಳುವುದಿಲ್ಲ, ಕೆಲವರು ಕಟ್ಟಿಕೊಂಡರೂ ಹೊರಗೆ ಹೋಗುವಾಗ ಮನೆಯಲ್ಲಿಯೇ ಬಿಟ್ಟು ಹೋಗುತ್ತಾರೆ. ಕೆಲವರಂತೂ ವರ್ಷಕ್ಕೊಮ್ಮೆ ಮಾತ್ರ ಗಾಳಿ ಬೆಳಕು ನೀರನ್ನು ತೋರಿಸುತ್ತಾರೆ. ಅಲ್ಲಮ ಪ್ರಭುದೇವರು ಅನುಭಾವ ಮಂಟಪಕ್ಕೆ ಬರುವ ಮೊದಲೇ ಎಲ್ಲವನ್ನೂ ಬಲ್ಲವರಾಗಿದ್ದರು. ವ್ಯೋಮಕಾಯ ಸಿದ್ಧಿಯನ್ನು ಪಡೆದಿದ್ದರು. ಲೌಕಿಕವಾದ ಅನೇಕ ಪದವಿಗಳು, ರಾಜಕುಮಾರಿಯ ಕೈ ಹಿಡಿಯುವ ಅವಕಾಶ ಒದಗಿ ಬಂದರೂ ಸಂತೋಷಗೊಳ್ಳಲಿಲ್ಲ. ಮಾಯಾದೇವಿ ಅವರನ್ನು ಮೋಹಿಸಿದ ಬಗ್ಗೆ ಆಕೆಯ ಸಖಿಯರು ಪ್ರಭುಲಿಂಗಲೀಲೆಯಲ್ಲಿ ಹೀಗೆ ಹೇಳಿದ್ದಾರೆ.

ನಿನಗೆ ಸಾಕಿನ್ನೇಕೆ ಬೀಡಿನ
ಮನೆ ವೃಥಾ ಬೇರೊಂದು ಪರಿಕಲ್ಪನೆಯ ಬಿಡು
ನಮ್ಮೊಡತಿಯಾದೊಡೆ ಮುಟ್ಟಿ ಮೋಹದಲಿ
ನಿನಗೆ ಕೃಪೆಯಾಗಿರ್ದಳೆಮ್ಮವರ
ಮನೆಯೊಳಿರು ಸುಖವಾಗಿ
ನೀನೆಂದೆನುತ ನಯದಲಿ ನುಡಿದಳಾ ಮದಮಾನಿಯಲ್ಲಮನಿಗೆ

ನಮ್ಮೊಡತಿ ನಿನಗೆ ಮನಸೋತಿದ್ದಾಳೆ. ಗುಡಿಸಿಲಿನ ಮನೆ ಬಿಟ್ಟು ರಾಜೋಪಚಾರದಲ್ಲಿ ಅರಮನೆಯಲ್ಲಿರು ಎಂದರೂ ಅಲ್ಲಮ ಪ್ರಭುದೇವರಿಗೆ ಸಂತೋಷವಾಗಲಿಲ್ಲ. ಆದರೆ ಅನಿಮಿಷನ ಕರಸ್ಥಲದಲ್ಲಿರುವ ಇಷ್ಟಲಿಂಗವನ್ನು ನೋಡಿದಾಗ ಅವರಿಗಾದ ಆನಂದ, ಸಂಭ್ರಮವನ್ನು ನನ್ನ ಪದಗಳಲ್ಲಿ ಬಣ್ಣಿಸಲು ಸಾಧ್ಯವಿಲ್ಲ; ಅದಕ್ಕಾಗಿ ಅವರನ್ನೇ ಕೇಳೋಣ!

ಅರಸುವ ಬಳ್ಳಿ, ಕಾಲ ಸುತ್ತಿತೆಂಬಂತೆ, ಬಯಸುವ ಬಯಕೆ ಕೈಸಾರಿದಂತೆ
ಬಡವ ನಿಧಾನವನೆಡಹಿ ಕಂಡಂತೆ, ನಾನರಸುತ್ತಲರಸುತ್ತ ಬಂದು
ಭಾವಕ್ಕಗಮ್ಯನಾದ ಮೂರ್ತಿಯ ಕಂಡೆ ನೋಡಾ!
ಎನ್ನ ಒಳಹೊರಗೆ ಎಡದೆರಹಿಲ್ಲದೆ ಥಳ ಥಳಿಸಿ ಹೊಳೆಯುವ
ಅಖಂಡ ಜ್ಯೋತಿಯ ಕಂಡೆ ನೋಡಾ! ಎನ್ನ ಅರಿವಿನ ಹರಿವ ಕಂಡೆ ನೋಡಾ

ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ
ಎನ್ನ ಪರಮಗುರುವ ಕಂಡು ಬದುಕಿದೆನು ಕಾಣಾ ಗುಹೇಶ್ವರಾ.

'*ಅಯ್ಯಾ.. ನೀನೆನಗೆ ಶ್ರೀಗುರುವಪ್ಪೊಡೆ, ನಾ ನಿನಗೆ ಶಿಷ್ಯನಪ್ಪೊಡೆ.....ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡಾ ಗುಹೇಶ್ವರ.*' ಈ ಎರಡೂ ವಚನಗಳಲ್ಲಿ ಇಷ್ಟಲಿಂಗವನ್ನು ಕಂಡಾಗ ಅವರಿಗಾದ ಸಂತಸ, ಹರ್ಷವನ್ನು ಅವರ ಭಾವದಲ್ಲಿ ನಮ್ಮ ಭಾವವನ್ನು ಬೆರೆಸಿ ನೋಡಿದಾಗ ಮಾತ್ರ ನಮ್ಮ ಅರಿವಿಗೆ ಬರುತ್ತದೆ.

'*ನೆನೆದಹೆನೆಂದಡೆ ಮನಕ್ಕೆ ಸಿಲುಕದ, ಅರಿದೆಹೆನೆಂದಡೆ ಕುರುಹಿಂಗೆಬಾರದ ಘನವು ನಿಮ್ಮ ಮನಕ್ಕೆ ವೇದ್ಯವಾದ ಪರಿಯಂತು ಹೇಳಾ ಸಂಗನ ಬಸವಣ್ಣ?*' ಎಂದು ಸಂಭ್ರಾಂತರಾಗಿ ಗುರು ಬಸವಣ್ಣನವರಿಗೆ ಕೇಳುತ್ತಾರೆ. ಅಲ್ಲಮ ಪ್ರಭುದೇವರು ಅಲ್ಲಿಗಾಗಲೇ ಸರ್ವ ಸಿದ್ದಿಯನ್ನು ಪಡೆದಿದ್ದರೂ ಇಷ್ಟಲಿಂಗವನ್ನು ಪಡೆದಾಗ ಸಂಭ್ರಮಿಸಿದ ರೀತಿಯನ್ನು ನೋಡಿಯಾದರೂ ಲಿಂಗಾಯತರೆನಿಸಿಕೊಳ್ಳುವವರು ಕಲಿಯಬೇಕು.

ಹಲವಾರು ಜನ್ಮಗಳ ಪುಣ್ಯದ ಫಲದಿಂದ ಇಷ್ಟಲಿಂಗ ಪ್ರಾಪ್ತಿಯಾಗುತ್ತದೆ ಎಂದು ನೂರಾರು ಶರಣ ಶರಣೆಯರು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಆದಕ್ಕಾಗಿ ಇಂಥ ಶ್ರೇಷ್ಠ ಲಾಂಛನವಾದ ಇಷ್ಟಲಿಂಗವನ್ನು ಪ್ರತಿಯೊಬ್ಬರೂ ಅಭಿಮಾನದಿಂದ ಧರಿಸಿ, ಭಕ್ತಿಯಿಂದ ಅರ್ಚಿಸಿ, ನಿಷ್ಠೆಯಿಂದ ಇಷ್ಟಲಿಂಗಯೋಗ ಮಾಡಿದ್ದೇಯಾದರೆ ಖಂಡಿತವಾಗಿಯೂ 12ನೇ ಶತಮಾನದ ಶರಣರಂತೆ ಜ್ಞಾನಿಗಳಾಗಲು ಸಾಧ್ಯವಿದೆ.

ಇಷ್ಟಲಿಂಗಯೋಗವನ್ನು ಸಂನ್ಯಾಸಿ, ಸಂಸಾರಿ, ವಿದ್ಯಾರ್ಥಿ, ಉದ್ಯೋಗಿ, ಮಕ್ಕಳು ಮುದುಕರು , ಸ್ತ್ರೀ ಪುರುಷರು ಎನ್ನುವ ಭೇದವಿಲ್ಲದೆ ಎಲ್ಲರೂ ಮಾಡಬೇಕು. ಇದರಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅವರವರ ಕಾರ್ಯದಕ್ಷತೆ ಹೆಚ್ಚಾಗುತ್ತದೆ. ವ್ಯಕ್ತಿಯು ಮೆಲ್ಲ ಮೆಲ್ಲನೆ ಜ್ಞಾನಿಯಾಗುತ್ತಾನೆ. ವಚನ ಸಾಹಿತ್ಯ ಅರ್ಥವಾಗುತ್ತದೆ. ಅದರಲ್ಲೂ ವಿದ್ಯಾರ್ಥಿಗಳು ಇಷ್ಟಲಿಂಗಯೋಗ ಮಾಡುವುದರಿಂದ ಅವರ ಏಕಾಗ್ರತೆ ಹೆಚ್ಚಾಗಿ, ಗ್ರಹಣ ಶಕ್ತಿ ವೃದ್ಧಿಯಾಗುತ್ತದೆ. ಓದಿದ್ದು ಚೆನ್ನಾಗಿ ನೆನಪಿನಲ್ಲಿರುತ್ತದೆ. ತಮ್ಮ ಜೀವನದ ಎಂಥದ್ದೇ ಕಷ್ಟದಲ್ಲಿಯೂ ಕೂಡ ಅವರು ಎದೆ ಗುಂದುವುದಿಲ್ಲ . ಕಾರಣ, ಲಿಂಗದೇವನಲ್ಲಿ ಶರಣಾಗತಿ ಅಳವಟ್ಟಿರುತ್ತದೆ. ಇದು ನನ್ನ ಜೀವನದ ಅನುಭವವೂ ಕೂಡ ಆಗಿದೆ. ವಿದ್ಯಾರ್ಥಿಗಳ ಜೀವನದಲ್ಲಿ ಪೂಜೆ ಧ್ಯಾನಗಳು ವೇಗವರ್ಧಕ (Catalyst) ದಂತೆ ಕೆಲಸ ಮಾಡಿ ಅವರ ಪ್ರತಿಭೆಯನ್ನು ಹೆಚ್ಚಿಸುತ್ತವೆ. ಇಂಥ ಶ್ರೇಷ್ಠವಾದ ತತ್ವವನ್ನೊಳಗೊಂಡ ಧರ್ಮದ ಅನುಯಾಯಿಗಳಾಗಿರುವ ನಾವು ಇಷ್ಟಲಿಂಗಯೋಗ ಮಾಡುವುದರ ಜೊತೆಗೆ ಮಕ್ಕಳಿಗೂ ಕೂಡ ಇದರ ಮಹತ್ವವನ್ನು ತಿಳಿಸಿಕೊಡಬೇಕು. ಅವರಿಂದ ಇಷ್ಟಲಿಂಗಯೋಗ ಮಾಡಿಸಬೇಕು. ಈ ಮೂಲಕವಾಗಿ ಅವರನ್ನು ಶ್ರೇಷ್ಠ ಅಧ್ಯಾತ್ಮ ಸಂಪತ್ತಿಗೆ ಒಡೆಯರನ್ನಾಗಿ ಮಾಡಬೇಕು ಇದು ತಾಯಿ ತಂದೆಯರ ನಿಜವಾದ ಕರ್ತವ್ಯ. ಇಷ್ಟಲಿಂಗ ಯೋಗವನ್ನು ಗಾಂಧಾರಿ ಮಾಂಧಾರಿಯೆಂಬ ಅಹೋರಾತ್ರಿಯಲ್ಲಿ ಮಾಡಿದರೆ ತುಂಬಾ ಒಳ್ಳೆಯ ಪರಿಣಾಮ ಕೊಡುತ್ತದೆ. ವಯಸ್ಸಾದವರು, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರು ತಮಗೆ ಅನುಕೂಲವಾದಾಗ ಮಾಡಬಹುದು. ಆದರೆ ಮನೆಯಲ್ಲಿರುವವರು ಮಾತ್ರ ನಸುಕಿನಲ್ಲಿ ಅಥವಾ ಬೆಳಗಿನ ಜಾವದಲ್ಲಿಯೇ ಮಾಡಬೇಕು.

ಕೋಳಿ ಕೂಗುವ ಮುನ್ನ ಏಳುವುದು ।ಬೇಗದಲಿ
ಭಾಳಲೋಚನನ ಭಕ್ತಿಯಿಂದ ನೆನೆದರೆ ಅವ
ಆಳಿನಾಳಯ್ಯ ಸರ್ವಜ್ಞ॥

ಲಿಂಗದೇವನು ಭಕ್ತ ವತ್ಸಲನಾಗಿರುವುದರಿಂದ ಅವನನ್ನು ಭಕ್ತಿಯಿಂದ ನೆನೆದರೆ, ನಂಬಿ ಕರೆದಡೆ ಓ... ಎಂದು ಭಕ್ತನಿದ್ದಲಿಗೆ ಬರುತ್ತಾನೆ. ಭಕ್ತನ ಕಷ್ಟಗಳನ್ನು ತನ್ನ ಕಾರುಣ್ಯ ಹಸ್ತವನ್ನು ನೀಡಿ ಪರಿಹರಿಸುತ್ತಾನೆ.

ಮುಂದುಜಾವದಲ್ಲೆದ್ದು ಲಿಂಗದಂಘ್ರಿಯ ಮುಟ್ಟಿ
ಸುಪ್ರಭಾತದಲ್ಲಿ ಶರಣರ ಮುಖವ ನೋಡುವುದು
ಹುಟ್ಟಿದ ಜನ್ಮಕ್ಕೆ ಇದೇ ಸಫಲವೊ ಎನ್ನ ತಂದೆ
ಇಂತಿಲ್ಲದವರನೊಲ್ಲ ನಮ್ಮ ಲಿಂಗದೇವ

ಎಂದು ಧರ್ಮಪಿತರು ಒಂದು ವಚನದಲ್ಲಿ ಹೇಳುತ್ತಾರೆ.

ಕೊನೇ ಪಕ್ಷ ನಾವು ಮೂಢ ಭಕ್ತರನ್ನು ನೋಡಿಯಾದರು ಕಲಿಯಬೇಕು. ಬಿಧನುರ್ಮಾಸಬಿ ಆಚರಣೆ ಮಾಡುವಾಗ, ಗಿಡ ಮರ ಸುತ್ತುವದಕ್ಕಾಗಿ ಒಂದು ತಿಂಗಳ ಕಾಲ ಬೆಳಿಗ್ಗ 4-00 ಗಂಟೆಗೆ ಎದ್ದು ಸ್ನಾನ ಮಾಡಿ ಜಡವಾದ ಒಣಗುವ ಮರವನ್ನು ಸುತ್ತುತ್ತಾರೆ. ಸಾಕ್ಷಾತ್ ಲಿಂಗದೇವನನ್ನು ಅರ್ಚಿಸುವ ನಾವೇಕೆ ಬೆಳಿಗ್ಗ 4-00 ಗಂಟೆಗೆ ಏಳಬಾರದು? ವರ್ಷವಿಡೀ ಸಾಧ್ಯವಾಗದೇ ಇದ್ದರೂ ಈಗ ನಮ್ಮ ಪವಿತ್ರ ಮಾಸವಾದ ಶ್ರಾವಣ ಮಾಸ ಬಂದಿದೆ . ಪ್ರತಿ ವರ್ಷ ಈ ಒಂದು ಮಾಸದಲ್ಲಿಯಾದರೂ 4-00 ಗಂಟೆಗೆ ಎದ್ದು ಇಷ್ಟಲಿಂಗಾರ್ಚನೆ, ಇಷ್ಟಲಿಂಗಯೋಗ ಮಾಡಿ, ಅಧ್ಯಾತ್ಮಿಕ ಶಕ್ತಿಯನ್ನು ಪಡೆದುಕೊಳ್ಳೋಣ. ಲಿಂಗದೇವನ ದಿವ್ಯಾನುಭಾವವನ್ನು ಪಡೆದುಕೊಂಡು 12ನೇ ಶತಮಾನದ ಶರಣರಂತೆ ಜ್ಞಾನಿಗಳಾಗೋಣ; ನಿರ್ಲಿಪ್ತ ಮನಸ್ಸಿನವರಾಗಿ ಅನುಭಾವಿಗಳಾಗೋಣ. ಅಪ್ಪ ಬಸವಣ್ಣನವರ, ಅವ್ವ ನೀಲಮ್ಮನವರ, ಅಕ್ಕಮಹಾದೇವಿ ತಾಯಿಯವರ ಮಮತೆಯ ಮಕ್ಕಳಾಗೋಣ.



ರಾಷ್ಟ್ರಾಭಿಮಾನಿ, ಹುಟ್ಟು ಹೋರಾಟಗಾರರಾದ
ಪೂಜ್ಯ ಶ್ರೀ ದಯಾನಂದ ಸ್ವಾಮೀಜಿ
ಅವರಿಗೆ ಅರ್ಪಿಸಿದ
ಅಭಿನಂದನ ಪತ್ರ

ಪೂಜ್ಯ ಸ್ವಾಮೀಜಿಯವರೇ,

ಚಿಕ್ಕ ವಯಸ್ಸಿನಲ್ಲೇ ನೀವು ತ್ಯಾಗ ಜೀವನವನ್ನು ಬಯಸಿ ಧರ್ಮಕ್ರಾಂತಿಯ ಧೀರಯೋಗಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಆಶ್ರಮಕ್ಕೆ ಬಂದಿರಿ. ಪೂಜ್ಯರ ಪ್ರವಚನಗಳ ತರಬೇತಿ ಪಡೆದಿರಿ. ಉತ್ತಮ ಪ್ರವಚನಕಾರರಾದಿರಲ್ಲದೆ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಛಲವಂತಿಕೆ ಬೆಳಿಸಿಕೊಂಡಿರಿ.

ಉತ್ತಮ ಸಂಘಟಕರೇ,

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಂದ ಕಾವಿ, ಆಶೀರ್ವಾದ, ಅನುಮತಿ ಪಡೆದು ದೇಶದಾದ್ಯಂತ ಸಂಚರಿಸುವ ಕಾರ್ಯ ಮಾಡುತ್ತಿದ್ದೀರಿ. ಈ ಸಂಚಾರ ಬೇಜವಾಬ್ದಾರಿಯ ಸಾಧುವಾಗಿ ಅಲೆದಾಡುವಂಥದಕ್ಕಲ್ಲ, ಭಾರತೀಯ ಅಧ್ಯಾತ್ಮಿಕ ಪರಂಪರೆ ಮೌಲ್ಯಗಳನ್ನು ಉಳಿಸಿ, ಬೆಳೆಸುವುದಕ್ಕಾಗಿ.

ಮೂಢ ನಂಬಿಕೆಯ ವಿರೋಧಕರೇ,

ಮೂಢ ನಂಬಿಕೆಯ ವಿರುದ್ಧ ಹೋರಾಡಲು ಬದ್ಧ ಕಂಕಣರಾಗಿ ದೇವರ ಹೆಸರಿನಲ್ಲಿ ನಡೆಯುವ ಪ್ರಾಣಿ ಬಲಿಯನ್ನು ತಡೆಯಲು ಹಗಲಿರುಳು ಹೋರಾಡುತ್ತಿದ್ದೀರಿ. ಕೋಣ, ಕುರಿ, ಕೋಳಿಗಳನ್ನು ಬಲಿಗೊಟ್ಟು ದೇವರನ್ನು (ದೇವಿಯನ್ನು) ಒಲಿಸಿಕೊಳ್ಳುತ್ತೇವೆ ಎಂಬ ಅಜ್ಞ ಜನರು ಹೆಚ್ಚಾಗಿ ಹುಂಬರು, ಮೂಢರು ಇರುತ್ತಾರೆ. ಅಂಥವರನ್ನು ಎದುರಿಸಿ ಪ್ರಾಣಿ ಬಲಿ ತಡೆಗಟ್ಟಲು ನೀವು ಮುನ್ನುಗ್ಗುವ ಧೈರ್ಯ ಕಂಡಾಗ ಆಶ್ಚರ್ಯವಾಗುತ್ತದೆ ; ನಿಮ್ಮ ಬಗ್ಗೆ ಅಭಿಮಾನವೂ ಉಂಟಾಗುತ್ತದೆ.

ಅಹಿಂಸಾ ತತ್ವ ಪ್ರತಿಪಾದಕರೇ,

ಅಹಿಂಸೆಯೇ ಪರಮ ಧರ್ಮ ಎಂಬ ಮಹಾವೀರರ ವಾಣಿಯನ್ನು , ದಯವೇ ಧರ್ಮದ ಮೂಲ ದಯವಿರಬೇಕು ಸಕಲ ಪ್ರಾಣಿಗಳಲ್ಲಿ ಎಂಬ ಗುರು ಬಸವಣ್ಣನವರ ಸಂದೇಶವನ್ನು ಪ್ರಚಾರ ಮಾಡಲು, ಅನುಷ್ಠಾನಕ್ಕೆ ತರಲು ನೀವು ಹಗಲಿರುಳು ಶ್ರಮಿಸುತ್ತಿದ್ದೀರಿ. ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘದ ಪ್ರಧಾನ ಸಂಘಟಕರನ್ನಾಗಿ ಮಾಡಿ ಜೈನ ಸಮಾಜದ ಪ್ರಮುಖರು ನಿಮ್ಮ ಕೆಚ್ಚು ಸಂಘಟನಾ ಶಕ್ತಿಯ ಜ್ಯೋತಿಗೆ ಎಣ್ಣೆಯನ್ನು ಎರೆಯುತ್ತಿದ್ದಾರೆ. ಅನೇಕ ಕಡೆ ಕಸಾಯಿಖಾನೆ ಆರಂಭವಾಗುವುದನ್ನು ತಡೆಗಟ್ಟಿದ್ದೀರಿ. ಪ್ರಾಣಿ ಬಲಿಯನ್ನು ನಿಲ್ಲಿಸಿದ್ದೀರಿ. ಗೋ ಸಂಪತ್ತನ್ನು ಉಳಿಸಿ, ಬೆಳಸಲಿಕ್ಕೆ ಗೋ ರಕ್ಷಾ ಆಂದೋಲನದಲ್ಲಿ ಭಾಗಿಗಳಾಗುತ್ತಿದ್ದೀರಿ.

ಬಸವ ತತ್ವ ಆರಾಧಕರೇ,

ಗುರು ಬಸವಣ್ಣನವರ ತತ್ವಗಳನ್ನು ಪ್ರಚಾರ ಮಾಡುವುದರಲ್ಲಿ ಅಪಾರ ಆಸಕ್ತಿ ಹೊಂದಿರುವ ನೀವು ಉತ್ತಮ ಗಣಾಚಾರಿಗಳು. ಎಂಥ ಎಡರು ತೊಡರು ಬಂದರೂ ಧರ್ಮಗುರು ಬಸವಣ್ಣನವರನ್ನು ದೀಕ್ಷಾಗುರು ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳನ್ನು, ಇಷ್ಟಲಿಂಗ ನಿಷ್ಠೆಯನ್ನು , ಶರಣರ ಮಾರ್ಗವನ್ನು ಬಿಡಲಿಲ್ಲ.

ಧೀಮಂತ ಹೋರಾಟಗಾರರೇ,

ಉತ್ತಮ ಮೌಲ್ಯಗಳ ಸಂರಕ್ಷಣೆಗಾಗಿ ಅವಿರತವಾಗಿ ನೀವು ಶ್ರಮಿಸುತ್ತೀರಿ. ಹಿಂದೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕೃತಿ ಚಿಕ್ಕ ವೀರ ರಾಜೇಂದ್ರವನ್ನು ಧಾರಾವಾಹಿಯನ್ನಾಗಿಸುವ ವಿರುದ್ಧ ಮಾಡಿದ ಹೋರಾಟ, ಮಹಾಚೈತ್ರ ಪಠ್ಯವಾಗಿದ್ದಾಗ ಅದನ್ನು ರದ್ದು ಪಡಿಸಲು ನಡೆದ ಹೋರಾಟ, ಸರ್ಕಾರವು ಕೋಳಿ ಮೊಟ್ಟೆಯನ್ನು 7 ನೇ ತರಗತಿಯವರೆಗಿನ ಮಕ್ಕಳಿಗೆ ಕೊಡುವ ಯೋಜನೆ ಹಮ್ಮಿಕೊಂಡಾಗ ಕೈಗೊಂಡ ಹೋರಾಟದಲ್ಲಿ ರಾಷ್ಟ್ರೀಯ ಬಸವ ದಳಕ್ಕೆ ಅಪಾರ ಬೆಂಬಲ ನೀಡಿ, ಮುಂಚೂಣಿಯಲ್ಲಿ ನಿಂತು ಹೋರಾಡಿದಿರಿ.

ಡಾ|| ಬಂಜಗೆರೆ ಜಯಪ್ರಕಾಶ ಎಂಬ ಲೇಖಕರು ಸಂಶೋಧನೆಯ ಹೆಸರಿನಲ್ಲಿ ವಿಶ್ವಗುರು ಬಸವಣ್ಣನವರು ಅವರ ಸಹೋದರಿ ಅಕ್ಕನಾಗಲಾಂಬಿಕೆಯವರ ಚರಿತ್ರೆ ಹಾಗೂ ಚಾರಿತ್ರ್ಯ ವಧೆ ಮಾಡಿ ಆನು ದೇವಾ ಹೊರಗಣವನು ಪುಸ್ತಕವನ್ನು ಹೊರತಂದಾಗ ಕರ್ನಾಟಕ ರಾಜ್ಯದಾದ್ಯಂತ ಸಂಚರಿಸಿ ಜನ ಜಾಗೃತಿ ಮಾಡಿ, ಬಸವಾಭಿಮಾನಿಗಳನ್ನು ಸಂಘಟಿಸಿದ್ದೀರಿ. ಬಸವ ಧರ್ಮ ಪೀಠ, ಲಿಂಗಾಯತ ಧರ್ಮ ಮಹಾಸಭಾ, ರಾಷ್ಟ್ರೀಯ ಬಸವ ದಳ, ವಿಶ್ವ ಬಸವ ಧರ್ಮ ಮಹಾಸಭಾ, ಸುಮಂಗಲಿ ಸೇವಾಶ್ರಮ, ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಸಮಿತಿ ಮುಂತಾದ ಎಲ್ಲ ಸಂಘಟನೆಗಳ ಒಕ್ಕೂಟ ರಚಿಸಿ ಹೋರಾಟಕ್ಕೆ ಅದ್ಭುತ ಶಕ್ತಿಯು ಬರುವಂತೆ ಮಾಡಿದಿರಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏಕಮುಖವಾಗಿ ಪುಸ್ತಕದ ಪರವಾಗಿ ಸಮರ್ಥಿಸಿಕೊಳ್ಳುವ ಹುನ್ನಾರ ಹೊಂದಿ ಪರಿಷತ್ ಅಧ್ಯಕ್ಷರಾದ ಚಂದ್ರಶೇಖರ್ ಪಾಟೀಲರು ಸಂವಾದ ಗೋಷ್ಠಿ ನಡೆಸಿದಾಗ ತಾವು ಏಕಾಂಗಿಯಾಗಿ ಮುನ್ನುಗ್ಗಿ ಪ್ರತಿಭಟಿಸಿದಿರಿ. ಅನ್ಯಾಯವನ್ನು ಅಸತ್ಯವನ್ನು ಪ್ರತಿಭಟಿಸಿ ಇಡೀ ನಾಡಿನ ಗಮನವನ್ನು ಸೆಳೆದಿರಿ. ನಾಡಿನ ಬಸವಾಭಿಮಾನಿಗಳ ಗೌರವ- ಆದರ-ಅಭಿಮಾನಕ್ಕೆ ಪಾತ್ರರಾದಿರಿ.

ಇಂಥಾ ನಿಮ್ಮ ಧೀಮಂತ ಹೋರಾಟಕ್ಕಾಗಿ ನಾವು ಹೃತ್ಪೂರ್ವಕವಾಗಿ ಅಭಿನಂದಿಸಿ ರಾಷ್ಟ್ರೀಯ ಬಸವ ದಳದ ವತಿಯಿಂದ ಈ ಪತ್ರವನ್ನು ನೀಡುತ್ತಿದ್ದೇವೆ. ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಗುರು ಬಸವಣ್ಣನವರು ನಿಮಗೆ ದೀರ್ಘ ಆಯುಷ್ಯ, ಆರೋಗ್ಯ, ಭಾಗ್ಯ ನೀಡಿ ಇನ್ನೂ ಹೆಚ್ಚು ಸೇವೆಯನ್ನು ನಿಮ್ಮಿಂದ ಮಾಡಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಶರಣೆ.ದೇವಿಕಾ ಶರಣಪ್ಪ	**ಶರಣ.ವೀರೇಶ್**	**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಅಧ್ಯಕ್ಷೆ, ರಾಷ್ಟ್ರೀಯ ಬಸವ ದಳ	ಅಧ್ಯಕ್ಷ	ಅಧ್ಯಕ್ಷೆ, ರಾಷ್ಟ್ರೀಯ ಬಸವ ದಳ (ಕೇಂದ್ರ)
ಬೆಂಗಳೂರು	ಯುವ ರಾ. ಬ. ದಳ ಬೆಂಗಳೂರು	ಬೆಂಗಳೂರು

ಬಸವ ಪಂಚಮಿ, ದಿ. 18-8-2007, ಪುಟ್ಟಣ್ಣ ಚೆಟ್ಟಿ ಪುರಭವನ

ಆಧ್ಯಾತ್ಮ ಗುಡಿಯೊಳಗೆ

ಬನ್ನಿ ಮಹಾಮನೆಗೆ, ಬನ್ನಿ ಗುರು ಮನೆಗೆ
ಬನ್ನಿರೆಲ್ಲರು ಅಪ್ಪನ ಅಧ್ಯಾತ್ಮ ಗುಡಿಯೊಳಗೆ || ಬನ್ನಿ||

ಮಿಥ್ಯ ಮೈಲಿಗೆಯ ಬಿಟ್ಟು ಬನ್ನಿ
ಸತ್ಯ ಜಲದಲಿ ಮಿಂದು ಬನ್ನಿ
ಹಣದ ಆಸೆಯ ಬಿಟ್ಟು ಬನ್ನಿ
ಗುಣದ ಮೇಲ್ಹೊದ್ದವ ಹೊದ್ದು ಬನ್ನಿ ||ಬನ್ನಿ||

ಅಧ್ಯಾತ್ಮ ಗುಡಿಯೊಳಗೆ ವಚನ ಗಂಗೆಯು ಮೊಳಗೆ
ತೃಪ್ತಿಯ ಪ್ರಸಾದ ಪಡೆದ ನಾವ್ ಧನ್ಯರೆನ್ನಿ
ಬನ್ನಿ ಮಹಾಮನೆಗೆ ಬನ್ನಿ ಗುರು ಮನೆಗೆ
ಬನಿರೆಲ್ಲರು ಅಪ್ಪನ ಅಧ್ಯಾತ್ಮ ಗುಡಿಯೊಳಗೆ || ಬನ್ನಿ||

- ಎ. ನಿರ್ಮಲಾ ಪ್ರಭಾಕರ್, ಗನ್ನಾಯಕನ ಹಳ್ಳಿ



ಕಾಯಕವೇ ಕೈಲಾಸವೆಂಬ ವಿಶ್ವಗುರು ಬಸವಣ್ಣನವರು ಸಾರಿದ ದಿವ್ಯ ಸೂತ್ರವನ್ನು ಅಳವಡಿಸಿಕೊಂಡ **ಶರಣ.ಬಿ.ಗುರುಪ್ರಸಾದ್** ಅವರಿಗೆ ಅರ್ಪಿಸಿದ

ಅಭಿನಂದನ ಪತ್ರ

ಮಾನ್ಯರೇ,

ಶರಣ. ಬಿ. ಕೆ. ಬಸಪ್ಪನವರ ಸುಪುತ್ರರಾಗಿ 20-7-1962ರಂದು ಜನಿಸಿ ಇಂದು ಮುಖ್ಯ ಅಭಿಯಂತರ ಹುದ್ದೆಗೆ ಏರಿರುವ ನಿಮ್ಮ ಸಾಧನೆ ಅಭಿನಂದನೀಯ ಮತ್ತು ಅನುಕರಣೀಯ.

ಬಳ್ಳೇಕೆರೆ ಎಂಬ ಗ್ರಾಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ಪೂರೈಸಿ, ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಕಡೂರು ತಾಲ್ಲೋಕಿನ ಹೇಮಗಿರಿಯ ಶ್ರೀಮಲ್ಲಿಕಾರ್ಜುನ ವಸತಿ ಸಹಿತ ವಿದ್ಯಾಲಯದಲ್ಲಿ, ಪಿ.ಯು.ಸಿ ಯನ್ನು ಕಡೂರಿನ ಸರ್ಕಾರಿ ಕಾಲೇಜಿನಲ್ಲಿ ಮುಗಿಸಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿ ನಂತರ ಬೆಂಗಳೂರಿನ ಪ್ರತಿಷ್ಠಿತ ಬಿ.ಎಂ.ಎಸ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮುಗಿಸಿದಿರಿ. ರಾವ್ ಬಹದ್ದೂರ್ ತೋಟದಪ್ಪ ಹಾಸ್ಟೆಲಿನಲ್ಲಿದ್ದು ಕೊಂಡು ಬಿ.ಇ ಮತ್ತು ಬಿ.ಎಂ.ಎಸ್. ಇಂಜಿನಿಯರಿಂಗ್ ಮಹಾ ವಿದ್ಯಾಲಯದಲ್ಲೇ ಎಂ.ಇ ಪದವಿಯನ್ನು ಸಹ ಪಡೆದುಕೊಂಡಿರಿ. ನಂತರ ಕೆ.ಇ.ಎಸ್ - ಕರ್ನಾಟಕ ಇಂಜಿನಿಯರಿಂಗ್ ಸರ್ವೀಸನ್ನು 1992ರಲ್ಲಿ ಪೂರೈಸಿದಿರಿ.

ಕಾಯಕ ನಿಷ್ಠಾವಂತರೇ

ಎಂಜಿನಿಯರಿಂಗ್ ಶಿಕ್ಷಣ ಮುಗಿಯುತ್ತಲೇ ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್‌ದಲ್ಲಿ ಉಪನ್ಯಾಸಕರಾಗಿ 1985ರಿಂದ 87ರವರೆಗೆ ಕಾಯಕ ನಿರ್ವಹಿಸಿ ನಂತರ ಯು.ಕೆ.ಪಿಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ನೇಮಕವಾದಿರಿ. ನಂತರ ಜಿಲ್ಲಾ ಪರಿಷತ್ತಿನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಯಲ್ಲಿ ಶಹಾಪುರ, ಸುರಪುರಗಳಲ್ಲಿ ಕಾರ್ಯ ನಿರ್ವಹಿಸಿದಿರಿ. ಮುಂದೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಆಗಿ 1992ರಲ್ಲಿ ಬಡ್ತಿ ಹೊಂದಿದಿರಿ. ನಂತರ ಶಿವಮೊಗ್ಗ, ಹೊನ್ನಾಳಿ, ಹಾನಗಲ್‌ಗಳಲ್ಲಿ ಸೇವೆ ಮಾಡಿದಿರಿ. ತದ ನಂತರ 1999ರಲ್ಲಿ ಎಕ್ಸಿಕ್ಯುಟಿವ್ ಎಂಜಿನಿಯರ್ ಆಗಿ ಬಡ್ತಿ ಹೊಂದಿ ಸಿರಸಿ, ಸಿಂಗಟಾಲೂರು, ಹೂವಿನ ಹಡಗಲಿಗಳಲ್ಲಿ ಕಾರ್ಯ ಮಾಡಿದಿರಿ. 2003ರಲ್ಲಿ ಸುಪರಿಂಟೆಂಡೆಂಟ್ ಎಂಜಿನಿಯರ್ ಆಗಿ ಪದೋನ್ನತಿ ಹೊಂದಿ ಮಂಗಳೂರು, ಉಡುಪಿ, ಕೊಡಗು ಜಿಲ್ಲೆಗಳ ಮೇಲುಸ್ತುವಾರಿ ಕಾರ್ಯ ಮಾಡಿದಿರಿ. 2005ರಲ್ಲಿ ಮೈಸೂರು ಸಿಟಿ ಕಾರ್ಪೊರೇಷನ್‌ದಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ಇದ್ದುಕೊಂಡು ಮುಂದೆ 2007ರಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ಸಣ್ಣ ನೀರಾವರಿ ಸಚಿವರ ಬಳಿ ಆಪ್ತ ಕಾರ್ಯದರ್ಶಿಯಾಗಿ ಸೇವೆಗೈದಿರಿ. ಬೆಂಗಳೂರು ಮೆಟ್ರೋ ರೇಲ್ ಯೋಜನೆಗೆ ಚಾಲನೆ ಸಿಗುತ್ತಿದ್ದಂತೆಯೇ ಕರ್ನಾಟಕ ಸರ್ಕಾರವು ದಿ.21-5-2007ರಂದು ಪದೋನ್ನತಿ ನೀಡಿ ನಿಮ್ಮನ್ನು ಮುಖ್ಯ ಅಭಿಯಂತರನ್ನಾಗಿ ಮಾಡಿದೆ

ಶರಣ ಸಂಸ್ಕೃತಿಯ ಪ್ರತಿನಿಧಿಗಳೇ,

ವೃತ್ತಿ ಜೀವನದಲ್ಲಿ ಯಶಸ್ಸಿನ ಹೆಜ್ಜೆಗಳನ್ನು ಇಡುತ್ತಿರುವ ನಿಮ್ಮ ಹವ್ಯಾಸ, ಅಭಿರುಚಿ ಮೆಚ್ಚಿಕೊಳ್ಳುವಂಥವು. ಶಾರೀರಿಕ ಆರೋಗ್ಯಕ್ಕಾಗಿ ಷಟಲ್ ಕಾಕ್, ಈಜು ಮುಂತಾದ ಹವ್ಯಾಸ ಬೆಳೆಸಿಕೊಂಡಿದ್ದರೆ ಮನಸ್ಸಿನ ಸ್ವಾಸ್ಥ್ಯಕ್ಕಾಗಿ ಪ್ರಾಣಾಯಾಮ, ಧ್ಯಾನ, ಧಾರ್ಮಿಕ ಗ್ರಂಥಗಳ ಅಧ್ಯಯನದ ಅಭಿರುಚಿ ಬೆಳೆಸಿಕೊಂಡಿದ್ದೀರಿ. ಯಾಂತ್ರಿಕ ವೃತ್ತಿ ಜೀವನದ ಪರಿಣತಿಯೊಂದಿಗೆ ಆಧ್ಯಾತ್ಮಿಕ ಚಿಂತನೆಯನ್ನು ಅಳವಡಿಸಿಕೊಂಡಿರುವುದು ನಮಗೆ ಅತೀವ ಸಂತೋಷ ಉಂಟು ಮಾಡಿದೆ. ವಚನ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ಹೊಂದಿ ಅಧ್ಯಯನ ಮಾಡುತ್ತಿರುವುದು ನಿಮ್ಮ ಬಗ್ಗೆ ಅಭಿಮಾನವನ್ನು ಮೂಡಿಸಿದೆ.

ಕೇವಲ ವೃತ್ತಿ ಜೀವನದಲ್ಲಿ ಮಾತ್ರ ಸೀಮಿತರಾಗದೆ ಸಾಮಾಜಿಕ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡಿರುವುದು, ದಾನ, ಧರ್ಮ, ಪರೋಪಕಾರದಲ್ಲೂ ಆಸಕ್ತರಾಗಿರುವುದು ಮೆಚ್ಚಿಕೊಳ್ಳಬೇಕಾದ ಸಂಗತಿ. ನಿಮ್ಮ ಮನೆ ತುಂಬಿದ ಮಡದಿ ಸಿದ್ಧರಾಮನ ಹಳ್ಳಿಯ ಶರಣ.ಎಸ್.ಟಿ.ಚಂದ್ರಶೇಖರಪ್ಪನವರ ಸುಪುತ್ರಿ ಶರಣೆ. ಗಾಯತ್ರಿದೇವಿ ಅವರು ಅಚ್ಚು ಮೆಚ್ಚಿನ ಜೀವನ ಸಂಗಾತಿಯಾಗಿದ್ದು ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಶರಣ ವಾಣಿಯ ಸಾಕಾರವಾಗಿದ್ದಾರೆ.

ಆದರ್ಶ ಪೂರ್ಣ ವೃತ್ತಿ, ಸಾಂಸಾರಿಕ ಮತ್ತು ಪಾರಮಾರ್ಥಿಕ - ಈ ಮೂರೂ ಮೌಲ್ಯಗಳನ್ನು ಅಳವಡಿಸಿಕೊಂಡ ನಿಮ್ಮ ಸಾತ್ವಿಕ ಜೀವನವನ್ನು ಮೆಚ್ಚಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವಲ್ಲದೆ, ನಿಮಗೆ ಶ್ರೀಮತಿ ಗಾಯತ್ರಿದೇವಿ, ಮಕ್ಕಳಾದ ವಿನುತ, ವಿವೇಕ ಎಲ್ಲರ ಮೇಲೆ ಸೃಷ್ಟಿಕರ್ತ ಲಿಂಗದೇವ ಮತ್ತು ಬಸವಣ್ಣನವರ ಅನುಗ್ರಹವಿದ್ದು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತು ಪ್ರಾಪ್ತಿಯಾಗಲಿ ಎಂದು ಹಾರೈಸುತ್ತೇವೆ.

ದಿ. 18-8-2007
ವಾಸ್ತವ್ಯ -ಬೆಂಗಳೂರು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ, ಕೂಡಲ ಸಂಗಮ

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

866666



ಭಾರತದ ರಾಜಧಾನಿ ನವದೆಹಲಿಯಲ್ಲಿ 2007ರ ಅಕ್ಟೋಬರ್ 27,28 ಮತ್ತು 29ರಂದು ನಡೆಯಲಿರುವ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ ಪ್ರತಿನಿಧಿಯಾಗಿ ಭಾಗವಹಿಸಲು ಅರ್ಜಿ ಪತ್ರ

ಪೂಜ್ಯ ಸಂಘಟಕರೆ,

ಭಾರತದ ರಾಜಧಾನಿ ನವದೆಹಲಿಯಲ್ಲಿ 2007ರ ಅಕ್ಟೋಬರ್ 27, 28 ಮತ್ತು 29 ರಂದು ನಡೆಯಲಿರುವ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಉತ್ಸುಕನಾಗಿ/ಳಾಗಿದ್ದೇನೆ. ವಿವರಗಳು ಕೆಳಕಂಡಂತಿವೆ.

ಹೆಸರು - ಅಡ್ಡಹೆಸರು :

ವಿಳಾಸ :

ದೂರವಾಣಿ ಸಂಖ್ಯೆ :

ನಮ್ಮ ಕುಟುಂಬ / ಸಮೂಹದಿಂದ ಬರುವ ಜನರ ಸಂಖ್ಯೆ :

ಪ್ರತಿ ನಿಧಿ ಶುಲ್ಕ / ಕಾಣಿಕೆ: ಬ್ಯಾಂಕ್ ಡ್ರಾಫ್ಟ್ ನಂಬರ್ ಒಟ್ಟು ಮೊತ್ತ :

ಸಾಮೂಹಿಕ ವಸತಿ ಸಾಕೋ? ಸಾಕು ☐

ವಿಶೇಷ ಕೋಣೆ ವ್ಯವಸ್ಥೆ ಬೇಕೋ? ಬೇಕು ☐

ಅದಕ್ಕಾಗಿ ಪ್ರತ್ಯೇಕ ಹಣ ಕೊಡುವಿರಾ? ಅಹುದು ☐

ರೈಲ್ವೆ ರಿಸರ್ವೇಷನ್ (ಬೆಂಗಳೂರು) [illegible]ಕೋ? ಅವಶ್ಯ ☐ ಇಲ್ಲ ☐

ಅದರ ಹಣ ಕಳಿಸಿರುವಿರಾ? ಬ್ಯಾಂಕ್ ಡ್ರಾಫ್ಟ್ ನಂಬರ್: ....

1. ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಚ್ಚಿರಿ
2. ಒಂದು ಕುಟುಂಬದಿಂದ ಅಥವಾ ಶರಣ ಬಳಗದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಅವರ ಭಾವಚಿತ್ರಗಳನ್ನು ಹೆಸರುಗಳೊಡನೆ ಒಂದೇ ಕವರಿನಲ್ಲಿ ಕಳಿಸಬಹುದು.

ಫೋಟೋ

ಊರು: .... ದಿನಾಂಕ: .... ಸಹಿ: ....

ವಿಶೇಷ ಸೂಚನೆ : ಈ ಅರ್ಜಿ ಫಾರ್ಮಿನ ಜೆರಾಕ್ಸ್ ಪ್ರತಿ ತೆಗೆದು ತುಂಬಿ ಕಳಿಸಿರಿ. ವಿವರಗಳಿಗಾಗಿ ಕರಪತ್ರ ನಿಮ್ಮೊಡನೆ ಇಟ್ಟುಕೊಳ್ಳಿರಿ. ಒಂದು ಕುಟುಂಬದಿಂದ ಅಥವಾ ಸಮೂಹದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಅರ್ಜಿ ಪತ್ರದ ಜೆರಾಕ್ಸ್ ಪ್ರತಿ ತೆಗೆದು ಎಲ್ಲರಿಗೂ ಒಂದೊಂದು ಅರ್ಜಿ ಪತ್ರ ಬರೆಯಬಹುದು. ಎಲ್ಲರ ಪ್ರತಿನಿಧಿ ಶುಲ್ಕ / ಕಾಣಿಕೆ ಸೇರಿಸಿ ಒಂದೇ ಬ್ಯಾಂಕ್ ಡ್ರಾಫ್ಟ್ ತೆಗೆಯಬಹುದು. ಅಥವಾ ಒಂದೇ ಅರ್ಜಿ ಬರೆದು, ಅದರಲ್ಲಿ ಭಾಗವಹಿಸುವ ಎಲ್ಲರ ಹೆಸರುಗಳನ್ನು ಬರೆದು, ಫೋಟೋಗಳನ್ನು ಒಂದೇ ಕವರಿನಲ್ಲಿಟ್ಟು ಒಟ್ಟು ಹಣಕ್ಕೆ ಬ್ಯಾಂಕ್ ಡ್ರಾಫ್ಟ್ ಕಳಿಸಬಹುದು. ಬೆಂಗಳೂರು ವಿಳಾಸಕ್ಕೆ ಪತ್ರ ಕಳಿಸಬೇಕು. ಒಂದು ವೇಳೆ ದೆಹಲಿಗೆ ಬಂದು ಪ್ರತಿನಿಧಿ ಶುಲ್ಕ ಕಟ್ಟುವುದಾದರೆ ಅದಕ್ಕೆ ಅನುಮತಿಯುಂಟು. Basava Mahamane Charitable Trust ಹೆಸರಿಗೆ ಡಿ.ಡಿ.ತೆಗೆಸಬೇಕು.

ವಿಶೇಶ ಸೂಚನೆ : ಪ್ರತಿನಿಧಿ ಶುಲ್ಕ ಕಟ್ಟದವರಿಗೆ ಊಟ-ವಸತಿಯ ವ್ಯವಸ್ಥೆ ಮಾಡುವ ಜವಾಬ್ದಾರಿ ಸಮಿತಿಯ ಮೇಲೆ ಇರುವುದಿಲ್ಲ.

ಸಂಪರ್ಕಿಸುವ ವಿಳಾಸಗಳು

Basava Mahamane Charitable Trust (R)
Mata Ashram, Basava Mantap
H-3/82, Bengali Colony
Mahavir Enclave
New Delhi-110045
Ph: 011-64563860, 9212627150

Basava Mahamane Charitable Trust(R)
BASAVA MANTAPA
2035, 20th Main, Chord Road
2nd Block, Rajajinagar
BANGALORE-560010
Karnataka State, India
Ph : 080-23325335, 23131476

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸು. ಮಲ್ಲಿಕಾರ್ಜುನಪ್ಪ, ಎಂ.ಎ., ಬಿ.ಇಡಿ.,
ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ
ಮತ್ತೀಪುರ - 571443, ಕೊಳ್ಳೆಗಾಲ -ತಾ,
ಚಾಮರಾಜನಗರ -ಜಿಲ್ಲೆ

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ,
ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ 330
3ನೆಯ ಮಹಡಿ, ವಿಧಾನ ಸೌಧ,
ಬೆಂಗಳೂರು -1

ಮಾನ್ಯರೆ,

ವಿಷಯ : ಬಂಜಗೆರೆಯವರ ಮೇಲೆ ಕಾನೂನುಕ್ರಮ ತೆಗೆದುಕೊಳ್ಳುವ ಬಗ್ಗೆ
ಉಲ್ಲೇಖ : 14-4-2007ರಂದು ಬಿಡುಗಡೆಯಾದ "ಆನು ದೇವಾ....."

ಡಾ. ಬಂಜಗೆರೆ ಜಯಪ್ರಕಾಶರು ಬರೆದ ಆನು ದೇವಾ ಹೊರಗಣವನು ಪುಸ್ತಕವನ್ನು ಸರ್ಕಾರ 23-7-2007ರಂದು ಮುಟ್ಟುಗೋಲು ಹಾಕಿಕೊಂಡಿದೆ. ಬಂಜಗೆರೆ ಅವರೇ ಅದನ್ನು ತಾತ್ಕಾಲಿಕವಾಗಿ 22-7-07ರಂದು ಹಿಂಪಡೆದಿರುವುದಾಗಿ ಹೇಳಿದ್ದಾರೆ. ಆದರೆ ಅವರು ಅಂಥ ಸಾಹಿತ್ಯ ಸಾರ್ವಭೌಮ ವಿಶ್ವಗುರು ಬಸವಣ್ಣನವರು ಮತ್ತು ಅವರ ಕ್ಕ, ತಾಯಿ, ತಂದೆಗಳ ಮೇಲೆ ಇಲ್ಲಸಲ್ಲದ ಸುಳ್ಳು ಬರೆದು, ಪ್ರಚಾರವಾಗುವಂತೆ ಮಾಡಿ, ಅವರ ಚಾರಿತ್ರ್ಯ ಹರಣ ಮಾಡಿರುವುದನ್ನು ಹಿಂಪಡೆಯಲು ಸಾಧ್ಯವೇ?

ಯಾವುದೇ ಕೃತಿ ದ್ವೇಷ ಭಾವನೆ ಮೂಡಿಸಿ, ಕೋಮು ಸೌಹಾರ್ದ ಉಂಟುಮಾಡಿ, ಧಾರ್ಮಿಕ ನಂಬಿಕೆಗಳನ್ನು ಅಪಮಾನಗೊಳಿಸಿ, ಸಾರ್ವಜನಿಕ ನೆಮ್ಮದಿ ಕದಡಿ, ಕೆಟ್ಟ ಕಲ್ಪನೆಗಳಿಗೆ ಅವಕಾಶ ಮಾಡಿಕೊಡುವಂತಿದ್ದರೆ, ಅಂತಹ ಪುಸ್ತಕ ಮತ್ತು ಅದರ ಪ್ರತಿಯೊಂದು ಪ್ರತಿಯನ್ನು ಸರ್ಕಾರಕ್ಕೆ ಮುಟ್ಟುಗೋಲಾಗಿದೆಯೆಂದು ಘೋಷಿಸಿ, ಅದು ಭಾರತದಲ್ಲಿ ಎಲ್ಲಿಯೇ ಕಂಡು ಬಂದರೂ, ಯಾರೇ ಆರಕ್ಷಕ ಅಧಿಕಾರಿಯು ಅದನ್ನು ವಶಪಡಿಸಿಕೊಳ್ಳಬಹುದೆಂದು ಅದಂಡ ಪ್ರಕ್ರಿಯಾ ಸಂಹಿತೆ ಅ 95ನೆಯ ನಿಯಮ ಹೇಳುತ್ತದೆ.

ಇತಿಹಾಸದಲ್ಲಿ ಸತ್ಯವೆಂದು ಸ್ವೀಕೃತವಾಗಿರುವ ಘಟನೆಯನ್ನು ತಿರುಚಿ, ಸತ್ಯಕ್ಕೆ ಅಪಚಾರವೆಸಗಿ, ಧಾರ್ಮಿಕ ನಂಬಿಕೆಗಳಿಗೆ ಚ್ಯುತಿ ತಂದು, ಬಸವಾಭಿಮಾನಿಗಳನ್ನು ನೋಯಿಸಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯವಾಗುವುದಿಲ್ಲ. ಆ ಪುಸ್ತಕದಿಂದಾಗಿ, ಬಸವಣ್ಣನವರು ಮತ್ತು ಅವರ ಮನೆತನಕ್ಕೆ ಕಳಂಕ, ಬಸವಾಭಿಮಾನಗಳಿಗೆ ಮಾನ ನಷ್ಟ ಆಘಾತ, ಮುಖ ಭಂಗ, ಹೋರಾಟಕ್ಕಾಗಿ ಸಮಯ ವ್ಯರ್ಥ, ವೃಥಾ ಶ್ರಮ, ಕಷ್ಟನಷ್ಟ ಖರ್ಚುಗಳಿಗೆ ಕಾರಣಗಳು ಉಂಟಾಗಿವೆ. ಹೀಗಾಗಿ ಬಂಜಗೆರೆಯವರು ಬರೆದಿರುವುದು ಭಾರತ ದಂಡ ಸಂಹಿತೆ ಪ್ರಕಾರ ದಂಡನೀಯ ಅಪರಾಧ.

ಆದುದರಿಂದ, ಮೇಲೆ ಹೇಳಿದ ಎಲ್ಲ ಅಂಶಗಳನ್ನು ಗಮನಿಸಿ, ಅಂತಹ ಅಸತ್ಯದ ಕೃತಿಯನ್ನು ಬರೆದ ಬಂಜಗೆರೆ ಜಯಪ್ರಕಾಶರನ್ನು, ಅದನ್ನು ಪ್ರಕಟಿಸಿದ ಪ್ರಕಾಶಕರನ್ನು ಮತ್ತು ಅದಕ್ಕೆ ಪ್ರೋತ್ಸಾಹಿಸಿದವರನ್ನು ಕಾನೂನಿನಂತೆ ಸೂಕ್ತವಾದ ಕ್ರಮ ತೆಗೆದುಕೊಂಡು ಶಿಕ್ಷಿಸಬೇಕು. ಹಿಂದೆ ಕೆಲವು ಕೃತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆದರೂ ಮತ್ತೊಬ್ಬರನ್ನು ಅವಮಾನಿಸಿ, ಬರೆಯುವುದನ್ನು ನಿಲ್ಲಿಸಿಲ್ಲ, ತಪ್ಪು ಮಾಡಿದವರನ್ನು ಅಲ್ಲಲ್ಲೇ ಶಿಕ್ಷಿಸಿದರೆ, ಶಿಸ್ತು ನೆಲೆಸುತ್ತದೆ. ಶಿಕ್ಷೆಯ ಭಯ ಅವರನ್ನು ಬಗ್ಗಿಸುತ್ತದೆ. ಶಿಕ್ಷೆ ಇಲ್ಲದಿದ್ದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಸೋಗಿನಲ್ಲಿ ಮಹಾಪುರುಷರ ಚರಿತ್ರೆ ಮತ್ತು ಚಾರಿತ್ರ್ಯ ವಧೆ ಮಾಡಿ, ದೇಶದಲ್ಲಿ ಅಶಾಂತಿ ಉಂಟಾಗಲು ಕಾರಣರಾಗುವರು.

ತಮ್ಮ ನಂಬುಗೆಯ,
ಸು. ಮಲ್ಲಿಕಾರ್ಜುನಪ್ಪ

ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ
76ನೆಯ ಜಯಂತಿ ಆಚರಣೆ

ಶರಣ (ಶನಿ)ವಾರ ದಿ.15-9-07 ಗಣೇಶ ಚೌತಿಯಂದು ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧಿಪತಿಗಳಾದ ಪೂಜ್ಯ ಲಿಂಗಾನಂದ ಅಪ್ಪಾಜಿಯವರ 76ನೆಯ ಜಯಂತಿ ಬಂದಿದೆ. ಮರುದಿನ ದಿ 16-9-07ರಂದೇ ದೇವ (ಭಾನು)ವಾರ ವಿರುವುದರಿಂದ ಅಂದೇ ಪೂಜ್ಯ ಶ್ರೀಗಳ 76ನೆಯ ಜಯಂತಿಯನ್ನು ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಮಾತೆ ಗಂಗಾದೇವಿಯವರ 50ನೆಯ ವರ್ಧಂತಿಯನ್ನು ಮತ್ತು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಆಚರಿಸಬಹುದು.

☺ ಸಮಸ್ಯೆ ? - ಸಮಾಧಾನ ! ☺

* ನಾಗರಾಜು ನಿಂಬರ್ಗಿ, ಫರಹತಾಬಾದ

? ರವಿ ಬೆಳಗೆರೆಯವರು ಹಾಯ್ ಬೆಂಗಳೂರು ಪತ್ರಿಕೆ (ಜೂನ್ 22, 2007)ಯಲ್ಲಿ ಬಸವಣ್ಣನವರು ಜಾತಿ ಮೂಲದಿಂದ ಬ್ರಾಹ್ಮಣರೆಂದು, ಶಂಕರಾಚಾರ್ಯರಂತೆ ವೈದಿಕ ಬ್ರಾಹ್ಮಣರಾಗದೆ ಆಗಮಿಕ ಶೈವ ಬ್ರಾಹ್ಮಣರೆಂದು ವಿದ್ವತ್ಪೂರ್ಣ ಲೇಖನವನ್ನೂ ಬರೆದಿದ್ದಾರೆ. ಈಗಿನ ಅಯ್ಯನವರು ಪೂರ್ವಾಶ್ರಮದಲ್ಲಿ ಬ್ರಾಹ್ಮಣರೇ ಆಗಿರಬಾರದೇಕೆ? ಕೆಲವರು ಈಗಲೂ ಜುಟ್ಟು ಬಿಟ್ಟಿರುತ್ತಾರೆ !

★ ಈ ನಿಮ್ಮ ಊಹೆ ಅರ್ಧ ಸತ್ಯ; ಧರ್ಮಗುರು ಬಸವಣ್ಣನವರು ಜನ್ಮ ಮೂಲದಿಂದ ಶೈವ, ಆಗಮಿಕ ಬ್ರಾಹ್ಮಣರು. ಹೊಸ ಧರ್ಮವನ್ನು ಕೊಟ್ಟರು. ಅದು ಬಹಳ ವ್ಯಾಪಕವಾಗಿ, ಬಲವಾಗಿ ಬೆಳೆದಾಗ ಬ್ರಾಹ್ಮಣರೂ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದರು. ಆಗಮಿಕ ಶೈವ ಸಂಪ್ರದಾಯದಲ್ಲಿ ಮತ್ತು ವೀರಶೈವ ಸಂಪ್ರದಾಯದಲ್ಲಿ ಚರಲಿಂಗ ಧಾರಿಯಾದ ಬ್ರಾಹ್ಮಣ ಗೃಹಸ್ಥರನ್ನು ಮಾಹೇಶ್ವರರೆಂದು ಬ್ರಾಹ್ಮಣ ಸನ್ಯಾಸಿಯನ್ನು ಜಂಗಮನೆಂದು ಕರೆಯಲಾಗುತ್ತಿತ್ತು. (ನನ್ನ ಪುಸ್ತಕ ಲಿಂಗಾಯತರು ವೀರಶೈವರಲ್ಲ ನೋಡಿ) ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದ ಅಲ್ಲಮಪ್ರಭು ದೇವರನ್ನು ಶೂನ್ಯ ಪೀಠಾರೋಹಣ ಮಾಡಿಸಿದಾಗ ಕೆಲವು ಜಂಗಮರು ಪ್ರತಿಭಟಿಸಿ, ಪ್ರಸಾದ ಸ್ವೀಕಾರ ಮಾಡದೆ ಹೋಗುವುದನ್ನು ಶೂನ್ಯ ಸಂಪಾದನೆಯಲ್ಲಿ ಕಾಣುತ್ತೇವೆ. ಅವರು ಪೂರ್ವಾಶ್ರಯದಲ್ಲಿ ಬ್ರಾಹ್ಮಣರಾಗಿದ್ದವರು. "ಹಾರುವ ನೇಸುಕಾಲ ಭಕ್ತನಾದಡೆಯೂ ನೇಣಿನ ಹಂಗ ಬಿಡ." ಎಂದು ಧರ್ಮಪಿತರು ಅಂಥವರನ್ನು ಕುರಿತೇ ಹೇಳಿದ್ದಾರೆ. ಇಂದಿನ ಅಯ್ಯನವರೆಲ್ಲ ಪೂರ್ವಾಶ್ರಮದಲ್ಲಿ ಬ್ರಾಹ್ಮಣರಲ್ಲ. ಹೊಸದಾಗಿ ಶರಣ ಸಮಾಜ ರೂಪುಗೊಂಡಾಗ ಧಾರ್ಮಿಕ ವಿಧಿ ವಿಧಾನ ಪೂರೈಸುವ ಕ್ರಿಯಾ ಮೂರ್ತಿಗಳು ತಯಾರಾದರು. ಕಾಲಾನಂತರದಲ್ಲಿ ಜಂಗಮವು ಜಾತಿಯಾಗಿ ವಿಕೃತಗೊಂಡು, ಒಂದು ಊರಿನ ಕ್ರಿಯಾ ಮೂರ್ತಿ ಇನ್ನೊಂದು ಊರಿನ ಕ್ರಿಯಾಮೂರ್ತಿಗಳ ಕುಟುಂಬದೊಡನೆ ವ್ಯವಹರಿಸ ತೊಡಗಿದಾಗ ಜಂಗಮವು ಜಾತಿಯಾಗಿ ಮಡುಗಟ್ಟಿತು. ಈ ಪ್ರಕ್ರಿಯೆ 20ನೆಯ ಶತಮಾನದಲ್ಲಿ ನಡೆದುದು. ಮೊದಲು ಜಂಗಮತ್ವ ಜಾತಿಯಾಗಿ ಇರಲಿಲ್ಲ. ಪಂಚ ಪೀಠದವರ ವ್ಯವಸ್ಥಿತ ಪ್ರಯತ್ನದಿಂದ ಜನಿವಾರದಂತೆ ಅಡ್ಡಲಾಗಿ ಇಷ್ಟಲಿಂಗ ಕಟ್ಟುವುದು, ಜುಟ್ಟು ಬಿಡುವುದು, ಅಯ್ಯಾಚಾರ ಆಚರಣೆಗೆ ಬಂದಿವೆ. ಲಿಂಗಾಯತ ಧರ್ಮದಲ್ಲಿ ಅಯ್ಯಾಚಾರ ಎಂಬುವ ಕ್ರಿಯೆ ಇಲ್ಲ, ಇಷ್ಟಲಿಂಗಧಾರಣೆ (ಮಗುವಿಗೆ ಮಾಡುವುದು)ಯ ನಂತರ ಇಷ್ಟಲಿಂಗ ದೀಕ್ಷೆ ಇದೆ. ಇದು ಭಕ್ತರು, ಅಯ್ಯನವರು ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿದೆ. ನಂತರ ವೈರಾಗ್ಯ ಜೀವನ ಸ್ವೀಕರಿಸುವವರಿಗೆ ಜಂಗಮ ದೀಕ್ಷೆ ಎಂಬುದಿದೆ.

⌂ ಉತ್ತಮ ಚಂದ್ ಜೈನ್, ದುಗ್ಗಡ್, ಬೆಂಗಳೂರು

? ಪ್ರಜಾವಾಣಿಯಲ್ಲಿ ದಿ. 7-8-2007ರಂದು ಚಂಪಾ ಅವರ ಒಂದು ಲೇಖನ ಬಂದಿದೆ. ಆನು ದೇವಾ ಪುಸ್ತಕ ಮುಟ್ಟುಗೋಲು ಆದದ್ದರ ಬಗ್ಗೆ ಬಹಳ ವ್ಯಥೆ ಪಟ್ಟದ್ದಾರೆ. ಅದರಲ್ಲಿ ಪಾನ ಮತ್ತ, ಸ್ವಾಮಿ ವೇಷಧಾರಿ ಗೂಂಡಾ ಎಂದು ಬಳಸಿದ್ದಾರೆ. ಪೂಜ್ಯ ದಯಾನಂದ ಸ್ವಾಮಿಗಳು ಎಂಥವರು ಎಂಬುದು ನಮಗೆಲ್ಲ ಗೊತ್ತು, ನಾವು ಹಲವಾರು ವರ್ಷಗಳಿಂದ ಪ್ರಾಣಿ ದಯಾಸಂಘದಲ್ಲಿ ದುಡಿಯುತ್ತಿದ್ದೇವೆ. ಸ್ವಾಮೀಜಿ ಎರಡೂ ಹೊತ್ತು ಸ್ನಾನ - ಇಷ್ಟಲಿಂಗ ಪೂಜೆ ಇಲ್ಲದೆ ಆಹಾರ ಸ್ವೀಕರಿಸುವುದಿಲ್ಲ. ಚಂಪಾರಂಥವರು ಹೀಗೆ ಬರೆಯಬಹುದೆ ?

★ ಒಂದು ಸಲ ಒಬ್ಬ ಸುಂದರವಾದ ಅಚ್ಚುಕಟ್ಟಾದ ದಾರಿಯಲ್ಲಿ ತೂರಾಡುತ್ತಾ ಸಾಗುತ್ತಿದ್ದ. ಆಗ ಅವನು ತೊದಲ ತೊಡಗಿದ. ಎಂಥಾ ರಸ್ತೆ ಇದು, ಒಳ್ಳೆಯ ಹಾವಿನ ನಡಿಗೆ ಇದ್ದಂತೆ ಅಂಕುಡೊಂಕಾಗಿದೆ ಎಂದು ಬೈಯತೊಡಗಿದ. ಕೇಳಿಸಿಕೊಂಡವರಿಗೆ ಗಾಬರಿಯಾಯಿತು. ಇದೇನು, ಎಂಥಾ ಅಚ್ಚುಕಟ್ಟಾದ ರಸ್ತೆ ಇದು, ಹೀಗಂತಾನಲ್ಲಾ ಎಂದರು. ಜೊತೆಗಿದ್ದವ ನಕ್ಕು ಹೇಳಿದ, "ಅಷ್ಟೂ ತಿಳಿಯದೇ? ಅವನು ಬಾಟ್ಲ ಬಾಯ್, ಕಂಠ ಮಟ್ಟ ಕುಡಿದಿದ್ದಾನೆ. ನಶೆ ನೆತ್ತಿಗೇರಿದೆ, ಕಾಲು ಅಂಕುಡೊಂಕಾಗಿ ಹೋಗುತ್ತಿವೆ. ಅದಕ್ಕೆ ರಸ್ತೇನೆ ಡೊಂಕು ಎನ್ನುತ್ತಿದ್ದಾನೆ ! ದೃಷ್ಟಿಯಂತೆ ಸೃಷ್ಟಿಯಲ್ಲವೆ ?"

⌂ ಶರಣ ನಿತ್ಯಾನಂದ, ಕೂಡಲ ಸಂಗಮ

? ಇಲ್ಲಿ ಇದ್ದಕ್ಕಿದ್ದ ಹಾಗೆಯೇ ಒಂದು ಧಾರ್ಮಿಕ ಸಮಾವೇಶ ನಡೆಯಿತು ವೀರಶೈವ ತತ್ವ ಚಿಂತನ ಸಮಾವೇಶ ಎಂಬ ಈ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಅನ್ನದಾನೀಶ್ವರ ಸ್ವಾಮಿಗಳು ಮೂರು ಮುಖ್ಯ ಸಂಗತಿಗಳನ್ನು ಪ್ರಸ್ತಾಪಿಸಿದರು. ಅವೆಂದರೆ,

1. ವೀರಶೈವ ಧರ್ಮವು ರೇಣುಕಾಚಾರ್ಯರಿಂದಲೂ ಆರಂಭವಾಗಿಲ್ಲ, ಬಸವಣ್ಣನವರಿಂದಲೂ ಅಲ್ಲ; ಇದು ಪರಶಿವನಿಂದ ಸ್ಥಾಪಿಸಲ್ಪಟ್ಟುದು.
2. ವೀರಶೈವರು ಲಿಂಗಧರಿಸುವುದರಿಂದ ಲಿಂಗಾಯತರೆಂದು ಕರೆಯಲಾಗುತ್ತದೆಯೇ ಹೊರತು ಲಿಂಗಾಯತ ಸ್ವತಂತ್ರ ಧರ್ಮವಲ್ಲ.

3. ವೀರಶೈವರು ಲಿಂಗಾಯತರು ಬೇರೆ ಬೇರೆ ಅಲ್ಲ.
ಈ ಬಗ್ಗೆ ಉಂಟಾಗಿರುವ ಗೊಂದಲ ಪರಿಹರಿಸಿರಿ.

★ ದೇವರು ಅರ್ಥಾತ್ ಪರಶಿವ ನಿರಾಕಾರ. ಜಗತ್ತಿನಲ್ಲಿ ಎಲ್ಲ ಧರ್ಮಗಳನ್ನು ಪ್ರವಾದಿಗಳು, ಮಹಾತ್ಮರು ಸ್ಥಾಪಿಸಿರುವರೇ ವಿನಾ ದೇವರು ಸ್ಥಾಪಿಸುವುದಿಲ್ಲ. ದೇವರು ವಿಶೇಷಾತ್ಮರನ್ನು ಆರಿಸಿಕೊಂಡು ಅವರಲ್ಲಿ ತನ್ನ ಅನುಗ್ರಹ ಮತ್ತು ಪ್ರೇರಣೆಯನ್ನು ಅವತೀರ್ಣಗೊಳಿಸಿ (Descending), ಸಂದೇಶ ನೀಡಿ ಅವರ ಮೂಲಕ ಜಗತ್ತಿಗೆ ಧರ್ಮವನ್ನು ಕೊಡುತ್ತಾನೆ. ಮೇಲ್ಕಂಡ ಸ್ವಾಮಿಗಳಿಗೆ ತತ್ತ್ವಜ್ಞಾನ (Philosophy) ಮತ್ತು ದರ್ಶನ ಶಾಸ್ತ್ರ (Mysticism) ಗೊತ್ತಿದ್ದಂತೆ ಕಾಣದು.

? 2. ವೀರಶೈವರು ಲಿಂಗಧರಿಸುವುದರಿಂದ ಲಿಂಗಾಯತರೆಂದು ಕರೆಯಲ್ಪಡುತ್ತಾರೆ ಎಂದು ಸಹ ಹೇಳಿದರು.

★ ವೀರಶೈವರೇ ಇರಲಿ ಯಾರೇ ಇರಲಿ ಇಷ್ಟಲಿಂಗ ದೀಕ್ಷೆ ಮತ್ತು ಧಾರಣೆಯಿಂದಲೇ ಲಿಂಗಾಯತರಾಗುವುದು. ಸ್ವಾಮಿಗಳ ಮಾತಿನಿಂದ ಸಿದ್ಧವಾಗುತ್ತದೆ. ವೀರಶೈವರಿಗೆ ಇಷ್ಟಲಿಂಗವಿರಲಿಲ್ಲ. ಅವರು ಗುರು ಬಸವಣ್ಣನವರು ಕೊಟ್ಟ ಇಷ್ಟಲಿಂಗಧರಿಸಿ ಲಿಂಗಾಯತರಾದರು. ಒಮ್ಮೆ ಲಿಂಗಾಯತರಾದ ಬಳಿಕ ಪೂರ್ವಾಶ್ರಮದ ವೀರಶೈವ ಪದ ಕೈಬಿಡಬೇಕಷ್ಟೆ.

? 3. ವೀರಶೈವರು ಲಿಂಗಾಯತರು ಬೇರೆ ಬೇರೆಯಲ್ಲ. ಅವರು ಒಂದೆ.

★ ಕರ್ನಾಟಕದಲ್ಲಿ ಮತ್ತು ನೆರೆಯ ರಾಜ್ಯಗಳಲ್ಲಿ ಗೋಳಾಕಾರದ ಇಷ್ಟಲಿಂಗ ಧರಿಸುವ ಮಂದಿ ಇದ್ದಾರಲ್ಲ ಇವರೆಲ್ಲರೂ ಲಿಂಗಾಯತರೇ ವಿನಾ ವೀರಶೈವರಲ್ಲ. ವೀರಶೈವರು ಎಂಬ ಜನರು ಪ್ರತ್ಯೇಕವಾಗಿ ಕೇರಳ, ತಮಿಳುನಾಡು, ಆಂಧ್ರಗಳಲ್ಲಿದ್ದಾರೆ. ಅಂದಾಗ ಲಿಂಗಾಯತರು ತಮ್ಮನ್ನು ವೀರಶೈವರೆಂದು ಏಕೆ ಕರೆದುಕೊಳ್ಳಬೇಕು ? ಅವರ ಆಚಾರ-ವಿಚಾರ, ಸಂಸ್ಕೃತಿ ಬೇರೆಯೇ ಇವೆ. ಕೇರಳ ವೀರಶೈವರಲ್ಲಿ ಬಹುಸಂಖ್ಯಾತರು ಮಾಂಸಾಹಾರಿಗಳು. ಆದ್ದರಿಂದ ಈ ಎರಡೂ ಸಮುದಾಯಗಳು ಸ್ಪಷ್ಟವಾಗಿ ಬೇರೆ ಬೇರೆ.

☐ ನಾಗಶೆಟ್ಟಿ ಶಟಕಾರ ಬೀದರ.

? ಕರ್ನಾಟಕದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆಗೆ ಆಗ್ರಹಿಸುತ್ತಿರುವ ಈ ಸನ್ನಿವೇಶದಲ್ಲಿ ಬಹಳಷ್ಟು ಪ್ರಗತಿ ಸಾಧಿಸಿರುವ ದಕ್ಷಿಣ ಕರ್ನಾಟಕದಲ್ಲೇ ಆಗಬೇಕೆಂಬ ಒತ್ತಾಯ ಸರಿಯೇ ? ಹಿಂದುಳಿದ ಪ್ರದೇಶವಾದ ಕಲ್ಯಾಣ ಕರ್ನಾಟಕ (ಬೀದರ, ಗುಲಬರ್ಗಾ)ದಲ್ಲಿ ಸ್ಥಾಪಿಸುವುದು ಒಳ್ಳೆಯದಲ್ಲವೆ ?

★ ಆ ಭಾಗದ ರಾಜಕೀಯ ಪ್ರತಿನಿಧಿಗಳಾದ ಎಂ.ಎಲ್.ಎ., ಎಂ.ಪಿ., ಎಂ.ಎಲ್.ಸಿ.ಗಳು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಬೇಕು, ಒತ್ತಡ ತರಬೇಕು. ರಾಜ್ಯ ಸರ್ಕಾರಕ್ಕೂ ಮನವರಿಕೆ ಮಾಡಿಕೊಡಬೇಕು. ಅವರೆಲ್ಲ ತಮ್ಮ ತಮ್ಮ ಗಳಿಕೆಯಲ್ಲೇ ಆಸಕ್ತರು; ನಾಡಿನ ಪ್ರಗತಿಯ ವಿಷಯದಲ್ಲಿ ಅಲ್ಲ. ಅಳದೆ ಇದ್ದರೆ ತಾಯಿ ಸಹ ಮಗುವಿಗೆ ಹಾಲುಣಿಸಲು ಮರೆಯುವಳು.

☐ ಧರ್ಮಣ್ಣ ಮಾಸ್ಟರು, ಕಣಮಸ, ತಾ-ಆಳಂದ

? ನನ್ನ ಮಿತ್ರರೊಬ್ಬರು ಕೇಳಿದರು, "ಬದುಕಿಗಾಗಿ ಧರ್ಮವೋ ಧರ್ಮಕ್ಕಾಗಿಯೇ ಬದುಕೋ" ಎಂದು

★ ಜೀವನ ಅತ್ಯಂತ ಅಮೂಲ್ಯ. ಅದು ಅರ್ಥಪೂರ್ಣವು ಸಾರ್ಥಕವೂ ಆಗಬೇಕೆಂದು ದೇವರು ಇಚ್ಛಿಸುತ್ತಾನೆ. ದೇವರ ಇಚ್ಛೆ ಪೂರೈಸಬೇಕೆಂದು ಧರ್ಮಸ್ಥಾಪಕರು, ಪ್ರವಾದಿಗಳು, ಮಹಾತ್ಮರು ಒಳ್ಳೆಯ ಮೌಲ್ಯಗಳನ್ನು ಬೋಧಿಸಿ, ದಾರಿಯನ್ನು ಹಾಕಿಕೊಡುತ್ತಾರೆ. ಧರ್ಮ ಒಂದು ಪಥ, ಪಥವೇ ಗುರಿಯಲ್ಲ. ಆದ್ದರಿಂದ ಬದುಕನ್ನು ಅರ್ಥಪೂರ್ಣವಾಗಿ ಮಾಡಿಕೊಳ್ಳಲು ಧರ್ಮವೊಂದು ಸಾಧನ ಎಂದು ಅರಿತು ಅಳವಡಿಸಿಕೊಳ್ಳಬೇಕು. ಆದರೆ ಕೆಲವೊಮ್ಮೆ ವ್ಯಕ್ತಿ ಮತಾಂಧತೆಯನ್ನು ಧರ್ಮ ಎಂದು ಭಾವಿಸಿ, ದಾರಿ ತಪ್ಪುವ ಸಾಧ್ಯತೆಯುಂಟು. ಧರ್ಮವು ಶಾಂತಿ ಪ್ರೀತಿ ಸಾಮರಸ್ಯ ಕಲಿಸಿದರೆ ಮತಾಂಧತೆಯು ದ್ವೇಷ - ಹಿಂಸೆಗಳನ್ನು ಪ್ರಚೋದಿಸುತ್ತದೆ.

2.? ಪ್ರಾಣ, ಜೀವ, ಆತ್ಮ ಎಂದರೇನು ? ಇವುಗಳ ಕಾರ್ಯ ಚಟುವಟಿಕೆ ಏನು ?

★ ಆತ್ಮ ಎಂಬುದು ದೇಹದಲ್ಲಿ ಇರುವ ಪರಮಾತ್ಮನ ಅಂಶವಾದ ಚೈತನ್ಯ. ಬ್ರಹ್ಮಾಂಡದಲ್ಲೆಲ್ಲ ಪರಮಾತ್ಮನು ಹಾಸು ಹೊಕ್ಕಾಗಿದ್ದರೆ, ಪಿಂಡಾಂಡದಲ್ಲಿ ಆತ್ಮವು ತುಂಬಿರುತ್ತದೆ. ಇದರ ವಿಶೇಷ ಸ್ಥಾನ ಹೃದಯ. ಪ್ರಾಣ ಎಂದರೆ ಆತ್ಮನ ಸಂಯೋಗದಲ್ಲಿರುವ ಗಾಳಿ. ಬರಿ ಗಾಳಿ ಜಡ, ಆತ್ಮನ ಆಸರೆಯಲ್ಲಿ ಸಂಚರಿಸಿದಾಗ ಅದಕ್ಕೆ ಪ್ರಾಣ ಎನ್ನುವುದು. ಈ ಪ್ರಾಣವಿದ್ದಾಗಲೇ ವ್ಯಕ್ತಿಯಲ್ಲಿ ಜೀವ ಇದೆ ಎನ್ನುವುದು. ಪಂಚ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣ, ಪಂಚಪ್ರಾಣ ಈ ಎಲ್ಲವುಗಳಿಂದ ಆವೃತವಾದ ಆತ್ಮಕ್ಕೆ ಜೀವ ಎನ್ನುವುದು. ಆತ್ಮವು ಶುದ್ಧ ಚೈತನ್ಯ, ಜೀವವು ಬಂಧಿತವಾದ ಆತ್ಮ. ಇದು ಪಂಜರದ ಪಕ್ಷಿಯಂತೆ !

☐ ಶಿವಕುಮಾರ ಪಾರಾ, ಎಕಲಾರ, ಬೀದರ್ ಜಿಲ್ಲೆ

? ಇತ್ತೀಚೆಗೆ ಬಸವಣ್ಣನವರ ಕಾರ್ಯಕ್ಷೇತ್ರವಾಗಿದ್ದ ಬಸವ ಕಲ್ಯಾಣದಲ್ಲಿ ಬೆಲ್ದಾಳ ಶರಣರ ನೇತೃತ್ವದಲ್ಲಿ ಬಸವ ಧರ್ಮ ಸಂಸತ್ ರಚಿಸಿದರು. ಇದರಲ್ಲಿ ರಾಷ್ಟ್ರೀಯ ಬಸವ ದಳದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ಇದೇನು ಅವರ ಸ್ವಂತ ಆಸ್ತಿಯೆ ?

★ ಪಾಲುಂಡು ಮೇಲುಂಬರೆ ಎಂಬಂತೆ ರಾಷ್ಟ್ರೀಯ ಬಸವ ದಳದವರು ಶರಣ ಮೇಳ, ಕಲ್ಯಾಣ ಪರ್ವ, ಅಖಿಲ ಭಾರತ ಬಸವ ಧರ್ಮ ಸಮ್ಮೇಳನ ಮುಂತಾದವುಗಳ ಅಮೃತ ಉಂಡು ಗುಂಪುಗಾರಿಕೆ, ಮತ್ಸರ, ದ್ವೇಷಗಳ ಆಗರವಾದ ಬೆಲ್ದಾಳ ಶರಣರ ಸಂಸತ್ತಿನ ಸದಸ್ಯರಾಗಲು ಏಕೆ ಹಾತೊರೆಯುತ್ತಾರೆ? ಅವರು ಆಹ್ವಾನಿಸಿದರೂ ಇವರು ಹೋಗುವುದಿಲ್ಲ.

☐ ಸಿದ್ದಪ್ಪ ಮೂಲಗೆ, ಚಟ್ನಾಳ, ಜಿ - ಬೀದರ್

? ಬೀದರಿನ ಶರಣೋದ್ಯಾನದಲ್ಲಿ ಆನು ದೇವಾ ಪುಸ್ತಕ ಮುಟ್ಟುಗೋಲಿಗಾಗಿ ಭೀಮಣ್ಣ ಖಂಡ್ರೆಯವರನ್ನು ಸನ್ಮಾನಿಸಲಾಯಿತು. ಆಗ ಸಂಘಟಕರು ವೀರಶೈ ಮಹಾಸಭಾವನ್ನು ಲಿಂಗಾಯತ ಧರ್ಮ ಮಹಾಸಭಾ ಎಂದು ಮಾಡಲು ವಿನಂತಿಸಿದರು. ಅವರು ಅದಕ್ಕೆ ಏನೂ ಪ್ರತಿಕ್ರಿಯೆ ಕೊಡಲಿಲ್ಲ. ಪುಸ್ತಕ ಮುಟ್ಟುಗೋಲಿನ ಶ್ರೇಯಸ್ಸು ಅವರಿಗೆ ಎಂಬಂತೆ ಬಿಂಬಿಸಲಾಯಿತು. ಇದು ಸರಿಯೇ ?

★ ಭೀಮಣ್ಣ ಖಂಡ್ರೆಯವರು ಯಾವ ತತ್ತ್ವ, ಸಿದ್ಧಾಂತಗಳಿಗೆ ಬದ್ಧರಾದವರಲ್ಲ. ವೀರಶೈವ ಪದದಲ್ಲಿ ದೋಷವಿದ್ದರೂ ಆ ಸಂಸ್ಥೆಯಲ್ಲಿ ಹಣವಿದೆ ಮತ್ತು ಸಾಮಾಜಿಕ ಸ್ಥಾನ ಸಿಗುತ್ತದೆ ಎಂದು ಅದರ ಅಧ್ಯಕ್ಷರಾಗಿದ್ದಾರೆ. ಹಾನುಗಲ್ ಕುಮಾರ ಸ್ವಾಮಿಗಳು ಸ್ಥಾಪಿಸಿದ ಸಂಸ್ಥೆಯ ಹೆಸರನ್ನು ಬೇರೆಯವರು ಬದಲು ಮಾಡಲು ಬರಲಿಕ್ಕಿಲ್ಲ ಅದಕ್ಕೇ ಉತ್ತರ ಕೊಟ್ಟಿಲ್ಲ. ಇನ್ನು ಶ್ರೇಯಸ್ಸಿಗೆ ಪಾಲುದಾರರು ಅವರೊಬ್ಬರೇನೆ ? ಭೀಮಣ್ಣ ಖಂಡ್ರೆಯವರು ಸನ್ಮಾನ್ಯ ದೇವೇಗೌಡರ ತರಹ ಕೆಲಸ ಆಗಬೇಕಾದರೆ ಎಲ್ಲರಲ್ಲೂ ವಿನಂತಿಸುವರು. ಕೆಲಸ ಆದ ಮೇಲೆ ನೀನ್ಯಾರು ನಡಿ ಅನ್ನೋದಲ್ಲದೆ ಶ್ರಮಿಸಿದವರನ್ನೆಲ್ಲ ಕಡೆಗಣಿಸಿ ಕೀರ್ತಿಯನ್ನು ಬಾಚಿಕೊಳ್ಳಲು ಹವಣಿಸುವರು. ಆದರೆ ಜನರು ಅಷ್ಟೇ ಬುದ್ಧಿವಂತರಿರುವರು. ಎಲ್ಲವನ್ನೂ ಮೊದಲಿನಿಂದಲೇ ಗಮನಿಸುತ್ತಿರುವರು.

- ಚಂದ್ರಿಕಾ ರಾಜಶೇಖರ್, ಬೆಂಗಳೂರು

? ನಿಮ್ಮ ಸಂಸ್ಥೆಗಳು ನಿಸ್ವಾರ್ಥತೆಯಿಂದ ಉತ್ತಮ ಕಾರ್ಯವನ್ನು ಮಾಡುತ್ತ ಅನೇಕರಿಗೆ ಆಶ್ರಯ ನೀಡಿವೆ. ಅಂಥ ಒಂದು ವಿಧಾಯಕ ಕೆಲಸಗಳನ್ನು ತೋರಿಸದೆ , ಪರಿಚಯಿಸದೆ ಕೆಲವು ಟಿ.ವಿ. ಚಾನಲ್ ಮತ್ತು ಪತ್ರಿಕೆಗಳು ಯಾರೋ ಹುಡುಗಿ ಆತ್ಮಹತ್ಯೆ ಮಾಡಿಕೊಂಡಿದ್ದನ್ನೇ ವಿಕೃತವಾಗಿ ಬಿತ್ತರಿಸಿದವಲ್ಲ. ಎಂಥ ಪ್ರವೃತ್ತಿ !

★ ಆ ಜಾತಿಯ ಪತ್ರಿಕೆಗಳು, ಟಿ.ವಿ.ಚಾನಲ್ ರಣ ಹದ್ದುಗಳಂತೆ; ರಣ ಹದ್ದುಗಳು ಶವ ಇದ್ದರೆ ಮಾತ್ರ ಬರುತ್ತವೆ. ನಿಮ್ಮಂತಹವರು ಜೇನ್ನೊಣಗಳಂತೆ, ವಿಧಾಯಕ ಮೌಲ್ಯಗಳನ್ನು ಗೌರವಿಸುವವರು.

ದೆಹಲಿಯ ಬಸವ ಮಂಟಪದ ವಾರ್ತೆ

ದಿ. 05 08-2007ರಂದು ದೆಹಲಿಗೆ ಆಗಮಿಸಿದ ಮುಖ್ಯಮಂತ್ರಿ ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಕರ್ನಾಟಕ ಭವನದಲ್ಲಿ ಭೇಟಿಯಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಆನು ದೇವಾ ಪುಸ್ತಕ ಮುಟ್ಟುಗೋಲಿಗಾಗಿ ಅಭಿನಂದಿಸಿ, ರುದ್ರಾಕ್ಷಿ ಮಾಲೆಯೊಂದನ್ನು ಹಾಕಿ ಆಶೀರ್ವದಿಸಿದರು. ಬೆಂಗಳೂರಿನಲ್ಲಿ ನಡೆಯಲಿದ್ದ ದಿ.19ರ ಬಸವ ಪಂಚಮಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು. ಕಾರ್ಯಕ್ರಮಕ್ಕೆ ಬರಲು ಒಪ್ಪಿಕೊಂಡ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಸಹ ಬಸವ ಮಂಟಪ ಆಗಿರುವ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಯೋಜನೆ, ಕಾರ್ಯವಿಸ್ತಾರದ ಬಗ್ಗೆ ಹದಿನೈದು ನಿಮಿಷಗಳಲ್ಲಿ ಪರಿಚಯ ಮಾಡಿಕೊಟ್ಟರು.

ಲಕ್ನೋದ ಇನ್ಸಾನ್ ದೋಸ್ತಿ ಸಮ್ಮೇಳನದಲ್ಲಿ ಸ್ವಾಮೀಜಿಯಿಂದ ಬಸವ ಸಂದೇಶ

ಉತ್ತರ ಪ್ರದೇಶದ ರಾಜಧಾನಿ ಲಕ್ನೋದಲ್ಲಿ ದಿ.12-8-2007ರಂದು ನಗರದ ಹಿಂದಿ ಭವನದಲ್ಲಿ ಫೋರಮ್ ಫಾರ್ ಪೀಸ್ ಆಂಡ್ ಯುನಿಸಿ ಎಂಬ ಶಾಂತಿವಾದಿ ಮುಸ್ಲಿಂ ಸಂಘಟನೆಯವರು ಹಮ್ಮಿಕೊಂಡಿದ್ದ ಇನ್ಸಾನ್ ದೋಸ್ತಿ (ಮಾನವ ಸ್ನೇಹ) ವಿಚಾರ ಸಂಕಿರಣದಲ್ಲಿ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಭಾರತೀಯ ಧರ್ಮಗಳ ಮಹಾಸಂಘ (Federation of Indian Religions)ದ ಪ್ರತಿನಿಧಿಯಾಗಿ ಭಾಗವಹಿಸಿದರು. ವಿಶ್ವಗುರು ಬಸವಣ್ಣ ಮತ್ತು ಲಿಂಗಾಯತ ಧರ್ಮದ ಸಂದೇಶ ಕುರಿತು ವಿಶೇಷ ಉಪನ್ಯಾಸ ನೀಡಿ, ಧರ್ಮ -ಅಧ್ಯಾತ್ಮಗಳು ದಯೋತ್ಪಾದನೆಯನ್ನು ಮಾಡಬೇಕೇ ವಿನಾ ಭಯೋತ್ಪಾದನೆಯನ್ನಲ್ಲ. ವಿಶ್ವಗುರು ಬಸವಣ್ಣನವರು ದಯವಿಲ್ಲದ

ಧರ್ಮ ಧರ್ಮವೇ ಅಲ್ಲ ಎಂದಿದ್ದಾರೆ. ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ದೇವರ ನಿಜವಾದ ಭಕ್ತ ಎಂದಿದ್ದಾರೆ. ಇವನಾರವ ಎಂದು ಯಾರನ್ನೂ ದ್ವೇಷಿಸದೆ ಇವನಮ್ಮವ ಎಂದು ಆದರಿಸುವುದೇ ನಿಜ ಧರ್ಮವಂತಿಕೆ ಎಂದಿದ್ದಾರೆ. ಎಂದು ಉಪನ್ಯಾಸ ನೀಡಿದಾಗ ಬಹಳ ಜನ ಸಂತೋಷ ಪಟ್ಟರಲ್ಲದೆ ಬಸವಣ್ಣ ಮತ್ತು ಲಿಂಗಾಯತ ಧರ್ಮದ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಪ್ರಶ್ನೆ ಕೇಳಿ, ತಿಳಿದುಕೊಂಡರು. ಫೋರಮ್ ಅಧ್ಯಕ್ಷ ಮೌಲಾನಾ ಜಹಿರ್ ಅಹ್ಮದ್ ಸಿದ್ಧಿಕಿ ಪ್ರಾಸ್ತಾವಿಕ ಭಾಷಣ ಮಾಡಿದರು. ಸ್ವಾಮೀಜಿಯವರ ಉಪನ್ಯಾಸದಿಂದ ಪ್ರಭಾವಿತರಾದ ಪ್ರೊ. ಅಮರನಾಥ ಸಿಂಗ್ ನಂತರ ಪೂಜ್ಯರಿಂದ 'ಬಸವಾಯತ್' ದೀಕ್ಷೆ ಪಡೆದುಕೊಂಡರು.

ಲಾರ್ಡ್ ಬಸವ ಕಂಪ್ಯೂಟರ್ ಅಕ್ಯಾಡಮಿ ಪ್ರಾರಂಭೋತ್ಸವ

ನವ ದೆಹಲಿಯ ಬಸವ ಮಂಟಪದಲ್ಲಿ ದಿ.18-8-2007ರಂದು ವಿಶೇಷ ಪೂಜೆ, ದಿ.19ರಂದು ಲಾರ್ಡ್ ಬಸವ ಕಂಪ್ಯೂಟರ್ ಸೆಂಟರಿನ ಪ್ರಾರಂಭೋತ್ಸವ ನಡೆಯಿತು. ಗುರು ಬಸವಣ್ಣನವರ 812ನೆಯ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ ಮಾತಾ ಮಹಾದೇವಿ ಚಾರಿಟಬಲ್ ಸೊಸೈಟಿ (ದೆಹಲಿ ಸೊಸೈಟಿ ಆಕ್ಟ್ ಪ್ರಕಾರ ನೋಂದಾಯಿತವಾದ ಸಂಸ್ಥೆ) ವತಿಯಿಂದ ಲಾರ್ಡ್ ಬಸವ ಕಂಪ್ಯೂಟರ್ ಕೇಂದ್ರವು ಉದ್ಘಾಟಿಸಲ್ಪಟ್ಟಿತು. ಪೂಜ್ಯ ಚನ್ನಬಸವಾನಂದ ಸ್ವಾಮಿಜಿಯವರ ದಿವ್ಯ ನೇತೃತ್ವದಲ್ಲಿ ನಡೆದ ಕಂಪ್ಯೂಟರ್ ಕೇಂದ್ರದ ಉದ್ಘಾಟನೆಯನ್ನು ಸ್ಥಳೀಯ ದೆಹಲಿ ಮಹಾ ನಗರ ನಿಗಮದ ಸದಸ್ಯೆ ಸುದೇಶವತಿ ದಾಸ್ ಬಟನ್ ಒತ್ತುವ ಮೂಲಕ ಕಂಪ್ಯೂಟರ್ ಚಾಲನೆ ಮಾಡಿದರು. ಮದನ್ ಮೋಹನ್ ದಾಸ್ ಫಲಕದ ಅನಾವರಣ ಮಾಡಿದರು. ಪೂಜ್ಯ ಶ್ರೀ ಸರ್ವಮಂಗಳಾ ಮಾತಾಜಿಯವರು ಸನ್ನಿಧಿ ವಹಿಸಿದ್ದರು. ಬಸವರಾಜ ಬಿರಾದರ, ನಾಗಶೆಟ್ಟಿ ಶಶಿಕಾಂತ ಪಾಟೀಲ್, ಪೋಲಿಸ್ ಅಧಿಕಾರಿ ಮೋಹನ್ ಮನಗೂಳಿ ಅವರಲ್ಲದೆ ಸ್ಥಳೀಯರೂ ಭಾಗವಹಿಸಿದ್ದರು.

ವಚನ ದುಂದುಭಿ-7

1. ಮೊಟ್ಟ ಮೊದಲ ಬಾರಿಗೆ ಕರ್ನಾಟಕದಲ್ಲಿ ಬಸವ ಜಯಂತಿ ಆಚರಿಸಿದವರು ಯಾರು?
2. ಬಸವ ಪಂಚಮಿಯನ್ನು ವಿಜೃಂಭಣೆಯಿಂದ ಮತ್ತು ಸಾರ್ವಜನಿಕವಾಗಿ ಆಚರಿಸುವ ಏಕೈಕ ಸಂಸ್ಥೆ ಯಾವುದು?
3. ಫ. ಗು. ಹಳಕಟ್ಟಿಯವರು ವಚನ ಸಾಹಿತ್ಯ ಮುದ್ರಣಕ್ಕಾಗಿ, ತಮ್ಮ ಮನೆ ಮಾರಾಟ ಮಾಡಿ ಪ್ರಿಂಟಿಂಗ್ ಪ್ರೆಸ್ ಹಾಕಿದ್ದರು. ಅದರ ಹೆಸರೇನು?
4. ಗುರು ಬಸವಣ್ಣನವರಿಂದ ಪರೀಕ್ಷೆಗೊಳಗಾದ ಇಬ್ಬರು ಶರಣರ ಹೆಸರು ಹೇಳಿ.
5. ವಚನ ಗುಮ್ಮಟವೆಂದು ಯಾರನ್ನು ಕರೆಯುತ್ತಾರೆ ?
6. ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಜನ್ಮಸ್ಥಳ ಯಾವುದು ?
7. ಕಲ್ಯಾಣದಲ್ಲಿ ಹಾಲು ಮಾರುವ ಕಾಯಕ ಮಾಡುತ್ತಿದ್ದ ಶರಣೆಯ ಹೆಸರೇನು ?
8. 'ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ' ಎಂದು ಯಾರು ಯಾರಿಗೆ ಹೇಳಿದರೆಂದು ಹರಿಹರ ಕವಿ ಹೇಳುತ್ತಾನೆ ?
9. ಮಾಹೇಶ್ವರ ಸ್ಥಲದಲ್ಲಿರುವ ಸಾಧಕನ ಪ್ರಮುಖ ಲಕ್ಷಣವೇನು ?
10. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಯಾವುದು ಕಡಿಗೀಲು ?
11. ದೇವರು ಮಾಡುವ ಐದು ಕಾರ್ಯಗಳು ಯಾವುವು ?
12. ಲಿಂಗಾಯತ ಧರ್ಮದ ಆಚರಣೆಗಳಿಗೆ ಅತೀ ಹತ್ತಿರದಲ್ಲಿ ಹೋಲುವ ಭಾರತೀಯ ಧರ್ಮ ಯಾವುದು ?
13. ಲಿಂಗಾಯತ ಧರ್ಮೀಯರ ಷಟ್‌ಶೀಲಗಳು ಯಾವುವು ?
14. ಲಿಂಗಾಯತ ಧರ್ಮೀಯರಿಗೆ ಹೊಸ ವರ್ಷದ ಆರಂಭ ದಿನ ಯಾವುದು ?
15. 'ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ' ಇದು ಯಾರ ವಚನದಲ್ಲಿರುವ ನುಡಿ ?
16. 'ಬಯಲು ಬಯಲನೆ ಬಿತ್ತಿ, ಬಯಲನೆ ಬೆಳೆದು' ಇದು ಯಾರ ವಚನ ?
17. 'ಗುರುವಿನ ಕರುಣದಿಂದ ಲಿಂಗವ ಕಂಡೆ, ಜಂಗಮವ ಕಂಡೆ' ಇದು ಯಾರ ವಚನ ?
18. 'ಶರಣಾರ್ಥಿ ಶರಣಾರ್ಥಿ ಎಲೆ ತಾಯಿ ನಮ್ಮವ್ವಾ, ಶರಣಾರ್ಥಿ ಶರಣಾರ್ಥಿ ಕರುಣ ಸಾಗರ ನಿಧಿಯೆ, ದಯಾಮೂರ್ತಿ ತಾಯೆ ಶರಣು ಶರಣಾರ್ಥಿ' ಎಂದು ಯಾರು ಯಾರಿಗೆ ಹೇಳಿದರು?
19. 'ಮಹಾಲಿಂಗ ತ್ರಿಪುರಾಂತಕ' ಇದು ಯಾರ ವಚನಾಂಕಿತ ?
20. ತುರುಗಾಹಿ ರಾಮಣ್ಣನ ವಚನಾಂಕಿತವೇನು ?

ವಚನ ದುಂದುಭಿ-6ರ ಸರಿ ಉತ್ತರಗಳು

1. ಜಂಗಮ ಸೇವೆ
2. ಗುರು ಬಸವಣ್ಣನವರ ವಚನದಲ್ಲಿ
3. ಮೂಲ ಕನ್ನಡದಲ್ಲಿದ್ದು, ಮರಾಠಿ ಮತ್ತು ಹಿಂದಿ ಭಾಷೆಗಳಿಗೆ ಭಾಷಾಂತರ ಗೊಂಡಿದೆ
4. ತೆಲುಗು, ಮರಾಠಿ, ಹಿಂದಿ, ತಮಿಳು
5. ವಚನ ಪಠಣ
6. ಲಿಂಗಾಯತ ಧರ್ಮ ಮಹಾಸಭೆ
7. ಶರಣ ಪರಂಪರೆ
8. ವಿಶ್ವ ವಿಭೂತಿ ಬಸವಣ್ಣ
9. ಆಚರಿಸಬಾರದು
10. ಶರಣ ವ್ರತ
11. ಓಂ ಶ್ರೀಗುರು ಬಸವ ಲಿಂಗಾಯನಮಃ ಮತ್ತು 866666(ಷಟ್ ಸಂಜ್ಞೆ)
12. ಶುದ್ಧ ತಪ್ಪು
13. ಗುರು ಬಸವಣ್ಣನವರ ವಚನಗಳನ್ನು
14. ಅಲ್ಲಮ ಪ್ರಭುದೇವರು ಅಕ್ಕ ಮಹಾದೇವಿಯವರಿಗೆ
15. ಅಲ್ಲಮ ಪ್ರಭುದೇವರು ಗುರು ಬಸವಣ್ಣನವರಿಗೆ
16. ಗುರು ಚನ್ನ ಬಸವಣ್ಣನವರ ವಚನ
17. 30-7-1196
18. ಹರ್ಡೇಕರ್ ಮಂಜಪ್ಪ
19. ಅಕ್ಕ ಮಹಾದೇವಿ ತಾಯಿ
20. ಮುಕ್ತಾಯಕ್ಕ ಅಲ್ಲಮ ಪ್ರಭುದೇವರಿಗೆ

ವಚನ ದುಂದುಭಿ - 6ರ ಸರಿಯುತ್ತರ ನೀಡಿದವರು

1. ನಿರ್ಮಲಾ ಜಯದೇವ, ಬೆಂಗಳೂರು
2. ಎಚ್.ಶಾಂತಮ್ಮ, ಭದ್ರಾವತಿ
3. ನಾಗಮ್ಮ ಭದ್ರಾವತಿ,
4. ರೂಪಾ ಜಗದೀಶ್, ಭದ್ರಾವತಿ
5. ಸಂಧ್ಯಾ ಗಣೇಶ್, ಬೆಂಗಳೂರು
6. ವಿಜಯಾ ರಾಜು, ಭದ್ರಾವತಿ
7. ದಾನೇಶ್ವರಿ ಕನಮಡಿ, ಬಿಜಾಪುರ
8. ಮಲ್ಲನಗೌಡ ಪೋಲೀಸ್ ಪಾಟೀಲ್

ಬಸವಣ್ಣನವರು ಜನ್ಮತಃ ಲಿಂಗೀ ಬ್ರಾಹ್ಮಣರು

(ಬಸವ ಪಂಚಮಿಯಲ್ಲಿ ಮಾಡಿದ ಭಾಷಣ) -ಡಾ|| ಮುದಿಗೊಂಡ ಶಿವಪ್ರಸಾದ

ಹೈದರಾಬಾದಿನಲ್ಲಿ ರಾಷ್ಟ್ರೀಯ ಬಸವ ದಳ ಮತ್ತು ಅಖಿಲ ಭಾರತ ವೀರಶೈವ ಮಹಾಸಭೆಯವರು ಜಂಟಿಯಾಗಿ ಒಂದು ಸಭೆ ಕರೆದಿದ್ದರು. ನನಗೂ ಆಹ್ವಾನಿಸಿದ್ದರು. ಅಷ್ಟರೊಳಗೆ ಕರ್ನಾಟಕದಲ್ಲಿ ಯಾರೋ ಒಬ್ಬ ಕುತ್ಸಿತ ಬುದ್ಧಿಯ ವ್ಯಕ್ತಿ ಬಸವಣ್ಣನವರ ಜನ್ಮ ಮೂಲದ ಬಗ್ಗೆ ಅಸಂಬದ್ಧವಾಗಿ ಬರೆದು ವಿವಾದ ಉಂಟಾಗಿರುವುದು ನನ್ನ ಗಮನಕ್ಕೂ ಬಂದಿತ್ತು. ಅಂದಿನ ಸಭೆಯಲ್ಲಿ ಬಂಜಗೆರೆ ಜಯಪ್ರಕಾಶರ ವಿಚಾರಧಾರೆಯನ್ನು ಖಂಡಿಸಿದೆ. ನಂತರ ಎರಡು ಮೂರು ದಿನಗಳಲ್ಲಿಯೇ ಪೂಜ್ಯ ಚನ್ನಬಸವಾನಂದ ಸ್ವಾಮಿಗಳು ಬಂದು ಭೇಟಿಯಾದಾಗ ಸಾಕಷ್ಟು ವಿವರಗಳನ್ನು ನೀಡಿದೆ. ನಾನು ಈ ಕಾರ್ಯಕ್ರಮಕ್ಕೆ ಒಪ್ಪಿಕೊಳ್ಳಲು ಮುಖ್ಯ ಕಾರಣವೆಂದರೆ ಪೂಜ್ಯ ಮಾತಾಜಿಯವರ ದರ್ಶನ ಪಡೆಯಬೇಕು ಎಂಬುದು. ಜೊತೆಗೆ ಶರಣರ ನಾಡಾದ ಕರ್ನಾಟಕವನ್ನು ಸಂದರ್ಶಿಸಬೇಕು ಎಂಬುದು. ನಾನು ಹೆಚ್ಚು ಹೇಳಲು ಬಯಸದೆ ಮುಖ್ಯವಾಗಿ ವಿಷಯಗಳನ್ನು ಪ್ರಸ್ತಾಪಿಸುತ್ತೇನೆ.

1. ಮಹಾಮಾನವತಾವಾದಿ, ವಿಶ್ವವಿಭೂತಿ ಬಸವಣ್ಣನವರ ವ್ಯಕ್ತಿತ್ವ ಅಥವಾ ಸಂದೇಶದ ಬಗ್ಗೆ ನಾನು ಹೆಚ್ಚೇನು ಹೇಳಬೇಕಾಗಿಲ್ಲ, ನನಗಿಂತ ಹೆಚ್ಚು ನಿಮಗೆ ಗೊತ್ತು.

ಪಾಲ್ಕುರಿಕೆ ಸೋಮನಾಥ ಒಬ್ಬ ಉದ್ದಾಮ ಕವಿ. ಬಸವೇಶ್ವರರು ಲಿಂಗೈಕ್ಯರಾದ 10-20 ವರ್ಷಗಳೊಳಗೆ ಬಸವ ಪುರಾಣಮು ಬರೆದಿದ್ದಾನೆ. ಹೀಗಾಗಿ ಅದು ಒಂದು ಐತಿಹಾಸಿಕ ದಾಖಲೆ. ಪಾಲ್ಕುರಿಕೆ ಸೋಮನಾಥನಿಗೆ ಬಸವೇಶ್ವರರ ಬಗ್ಗೆ ವಿಶೇಷ ಅಭಿಮಾನ ಹುಟ್ಟಲು ಆತನ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಬಸವೇಶ್ವರರ ಬಗ್ಗೆ ಹೊಂದಿದ್ದ ಗೌರವ. ಎರಡನೆಯದಾಗಿ ಸೋಮನಾಥನು ಶೈವ ಬ್ರಾಹ್ಮಣ (ಆಗಮಿಕ ಲಿಂಗೀ ಬ್ರಾಹ್ಮಣನು) ಮನೆತನದಲ್ಲಿ ಹುಟ್ಟಿದುದು. ಆತನು ಸ್ಪಷ್ಟವಾಗಿ ಇಂಗುಳೇಶ್ವರ ಬಾಗವಾಟಿಯ ಅಗ್ರಹಾರದಲ್ಲಿದ್ದ ವಿಪ್ರ ಪ್ರಮುಖನು. ಆತನ ಸತಿ ಅಪ್ರತಿಮ ಗುಣವತಿ ಸದಾಚಾರ ಸಂಪನ್ನಳಾದ ಮಾದಲಾಂಬಿಕೆ.

ಇಂಥ ಸ್ಪಷ್ಟ ಸತ್ಯವನ್ನು ತಿರುಚಲು ಬಂಜಗೆರೆ ಜಯಪ್ರಕಾಶನಿಗೆ ಯಾವ ಅಧಿಕಾರವಿದೆ? ಒಂದು ವೇಳೆ ಬಸವೇಶ್ವರರು ದಲಿತ ಮೂಲದವರಾಗಿದ್ದರೆ ಬಸವೇಶ್ವರರು ಲಿಂಗೈಕ್ಯರಾದ ಹತ್ತಿಪ್ಪತ್ತು ವರ್ಷಗಳಲ್ಲಿ ಅಭಿಮಾನ ಹುಟ್ಟಿ ಪಾಲ್ಕುರಿಕೆ ಸೋಮನಾಥನು ಬ್ರಾಹ್ಮಣೀಕರಿಸುತ್ತಿದ್ದನೆ? ಅಂಥ ಒಂದು ಹೋರಾಟವನ್ನೇ ಉದಾಸೀನ ಮಾಡಿ ಬಿಡುತ್ತಿದ್ದನು.

2. ನಾನು ಕೇಳಿದೆ, ಬ್ರಾಹ್ಮಣರಲ್ಲಿ ಬಸವಣ್ಣ ಎನ್ನುವ ಹೆಸರು ಏಕೆ ರೂಢಿಯಲ್ಲಿಲ್ಲ? ಕರ್ನಾಟಕದ ದಲಿತರಲ್ಲಿ ಈ ಹೆಸರು ರೂಢಿಯಲ್ಲಿದೆ. ಆದ್ದರಿಂದ ಬಸವಣ್ಣ ದಲಿತ ಮೂಲದವರು ಎಂಬುದು ಜಯಪ್ರಕಾಶರ ತರ್ಕ. ನಾವು ಲಿಂಗೀ ಬ್ರಾಹ್ಮಣರು, ಆಗಮಿಕ ಶೈವ ಬ್ರಾಹ್ಮಣರು. ನಮ್ಮ ತಾತನ ಹೆಸರು ವೀರಭದ್ರಾರಾಧ್ಯ. ಅವರ ತಂದೆ ಹೆಸರು ಬಸವಾರಾಧ್ಯ. ಆಂಧ್ರದ ಗುಂಟೂರು ಜಿಲ್ಲೆಯಲ್ಲಿ ಒಂದು ಭಾಗ ಕಮ್ಮೆ ನಾಡು ಎಂದು ಪ್ರಸಿದ್ಧವಾಗಿದೆ. ಕಮ್ಮೆ ಬ್ರಾಹ್ಮಣರು ಬಹಳ ಮೇಧಾವಿಗಳೆಂದು ಹೆಸರು ಪಡೆದಿರುವುದೇ ಅಲ್ಲದೆ ಬಹಳಷ್ಟು ಜನ ಗಣ್ಯ ವ್ಯಕ್ತಿಗಳಾಗಿ ಖ್ಯಾತನಾಮರಾಗಿದ್ದಾರೆ. ಬಸವೇಶ್ವರರ ಮುತ್ತಾತಂದಿರು ಆಂಧ್ರ ಕಡೆಯಿಂದ ವಲಸೆ ಬಂದು ಬಾಗೇವಾಡಿಯ ಸುತ್ತಮುತ್ತ ನೆಲೆಸಿದ್ದಾರೆ. ಕಮ್ಮೆ ಬ್ರಾಹ್ಮಣರಲ್ಲಿ ಬಸವರಸ, ಹಾಲ ಬಸವಿದೇವ ಮುಂತಾದವು ಚಿರಪರಿಚಿತವಾಗಿವೆ.

3. ಅದೇ ರೀತಿ ಆ ಲೇಖಕನು ಮಾದಿರಾಜ, ಮಾದಾಂಬಿಕೆ ಎನ್ನುವ ಹೆಸರುಗಳ ಆಧಾರದ ಮೇಲೆ ಅವರು ಮಾದರು ಎಂದು ಕುತರ್ಕ ಮಾಡಿದ್ದಾಗಿ ತಿಳಿಯಿತು. ಕಮ್ಮೆ ಬ್ರಾಹ್ಮಣರಲ್ಲಿ ಮಾದರಸ, ಮಾದಿರಾಜ, ಮಾದಾಂಬೆ, ನಾಗಾಂಬಿಕೆ ಮುಂತಾದವು ಬಹಳ ಜನಪ್ರಿಯ ಹೆಸರುಗಳು.

ಶೈವಾಗಮಾಚಾರ್ಯನಾದ ಮಾದಿರಾಜ ತಾಂತ್ರಿಕನಿದ್ದ ಎಂದು ಆ ಲೇಖಕ ಬರೆದಿರುವುದಾಗಿ ತಿಳಿಯಿತು. ಶೈವಾಗಮಾಚಾರ್ಯರಾದ ಕಮ್ಮೆ ಬ್ರಾಹ್ಮಣರು ವೈದಿಕ ಮತ್ತು ಆಗಮಿಕ ಸಂಪ್ರದಾಯದವರೇ ವಿನಾ ಅನಾಚಾರಿಗಳು, ತಾಂತ್ರಿಕರಲ್ಲ.

ಈ ಸತ್ಯ ಸಂಗತಿಯನ್ನು ತಿಳಿಸಲೆಂದೇ ನಾನು ಬಂದಿರುವುದು. ಎಂದು ನುಡಿದ ಡಾ|| ಮುದಿಗೊಂಡ ಶಿವಪ್ರಸಾದರು ಪಾಲ್ಕುರಿಕೆ ಸೋಮನಾಥನ ಕೃತಿ ಬಸವ ಪುರಾಣಮು ಪುಸ್ತಕದ ಮೂಲ ಪದ್ಯದ ಕೆಲವು ಸಾಲುಗಳನ್ನು ಓದಿದರು.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666



ಬಸವ ಗಂಗೋತ್ರಿಯಲ್ಲಿ ಬಸವ ತತ್ವ ತರಬೇತಿ ಕಮ್ಮಟ

ನಾಯಕತ್ವ ತರಬೇತಿ ಶಿಬಿರ

2007ರ ಅಕ್ಟೋಬರ್ 12ರಿಂದ 21ರ ವರೆಗೆ

ಮಡಿಕೆಯ ಮಾಡುವೊಡೆ ಮಣ್ಣೆ ಮೊದಲು
ತೊಡುಗೆಯ ಮಾಡುವೊಡೆ ಹೊನ್ನೆ ಮೊದಲು
ಶಿವಪಥವರಿವೊಡೆ ಗುರುಪಥವೆ ಮೊದಲು
ನಮ್ಮ ಲಿಂಗದೇವರನರಿವೊಡೆ ಶರಣರ ಸಂಗವೇ ಮೊದಲು

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ಅಕ್ಟೋಬರ್ ದಸರಾ ರಜಾ ಕಾಲದಲ್ಲಿ ಬಸವ ತತ್ವ ತರಬೇತಿ ಕಮ್ಮಟ ಎಂಬ ಅಧ್ಯಾತ್ಮಿಕ ತರಬೇತಿಯನ್ನು ಯುವ ಜನಾಂಗದ ವ್ಯಕ್ತಿತ್ವ ವಿಕಾಸಕ್ಕಾಗಿ ನಾಯಕತ್ವ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ. 2007ರ ಅಕ್ಟೋಬರ್ 12ರಿಂದ 21ರವರೆಗೆ 10 ದಿವಸಗಳ ಕಾಲ ವಿಶ್ವಕಲ್ಯಾಣ ಮಿಷನ್ ಒಡೆತನದ ಕುಂಬಳಗೋಡು ಗ್ರಾಮದ ಸಮೀಪದಲ್ಲಿ ಬೆಂಗಳೂರು - ಮೈಸೂರು ಹೆದ್ದಾರಿಯ 21 ಕಿ.ಮಿ. ದೂರದಲ್ಲಿರುವ ಬಸವ ಗಂಗೋತ್ರಿಯಲ್ಲಿ ಈ ತರಬೇತಿ ಕಮ್ಮಟವು ನಡೆಯಲಿದೆ. ಪ್ರಸ್ತುತ ಶಿಬಿರದಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ಧಾರ್ಮಿಕ, ತಾತ್ವಿಕ ವಿಷಯಗಳ ಬಗ್ಗೆ ಉಪನ್ಯಾಸಗಳು ಜರುಗುತ್ತವೆ. ಈ ಕುರಿತು ಮುಕ್ತವಾದ ಸಂವಾದ ನಡೆಯುವುದರಿಂದ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಸದವಕಾಶವು ದೊರೆಯುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ.
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕ ಯೋಗ.
3. ಯುವ ವಯಸ್ಸಿನವರಿಗೆ ವ್ಯಾಯಾಮ, ಆಟ- ಓಟ, ಲಾಠಿ ತರಬೇತಿ, ಹಿರಿಯ ವಯಸ್ಕರಿಗೆ ಮೃದುವಾದ ಆಟಗಳು.
4. ವಚನ ಚಿಂತನೆ, ವಿಶ್ಲೇಷಣೆ, ಮುಕ್ತ ಸಂವಾದ, ಚರ್ಚಾಗೋಷ್ಠಿ
5. ಆರೋಗ್ಯ ಭಾಗ್ಯ, ನಾಯಕತ್ವ ಬೆಳವಣಗೆ ಕುರಿತು ಚಿಂತನೆ.
6. ಬಸವೇಶ್ವರ ಪೂಜಾವ್ರತ, ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ, ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ, ತರಬೇತಿ ಹೊಂದಿದವರಿಗೆ ಮಾನ್ಯತಾ ಪತ್ರ ಕೊಡಲಾಗುವುದು.

ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ, ಪೂಜ್ಯ ಮಾತೆ ಜ್ಞಾನೇಶ್ವರಿ, ಪೂಜ್ಯ ಮಾತೆ ಸತ್ಯಾದೇವಿ, ಶರಣ. ಸಚ್ಚಿದಾನಂದ, ಶರಣ. ಕರಿಬಸಪ್ಪ ಕೋರಿಶೆಟ್ಟರು, ಶರಣ.ಶ್ರೀಕಂಠ ಕುಮಾರ್, ಶರಣ. ವೀರೇಶ್ ಮತ್ತಿತರ ಸ್ವಯಂ ಸೇವಕರು, ಶರಣ ಬಂಧುಗಳು ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ.12-10-2007ರಿಂದ 21-10-2007ರವರೆಗೆ 10 ದಿವಸಗಳ ಕಾಲ ನಡೆಯುವ ಶಿಬಿರದ ಶುಲ್ಕ ಒಬ್ಬರಿಗೆ 450ರೂ. ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ರಿಯಾಯಿತಿಯೊಡನೆ ರೂ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಆಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300ರೂ.(ಈ ಸಲ ಶಿಬಿರದ ಖರ್ಚು ವೆಚ್ಚಗಳಿಗಾಗಿ ದೇಣಿಗೆ ಸಂಗ್ರಹಿಸಲು ಸಮಯಾವಕಾಶ ವಾಗಿಲ್ಲದಿರುವುದರಿಂದ ಯಾರೂ ಉಚಿತ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಬಾರದಾಗಿ ನಮ್ರ ಸೂಚನೆ. ರಾಷ್ಟ್ರೀಯ ಬಸವ ದಳಗಳವರು ಆರ್ಥಿಕವಾಗಿ ಅಶಕ್ತರಾಗಿರುವ ಉತ್ತಮ ಯುವ ಜನರಿಗೆ ತರಬೇತಿ ಕೊಡಿಸಬೇಕು ಎಂದಿದ್ದರೆ, ಅವರ ಪರವಾಗಿ ಪ್ರತಿನಿಧಿ ಶುಲ್ಕವನ್ನು ಕಟ್ಟಿ ಬರುವ ಹೋಗುವ ಖರ್ಚು ನೀಡಿ, ಭಾಗವಹಿಸಲು ಅವಕಾಶ ಮಾಡಿಕೊಡಬೇಕು)

1. ಶಿಬಿರಾರ್ಥಿಗಳು ಅಕ್ಟೋಬರ್ 11ರ ಸಂಜೆಯೊಳಗೆ ಅಥವಾ 12ರ ಬೆಳಿಗ್ಗೆ 10 ಗಂಟೆಯೊಳಗೆ ಬಂದು ಬಸವ ಗಂಗೋತ್ರಿಯನ್ನು ತಲ್ಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆ ಪರದೆ, ಊಟದ ತಟ್ಟೆ -ಲೋಟ, ಇಷ್ಟಲಿಂಗ ಪೂಜೆಯ ಸಾಮಾಗ್ರಿ, ಟಿಪ್ಪಣಿ ಬರೆದುಕೊಳ್ಳಲು ನೋಟ್ ಬುಕ್, ಪೆನ್ನು ತಂದಿರಬೇಕು.

ದಾನಿಗಳಲ್ಲಿ ಕೋರಿಕೆ

ಅನೇಕ ಆಸಕ್ತರ ಕೋರಿಕೆಯ ಮೇರೆಗೆ ಮತ್ತು ತರಬೇತಿ ಕಮ್ಮಟ ಅಗತ್ಯವಿದೆ ಎನ್ನಿಸಿದ್ದರಿಂದ ಪೂರ್ವಭಾವಿ ಸಿದ್ಧತೆ ಇಲ್ಲದೆ ವೆಚ್ಚಕ್ಕಾಗಿ ದೇಣಿಗೆ ಸಂಗ್ರಹಿಸಲು ಸಮಯ ದೊರೆತಿಲ್ಲ ಆದ್ದರಿಂದ ದಾನಿಗಳು ಮತ್ತು ಸಹೃದಯರು ಸ್ವಯಂ ಪ್ರೇರಣೆಯಿಂದ ಕಾಣಿಕೆ ನೀಡಲು ಮುಂದೆ ಬರಬೇಕೆಂದು ಕೋರುತ್ತೇವೆ.

ಬಸವ ಗಂಗೋತ್ರಿಯು ಬೆಂಗಳೂರು- ಮೈಸೂರು ಹೆದ್ದಾರಿಯ 21 ಕಿ.ಮಿ ದೂರದಲ್ಲಿ ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡಿನ ಮಧ್ಯದಲ್ಲಿದೆ. ಮೆಜೆಸ್ಟಿಕ್‌ನ ಪ್ಲಾಟ್‌ಫಾರಂ 19/ಅದಿಂದ 226 ಅ, ಸಿಟಿ ಮಾರುಕಟ್ಟೆಯಿಂದ ರೂಟ್ ನಂ.226 F, 226 M, 226 N, ಬಸ್ ಸಂಚರಿಸುತ್ತವೆ. ಯಲಹಂಕ ಉಪ ನಗರದಿಂದ ಬಸವ ಮಂಟಪ ಸ್ಟಾಪ್ ಮಾರ್ಗವಾಗಿ ಕೆಂಗೇರಿವರೆಗೆ ರೂಟ್ ನಂ. 401 K, 401Q , 401 R ಬಸ್ ಸಂಚರಿಸುತ್ತವೆ.

ದೆಹಲಿಯ ಸಮ್ಮೇಳನ ಅಕ್ಟೋಬರ್ 27, 28,29ರಂದು

2007ರ ಅಕ್ಟೋಬರ್ 27, 28, 29ರಂದು ದೆಹಲಿಯಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು ಏರ್ಪಡಿಸಲಾಗಿದೆ. ಪ್ರತಿನಿಧಿ ಶುಲ್ಕ ಒಬ್ಬರಿಗೆ 600 (ಆರು ನೂರು) ರೂಪಾಯಿಗಳು. ಭಾಗವಹಿಸಬೇಕು ಎನ್ನುವವರು ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಬೇಕು. ಮತ್ತು ರೇಲ್ವೆ ರಿಸರ್ವೇಷನ್ ಮಾಡಿಸಿಕೊಳ್ಳಬೇಕು. ಬೆಂಗಳೂರಿನಿಂದ ಕರ್ನಾಟಕ ಎಕ್ಸ್‌ಪ್ರೆಸ್ ಮತ್ತು ಸಂಪರ್ಕ ಕ್ರಾಂತಿಗೆ ದಿ 24-10-2007ರಂದು ಹೊರಡುವಂತೆ ರಿಸರ್ವೇಷನ್ ಮಾಡಿಸಿಕೊಡಲು ಒಬ್ಬರಿಗೆ ಹೋಗುವ ಬರುವ ವೆಚ್ಚ ಸೇರಿ 1200 ರೂ, 60 ವರ್ಷ ದಾಟಿದ ಹಿರಿಯ ನಾಗರೀಕರಿಗೆ 900 ರೂ. ಸಂಪರ್ಕಿಸಬೇಕಾದವರು ಇಂದುಶೇಖರ್- 9945684230, ಇ/ಟ ಬಸವ ಮಂಟಪ.

ಶಿಬಿರದ ಶುಲ್ಕ ಕಳಿಸುವವರು, ದೆಹಲಿ ಸಮ್ಮೇಳನದ ಪ್ರತಿನಿಧಿ ಶುಲ್ಕ ಕಳಿಸುವವರು ಸಂಪರ್ಕಿಸಬೇಕಾದ

ವಿಳಾಸ : ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು -560010
ದೂರವಾಣಿ : 080- 23325335/ 23232476

ದೆಹಲಿ ಸಮ್ಮೇಳನ ಮತ್ತು ಪ್ರವಾಸ ಸ್ಥಳ ವೀಕ್ಷಣೆ

1. ದೆಹಲಿ- ಅಮೃತಸರ-ವಾಘ (ಭಾರತ -ಪಾಕಿಸ್ಥಾನ ಗಡಿ) ಬಾರ್ಡರ್- ವೈಷ್ಣೋದೇವಿ -ದೆಹಲಿ 3 ದಿವಸಗಳು. ಒಬ್ಬರಿಗೆ 1000 (ಒಂದು ಸಾವಿರ) ರೂ.
2. ದೆಹಲಿ- ಹರದ್ವಾರ- ಋಷಿಕೇಶ - 2 ದಿವಸಗಳು
   49 ಸೀಟಿನ ಲಕ್ಷುರಿ ಬಸ್ — 750 ರೂ
   35 ಸೀಟಿನ ಎ.ಸಿ.ಬಸ್ — 1200 ರೂ
3. ದೆಹಲಿ -ಆಗ್ರಾ -ಮಥುರಾ -ಬೃಂದಾವನ 1 ದಿವಸ
   49 ಸೀಟಿನ ಲಕ್ಷುರಿ ಬಸ್ — 600 ರೂ
4. ದೆಹಲಿ -ಶಿಮ್ಲಾ-ಕುಲು-ಮನಾಲಿ 5 ದಿವಸ
   49 ಸೀಟಿನ ಲಕ್ಷುರಿ ಬಸ್ — 1500 ರೂ
5. ದೆಹಲಿ ಲೋಕಲ್ 49 ಸೀಟ್ ಬಸ್ — 110ರೂ

ಇದರಲ್ಲಿ ಊಟದ ವೆಚ್ಚ ಸೇರಿಲ್ಲ. ಸ್ಥಳೀಯವಾಗಿ ಊಟ ಪಡೆಯಬೇಕು. ಸಂಸ್ಥೆಯಿಂದ ಊಟದ ವ್ಯವಸ್ಥೆ ಮಾಡಿದರೆ ಅದಕ್ಕೆ ಪ್ರತ್ಯೇಕ ವಾಗಿ ಹಣ ಕೊಡಬೇಕು.

ವಿ.ಸೂ : 1. ಯಾವ ಯಾವ ಊರನ್ನು ಸಂದರ್ಶಿಸಬೇಕೋ ಅದರ ಮೇಲೆ ದಿನಗಳನ್ನು ನಿರ್ಧರಿಸಿ ವಾಪಸ್ಸು ಬರುವ ಟಿಕೆಟ್ ಬುಕ್ಕ್ ಮಾಡಬೇಕು. 2. ಚಿಕ್ಕ ಚಿಕ್ಕ ಗುಂಪು ಮಾಡಿಕೊಂಡು ಟ್ಯಾಕ್ಸಿ ಟಾಟಾ ಸುಮೋ ಇತ್ಯಾದಿ ಮಾಡಿಕೊಂಡು ತಾವು ತಾವೇ ಹೋಗಿಯೂ ಬರಬಹುದು.

ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯದ ಪ್ರತಿಪಾದಕ
ಗುರು ಬಸವಣ್ಣನವರು

- ಕರಿಬಸಪ್ಪ ಕೋರಿಶೆಟ್ಟರ್

'ಬಸವ'ಎಂಬ ನಾಮವೇ ಮಂತ್ರ ಸದೃಶ. **'ದ್ವಿತೀಯ ಶಂಭು'** , ಶಿವನೆ ಬಸವಾ, ಬಸವಾ ಶಿವನೆ... ಎಂದು ಅನುಭಾವಿಗಳಿಂದ ಸಂಬೋಧಿಸಲ್ಪಟ್ಟ ಬಸವಣ್ಣನವರು ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಸೃಷ್ಟಿಕರ್ತನಟ್ಟಿದ ಒಬ್ಬ ಶರಣ.

ಬಹುಶಃ ಗುರು ಬಸವಣ್ಣನವರೇನಾದರೂ 12ನೇ ಶತಮಾನದಲ್ಲಿ ನಮ್ಮ ನಾಡಿನಲ್ಲಿ ಜನಿಸದಿದ್ದರೆ ಈಗಲೂ ಇಷ್ಟೊಂದು ಭಯಾನಕ ವಾಸ್ತವವಾಗಿರುವ ಜಾತಿಪದ್ಧತಿ, ಅಸ್ಪೃಶ್ಯತೆ, ಪ್ರಾಣಿ ಬಲಿ, ಹೋಮ, ಹವನ, ಮಾಟ, ಮಂತ್ರಗಳಂತಹ ಮೂಢಾಚರಣೆಗಳು ಯಾವ ಮಟ್ಟದಲ್ಲಿ ವಿಜೃಂಭಿಸುತ್ತಿದ್ದವು ಎಂಬುದು ಕಲ್ಪನೆಗೂ ನಿಲುಕದ ಸಂಗತಿ. ಶ್ರೀ ಗುರು ಬಸವಣ್ಣನವರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಏನಾದರೂ ಜನಿಸಿದ್ದರೆ ಅವರ ವಿಚಾರಗಳು ವಿಶ್ವವ್ಯಾಪಿಯಾಗಿ ಪ್ರಚಾರಗೊಂಡು ಅವರು ಲೋಕ ಪೂಜ್ಯರಾಗಿ ಕಂಗೊಳಿಸುತ್ತಿದ್ದರು.

ಗುರು ಬಸವಣ್ಣನವರು ಈ ಜಗತ್ತು ಕಂಡ ಅಪರೂಪದ ಸಂತ, ದಾರ್ಶನಿಕ, ಪ್ರವಾದಿ. ಇಂದು ಭಾರತೀಯ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಹನ್ನೆರಡನೇ ಶತಮಾನದಲ್ಲಿಯೇ ಅನುಷ್ಠಾನಕ್ಕೆ ತಂದು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ತತ್ವದ ತಳಹದಿಯ ಮೇಲೆ **'ಕಾಯಕ –ದಾಸೋಹ'** ಪ್ರಧಾನವಾದ ಸಮಾಜವಾದಿ ಸಮಾಜವನ್ನು ರೂಪಿಸಿದರು. ಅವರ ಕಲ್ಪನೆಯ ಕೂಸಾದ ಲಿಂಗಾಯತ ಧರ್ಮ ಒಂದು ಜಾತಿಯಲ್ಲ. ಅಂದು ಪ್ರಚಲಿತವಿದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಶ್ರೇಣೀಕೃತ ವ್ಯವಸ್ಥೆಯನ್ನು ವಿರೋಧಿಸಿ ಯಾರ ಶ್ರೇಷ್ಠತ್ವವನ್ನೂ ಒಪ್ಪದೆ ಯಾರನ್ನೂ ಕನಿಷ್ಠವೆಂದು ಭಾವಿಸದೆ ಸಕಲ ಜೀವಾತ್ಮರನ್ನು ಸಮಾನವಾಗಿ ಕಂಡು ಭಾರತ ದೇಶದಲ್ಲಿ ಜಾತ್ಯತೀತ ವ್ಯವಸ್ಥೆಯನ್ನು ಅಕ್ಷರಶಃ ಅನುಷ್ಠಾನಕ್ಕೆ ತಂದ ಪ್ರಗತಿಪರ ಜೀವನ ವಿಧಾನವಾಗಿದೆ. ಈ ಬಗ್ಗೆ ಹಿಂದೂ ಕಾನೂನಿನ ತತ್ವಗಳು (Principles of Hindu Law) ಇದರ ಕಲಂ 627ರಲ್ಲಿ ಸ್ಪಷ್ಟ ವಿವರಣೆಯನ್ನು ನೀಡಲಾಗಿದೆ. ಇಂಥ ಲಿಂಗಾಯತ ಎಂಬ ಹೊಸ ಧರ್ಮದ ಆದಿ ಗುರುಗಳು ಶ್ರೀ ಗುರು ಬಸವಣ್ಣನವರು. ಸೃಷ್ಟಿಕರ್ತ ಪರಮಾತ್ಮನನ್ನು ದೇಗುಲಗಳಲ್ಲಿ ಹುಡುಕದೆ ತಮ್ಮ ಅಂಗೈಯಲ್ಲಿಯೇ ಇಷ್ಟಲಿಂಗ ರೂಪದಲ್ಲಿ ಈ ಧರ್ಮದ ಮಹತ್ವದ ಆಚರಣೆ. ಈ ಇಷ್ಟಲಿಂಗ ದೀಕ್ಷೆ ಹೊಂದಲು ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಿದವರು ಬಸವಣ್ಣನವರು. ಆ ಮೂಲಕ ದೇವಾಲಯ ವ್ಯವಸ್ಥೆಯಿಂದ ಹೊರಗುಳಿದಿದ್ದ ಮಹಿಳೆಯರು ಮತ್ತು ಶೂದ್ರಾತಿ ಶೂದ್ರರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ದಯಪಾಲಿಸುತ್ತಾರೆ. ಈ ಇಷ್ಟಲಿಂಗವು ಬಸವಣ್ಣನವರ ಕಲ್ಪನೆಯ ಕೂಸು. ಆದ್ದರಿಂದಲೆ ಚಿನ್ಮಯಜ್ಞಾನಿ ಚನ್ನಬಸವಣ್ಣನವರು 'ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು' ಎಂದು ತಮ್ಮ ವಚನದಲ್ಲಿ ನುಡಿಯುತ್ತಾರೆ.

ಈಗಿನ ಬಸವನ ಬಾಗೇವಾಡಿಯ ಶೈವ ಬ್ರಾಹ್ಮಣ ಮನೆತನದ ಮಾದರಸ, ಮಾದಲಾಂಬಿಕೆ ದಂಪತಿಗಳ ಪುಣ್ಯ ಗರ್ಭದಲ್ಲಿ ಕ್ರಿ.ಶ.1134ರ ಆನಂದನಾಮ ಸಂವತ್ಸರ, ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿದ ಬಸವಣ್ಣನವರು ಬಾಲ್ಯದಲ್ಲಿಯೇ ತೀಕ್ಷ್ಣಮತಿ ಹಾಗೂ ಸ್ವತಂತ್ರ ವಿಚಾರವಾದಿ. ಎಂಟು ವರ್ಷದ ಬಾಲಕನಾದ ಬಸವಣ್ಣನವರಿಗೆ ತಮ್ಮ ಬ್ರಾಹ್ಮಣ ಮನೆತನದ ಸಂಪ್ರದಾಯದಂತೆ ಉಪನಯನವನ್ನು ಮಾಡಲು ತಂದೆ-ತಾಯಿಗಳು ನಿರ್ಧರಿಸಿದಾಗ ತನಗಿಂತ ಹಿರಿಯರಾದ ಸಹೋದರಿ ನಾಗಲಾಂಬಿಕೆಗೆ ಮೊದಲು ಉಪನಯನ ಮಾಡುವಂತೆ ಆಗ್ರಹಿಸುತ್ತಾರೆ. ಸ್ತ್ರೀಯರಿಗೆ ಧಾರ್ಮಿಕ ಸಂಸ್ಕಾರ ಹೊಂದುವ ಅರ್ಹತೆ ಇಲ್ಲ ಎಂಬ ಹಿರಿಯರ ವಾದವನ್ನು ತಿರಸ್ಕರಿಸಿದ ಬಾಲಕ ಬಸವಣ್ಣನವರು ಸ್ತ್ರೀ –ಪುರುಷರ ಮಧ್ಯೆ ಅಸಮಾನತೆ ಸೃಷ್ಟಿಸಿದ ಈ ವ್ಯವಸ್ಥೆಯ ಮಧ್ಯೆ ಇರಲು ತನಗೆ ಇಷ್ಟವಿಲ್ಲವೆಂದು ಒತ್ತಾಯದಿಂದ ಕಟ್ಟಿದ ಜನಿವಾರವನ್ನು ಕಿತ್ತೆಸೆದು ಮನೆ ಬಿಟ್ಟು ತೆರಳುತ್ತಾರೆ. ಬಾಲಕನಿದ್ದಾಗಲೆ ಸ್ತ್ರೀ ಸಮಾನತೆಗಾಗಿ ಧ್ವನಿ ಎತ್ತಿದ ಅದನ್ನು ನೀಡದ ವ್ಯವಸ್ಥೆಯನ್ನು ಧಿಕ್ಕರಿಸಿದ ಬಸವಣ್ಣ ವಿಶ್ವದ ಅತ್ಯಂತ ಚಿಕ್ಕ ವಯಸ್ಸಿನ ಬಂಡಾಯಗಾರರಾಗಿ ಗೋಚರಿಸುತ್ತಾರೆ.

ಕ್ರಿ.ಶ.1142ರ ದುಂದುಭಿನಾಮ ಸಂವತ್ಸರದಂದು ಕೂಡಲ ಸಂಗಮಕ್ಕೆ ಆಗಮಿಸಿದ ಗುರು ಬಸವಣ್ಣನವರು ಅಲ್ಲಿಯೇ ಗುರುಕುಲದಲ್ಲಿ ತಮ್ಮ 21ನೇ ವಯಸ್ಸಿನವರೆಗೆ ಇದ್ದು ವಿದ್ಯಾರ್ಜನೆ ಗೈಯುತ್ತಾರೆ. ಕ್ರಿ.ಶ.1155ರಲ್ಲಿ ಕೂಡಲ ಸಂಗಮದಿಂದ ಮಂಗಳವಾಡಕ್ಕೆ ಆಗಮಿಸಿ ಕರಣಿಕ ಕಾಯಕ ಕೈಗೊಂಡು ನಂತರ ತಮ್ಮ ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗುತ್ತಾರೆ. ನಂತರ 7 ವರ್ಷಗಳ ತರುವಾಯ ಕಲ್ಯಾಣಕ್ಕೆ ಆಗಮಿಸಿ ಬಿಜ್ಜಳರಾಜನ ಆಸ್ಥಾನದಲ್ಲಿ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ. ಕ್ರಿ.ಶ.1169 ಸರ್ವಧಾರಿ ವಿರೋಧಿ ಸಂವತ್ಸರದಲ್ಲಿ ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ ಆ ಮೂಲಕ ತಮ್ಮ ಕಲ್ಪನೆಯ ಹೊಸ ಲಿಂಗಾಯತ ಧರ್ಮವನ್ನು ನಾಡಿನಾದ್ಯಂತ

ಪ್ರಸರಿಸುತ್ತಾರೆ. ಶೂನ್ಯ ಪೀಠ ಸ್ಥಾಪನೆಗೈದು ಅಂದು ಶೂದ್ರ ವರ್ಗವೆಂದು ಪರಿಗಣಿಸಲ್ಪಟ್ಟಿದ್ದ ನಟುವರ ಜಾತಿಯ ಅಲ್ಲಮ ಪ್ರಭುದೇವರನ್ನು ಅವರ ಅದ್ಭುತ ಅಧ್ಯಾತ್ಮ ಸಾಧನೆ ಪರಿಗಣಿಸಿ ಕ್ರಿ.ಶ.1185 ವಿಶ್ವಾವಸು ನಾಮ ಸಂವತ್ಸರ ಚೈತ್ರ ಶುದ್ಧ ಪಾಡ್ಯ ಯುಗಾದಿಯ ದಿವಸ ಸೋಮವಾರದಂದು ರೇವತಿ ನಕ್ಷತ್ರದಲ್ಲಿ ಪ್ರಥಮ ಶೂನ್ಯ ಪೀಠಾಧಿಕಾರಿಯನ್ನಾಗಿ ಮಾಡುತ್ತಾರೆ. ಅಂದಿನಿಂದ ನಾಡಿನಲ್ಲಿ ಲಿಂಗಾಯತ ಧರ್ಮದ ವಿರಕ್ತ ಪೀಠ ಪರಂಪರೆ ಪ್ರಾರಂಭವಾಗುತ್ತದೆ. ಕ್ರಿ.ಶ.1195 ರಾಕ್ಷಸ ನಾಮ ಸಂವತ್ಸರ ಕಾರ್ತಿಕ ಶುದ್ಧ ಪಂಚಮಿಯಂದು ಶ್ರೀ ಚನ್ನಬಸವಣ್ಣನವರಿಗೆ ಶೂನ್ಯ ಪೀಠದ ಅಧಿಕಾರ ಹಸ್ತಾಂತರವಾಗುತ್ತದೆ. ಹೊಸ ಧರ್ಮದ ಸಮಾನತಾ ತತ್ವಕ್ಕೆ ಪ್ರಭಾವಿತರಾಗಿ ಬ್ರಾಹ್ಮಣ ಕುಲದ ಮಧುವರಸರ ಮಗಳು ಲಾವಣ್ಯವತಿ ಸಮಗಾರ ಹರಳಯ್ಯನ ಮಗ ಶೀಲವಂತ ಇವರಿಬ್ಬರ ಮಧ್ಯೆ ವಿವಾಹ ಸಂಬಂಧಕ್ಕೆ ಅನುಭವ ಮಂಟಪ ಒಪ್ಪಿಗೆ ನೀಡಿದ್ದು ಕ್ರಿ.ಶ.1196ರ ರಾಕ್ಷಸ ನಾಮ ಸಂವತ್ಸರದ ಕಾರ್ತಿಕ ಮತ್ತು ಫಾಲ್ಗುಣ ಮಾಸಗಳ ಮಧ್ಯೆ. ಜಗತ್ತಿನ ಇತಿಹಾಸದಲ್ಲಿ ಇದೊಂದು ಅದ್ಭುತ ಘಟನೆ ಲಿಂಗಾಯತ ಧರ್ಮದ ಉಗಮವೇ ಅಂತರ್ಜಾತೀಯ ಮದುವೆಯ ಮೂಲಕ ಪ್ರಾರಂಭವಾಗಿರುವುದು ಇಲ್ಲಿ ಗಮನಾರ್ಹ ಅಂಶವಾಗಿದೆ. ವರ್ಣಾಂತರ ವಿವಾಹಕ್ಕೆ ಪ್ರೇರಣೆ ನೀಡಿದ್ದಕ್ಕಾಗಿ ಅಂದಿನ ಜಾತಿವಾದಿಗಳು ಶ್ರೀ ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತಾರೆ. ಬಸವಣ್ಣನವರ ಕಲ್ಯಾಣ ನಿರ್ಗಮನದ ತರುವಾಯ ರಕ್ತ ಕ್ರಾಂತಿ ನಡೆದು ಹರಳಯ್ಯ, ಮಧುವರಸ, ಶೀಲವಂತರ ಬಂಧನ ಮಾತ್ರವಲ್ಲ ಅವರನ್ನು ಆನೆಯ ಕಾಲಿಗೆ ಕಟ್ಟಿ ಕಣ್ಣು ಕೀಳಿಸಿ ಎಳೆಸಿ ಕೊಲ್ಲಿಸಲಾಗುತ್ತದೆ. ಬಸವಣ್ಣನವರ ಸೋದರ ಅಳಿಯ ಶೂನ್ಯ ಪೀಠದ 2ನೆಯ ಜಗದ್ಗುರು ಶ್ರೀ ಚನ್ನ ಬಸವಣ್ಣನವರು ವಚನ ಸಾಹಿತ್ಯವನ್ನು ಹೊತ್ತು ಕಲ್ಯಾಣವನ್ನು ತ್ಯಜಿಸಿ ದುರ್ಗಮ ಅರಣ್ಯ ಮಧ್ಯದ ಸಹ್ಯಾದ್ರಿ ಶಿಖರಗಳ ಅಂಚಿನ ಪ್ರಶಾಂತ ಪರಿಸರದ ಗುಹೆಗಳಲ್ಲಿ ಸಾಹಿತ್ಯವನ್ನು ರಕ್ಷಿಸಿ ತಮ್ಮ ಅಧ್ಯಾತ್ಮ ಸಾಧನೆ ಅನುಭಾವ ಮುಂದುವರೆಸುತ್ತಾರೆ. ಅವರು ಉಳಿದ ತಾಣವೇ ಶ್ರೀ ಕ್ಷೇತ್ರ ಉಳವಿ ಎಂದು ಪ್ರಸಿದ್ಧಿಯಾಗಿದೆ. ಇತ್ತ ಗುರು ಬಸವಣ್ಣನವರು ಕಲ್ಯಾಣವನ್ನು ತ್ಯಜಿಸಿ ಕೂಡಲ ಸಂಗಮಕ್ಕೆ ಬಂದು ಕ್ರಿ.ಶ.1196 ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸಂಜೆ 5-30ಕ್ಕೆ ಇಚ್ಛಾಮರಣದ ಪ್ರಕ್ರಿಯೆಯನ್ನು ಪೂರೈಸಿ ಲಿಂಗೈಕ್ಯರಾಗುತ್ತಾರೆ. ಧರ್ಮ ಸಂಸ್ಥಾಪಕರಾದ ಶ್ರೀ ಗುರು ಬಸವಣ್ಣನವರ ಲಿಂಗೈಕ್ಯ ದಿನವನ್ನು ಇಂದು ನಾಡಿನ ಬಸವ ಭಕ್ತರು ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ.

ಕ್ರಿ.ಶ.1915ರಲ್ಲಿ ಧಾರವಾಡ ಮುರುಘಾಮಠದ ತ್ರಿವಿಧ ದಾಸೋಹ ಮೂರ್ತಿ ಲಿಂ. ಶ್ರೀ ಮೃತ್ಯುಂಜಯ ಅಪ್ಪಗಳವರು ಮತ್ತು ಕರ್ನಾಟಕದ ಗಾಂಧಿ ಎಂದು ಖ್ಯಾತಿವೆತ್ತ ಹರ್ಡೇಕರ್ ಮಂಜಪ್ಪನವರು ಸೇರಿ ಬಸವ ಜಯಂತಿ ಉತ್ಸವವನ್ನು ಸಮಾಜ ಸಂಘಟನೆಯ ದೃಷ್ಟಿಯಿಂದ ಸಾರ್ವತ್ರಿಕವಾಗಿ ಆಚರಿಸಲು ಪ್ರಾರಂಭಿಸಿದರು. ಅದೇ ರೀತಿ ಬಸವಣ್ಣನವರ ಲಿಂಗೈಕ್ಯ ದಿನಾಚರಣೆಯನ್ನು ಬಸವ ಪಂಚಮಿ ಎಂಬ ಹೆಸರಿನಿಂದ ಆಚರಿಸಲು ಪ್ರಾರಂಭಿಸಿದ ಕೀರ್ತಿ ಕೂಡಲಸಂಗಮದ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಗೆ ಸಲ್ಲುತ್ತದೆ.

ಪೂಜ್ಯ ಮಾತಾಜಿ ಆಗ್ರಹಕ್ಕೆ ತಕ್ಷಣ ಸ್ಪಂದಿಸಿದ ಉಪಮುಖ್ಯಮಂತ್ರಿ
ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿ ಶ್ರೀ ಉಳವಿ ಕ್ಷೇತ್ರಾಭಿವೃದ್ಧಿಗೆ
ಸರ್ಕಾರದ ಶೀಘ್ರ ಕ್ರಮ

ಬಸವ ಪಂಚಮಿ ವರದಿ :

- ಕರಿಬಸಪ್ಪ ಕೋರಿಶೆಟ್ಟರು

ಬೆಂಗಳೂರು : ಚಿನ್ಮಯ ಜ್ಞಾನಿ ಶ್ರೀ ಚನ್ನಬಸವಣ್ಣನವರು ವಚನ ಸಾಹಿತ್ಯವನ್ನು ಜಾತಿವಾದಿಗಳಿಂದ ರಕ್ಷಿಸುವ ಉದ್ದೇಶದಿಂದ ಬಂದು ನೆಲೆಸಿದ ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನಲ್ಲಿರುವ ಶ್ರೀ ಉಳವಿ ಕ್ಷೇತ್ರವನ್ನು ಸಮಗ್ರವಾಗಿ – ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂಬ ಪ್ರಸ್ತಾವನೆಯನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನಮ್ಮ ಮುಂದಿಟ್ಟಿದ್ದು ಈ ಬಗ್ಗೆ ಶೀಘ್ರದಲ್ಲಿಯೇ ಕ್ರಮ ಕೈಗೊಂಡು ಹಲವರ ಹಂಬಲವನ್ನು ನನಸಾಗಿಸಲು ನಾನು ಬದ್ಧನಾಗಿದ್ದೇನೆ. ಎಂದು ಉಪ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರು ನುಡಿದರು. ಅವರು ಬೆಂಗಳೂರು ರಾಷ್ಟ್ರೀಯ ಬಸವ ದಳದ ವತಿಯಿಂದ ನಗರದ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ನಲ್ಲಿ ಭವ್ಯವಾಗಿ ಏರ್ಪಾಟಾಗಿದ್ದ ಶ್ರೀ ವಿಶ್ವಗುರು ಬಸವಣ್ಣನವರ 812ನೆಯ ಲಿಂಗೈಕ್ಯ ದಿನಾಚರಣೆ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದರು. ಶ್ರೀ ಉಳವಿ ಕ್ಷೇತ್ರವು ನಿಸರ್ಗ ಸೌಂದರ್ಯದ ಪ್ರಶಾಂತ ಪರಿಸರದಲ್ಲಿದ್ದು ಮಹಾಮನೆ, ಆಕಳ ಗವಿ ಮುಂತಾದ ಶರಣರ ಸ್ಮಾರಕಗಳು ಕಲ್ಯಾಣ ಕ್ರಾಂತಿಯ ಕಥನವನ್ನು ಸಾರುತ್ತಿದ್ದು ಇಲ್ಲಿನ ನಿಸರ್ಗ ಸೌಂದರ್ಯವನ್ನು ಉಳಿಸಿಕೊಳ್ಳುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಯಲ್ಲಾಪುರ ಹಾಗೂ ಉಳವಿ ಕ್ಷೇತ್ರದ ಮಧ್ಯದಲ್ಲಿ ಕಾಳಿ ನದಿಗೆ ತೂಗು ಸೇತುವೆ ನಿರ್ಮಿಸುವ ಮೂಲಕ ಜನತೆಗೆ ಅನುಕೂಲ ಮಾಡಿಕೊಡಬೇಕು ಎಂದೂ ಪೂಜ್ಯ ಮಾತಾಜಿಯವರು ಸಲಹೆ ನೀಡಿದ್ದು ಅದನ್ನು

ಈಡೇರಿಸಲಾಗುವುದು ಎಂದೂ ಉಪಮುಖ್ಯಮಂತ್ರಿಗಳು ನುಡಿದರು.

ಪೂಜ್ಯ ಮಾತಾಜಿಯವರು ಶ್ರೀ ಗುರು ಬಸವಣ್ಣನವರ ತತ್ವಗಳನ್ನು ದೇಶ - ವಿದೇಶಗಳಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರಚಾರ ಮಾಡಿದ್ದು ನಿಜವಾದ ಅರ್ಥದಲ್ಲಿ ಈ ಸಮಾಜದ ಜಗದ್ಗುರುಗಳಾಗಿದ್ದಾರೆ. ಈ ಬಾರಿ ನಮ್ಮ ಸರ್ಕಾರದ ವತಿಯಿಂದ ವಚನ ಸಾಹಿತ್ಯವನ್ನು ವಿಶ್ವದ ಬಹುತೇಕ ಭಾಷೆಗಳಿಗೆ ತರ್ಜುಮೆ ಮಾಡಲು ಹೆಚ್ಚುವರಿ ಹಣವನ್ನು ಮೀಸಲಿಡಲಾಗುವುದು ಎಂದರು.

ಪೂಜ್ಯ ಮಾತಾಜಿಯವರ ಪ್ರಬಲ ಆಗ್ರಹದ ಮೇರೆಗೆ "ಅನುದೇವಾ ಹೊರಗಣವನು" ಕೃತಿಯನ್ನು ಸರ್ಕಾರ ನಿಷೇಧಿಸಿತು. ಬಸವಣ್ಣನವರಲ್ಲದೇ ಬೇರೆ ಯಾವುದೇ ದಾರ್ಶನಿಕರ ಬಗ್ಗೆ ಅವಹೇಳನಕಾರಿಯಾದ ಬರಹ - ಸಾಹಿತ್ಯ ಯಾರಿಂದಲಾದರೂ ಬರೆಯಲ್ಪಟ್ಟಲ್ಲಿ ಅಂತವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಹಿಂಜರಿಯುವುದಿಲ್ಲಾ ಎಂದು ಸ್ಪಷ್ಟಪಡಿಸಿದ ಅವರು ಪೂಜ್ಯ ಮಾತಾಜಿಯರ ಅವಿಶ್ರಾಂತ ಪರಿಶ್ರಮದಿಂದ ಬಸವ ತತ್ವ ಎಲ್ಲೆಡೆ ಪ್ರಚಾರ -ವಾಗುತ್ತಿದ್ದು ಇಷ್ಟೊಂದು ಸಂಖ್ಯೆಯಲ್ಲಿ ಬಸವ ಭಕ್ತರನ್ನು ನೋಡುವ ಸೌಭಾಗ್ಯ ನನಗೆ ಇಂದು ಬಂದಿದೆ ಎಂದು ಭಾವ ತುಂಬಿ ನುಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಅವರು ಬಸವ ಜಯಂತಿ ಆಚರಣೆ ಹೇಗೆ ಮುಖ್ಯವೋ ಹಾಗೆಯೇ ಬಸವಣ್ಣನವರ ಲಿಂಗೈಕ್ಯ ದಿನವನ್ನು ಬಸವ ಪಂಚಮಿ ಎಂದು ಆಚರಣೆ ಮಾಡುವುದು ಸಹ ಅಷ್ಟೆ ಮುಖ್ಯ ಧಾರ್ಮಿಕ ವಿಧಿ ಎಂದು ಸ್ಪಷ್ಟಪಡಿಸಿದರಲ್ಲದೆ ನುಡಿದಂತೆ ನಡೆದ - ನಡೆದಂತೆ ನುಡಿದ ಶರಣರ ಜೀವನ ನಮಗೆ ಆದರ್ಶವಾಗಿದೆ ಎಂದರಲ್ಲದೆ. ಮುಖ್ಯಮಂತ್ರಿ ಕುಮಾರಸ್ವಾಮಿ ವಚನ ಬದ್ದರಾಗಿದ್ದಾರೆ ಅವರು ಎಂದಿಗೂ ವಚನ ಭ್ರಷ್ಟರಾಗುವುದಿಲ್ಲ ಯಡೆಯೂರಪ್ಪನವರಿಗೆ ಅಧಿಕಾರ ಹಸ್ತಾಂತರ ಮಾಡುತ್ತಾರೆ. ಯಡಿಯೂರಪ್ಪನವರು ಸೌಜನ್ಯ ಶೀಲರು, ಅವರಿಗೆ ಮುಖ್ಯಮಂತ್ರಿ ಸ್ಥಾನ ದೊರೆಯಬೇಕು. ಅದೇ ರೀತಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರೂ ಸಹ ಆದರ್ಶ ವ್ಯಕ್ತಿಯಾಗಿದ್ದು ಖಂಡಿತ ಅಧಿಕಾರ ಹಸ್ತಾಂತರ ಮಾಡುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದರು. ಉಳವಿ ಕ್ಷೇತ್ರದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರು ಯಡೆಯೂರಪ್ಪನವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಸಚಿವ ರಾಮಚಂದ್ರಗೌಡರು ಮಾತನಾಡಿ ಬಸವಣ್ಣನವರ ಒಂದೊಂದು ವಚನವೂ ಕೂಡ ನಮ್ಮ ಬದುಕಿಗೆ ಮಾರ್ಗದರ್ಶನ ನೀಡುತ್ತದೆ. ಕಾಯಕ ಮುಖಿ ಸಮಾಜ ರಚನೆ ಅವರ ಬದುಕಿನ ಧ್ಯೇಯವಾಗಿತ್ತು ಎಂದು ಹೇಳಿದರಲ್ಲದೇ ವಚನ ಪರಿಪಾಲನೆಯ ದಿಶೆಯಲ್ಲಿ ಪುಣ್ಯಕೋಟಿ ಗೋವಿನ ಕಥೆ ನಮಗೆ ಆದರ್ಶ ಎಂದರು.

ನಿವೃತ್ತ ಲೋಕಾಯುಕ್ತ ಎನ್. ವೆಂಕಟಾಚಲ ಅವರು 'ಶರಣ ದರ್ಶನ' ಎಂಬ ತೈಲ ಚಿತ್ರ ಪ್ರದರ್ಶನ ಉದ್ಘಾಟಿಸಿ ಮಾತನಾಡಿ ಜಾತಿ ವ್ಯವಸ್ಥೆ ಪ್ರಬಲವಾಗಿ ಬೇರೂರಿದ್ದಾಗ ಸಮಾನತೆಯ ತತ್ವ ಅನುಷ್ಠಾನಕ್ಕಾಗಿ ಬಸವಣ್ಣನವರು ಜನ್ಮ ತಳೆದರು. ಅವರು ನುಡಿದ ನಡೆದ ತತ್ವಗಳು ಇಡೀ ಜಗತ್ತಿಗೆ ಬೆಳಕಾಗಿವೆ ಎಂದರಲ್ಲದೇ ಪೂಜ್ಯ ಮಾತಾಜಿಯವರು ಬಸವ ತತ್ವ ಪ್ರಚಾರಕ್ಕಾಗಿಯೇ ಜನ್ಮವೆತ್ತಿ ಬಂದಿದ್ದಾರೆ ಎಂದರು. ಮಾಜಿ ಶಾಸಕ ಚಂದ್ರ ಕಾಂತ ಬೆಲ್ಲದ, ಡಾ|| ಮುದಿಗೊಂಡ ಶಿವಪ್ರಸಾದ್, ನ್ಯಾಯಾಧೀಶರಾದ ನಾಗಪ್ಪ , ಎಂ. ಎಸ್. ನಾಗೇಂದ್ರ, ಬಸವರಾಜ ಮಣಸಿನಕಾಯಿ ಮಾತನಾಡಿದರು. ಶ್ರೀ ದಯಾನಂದ ಸ್ವಾಮೀಜಿ, ಹಾಗೂ ಬೆಂಗಳೂರು ಮೆಟ್ರೋ ರೇಲ್ವೆ ಯೋಜನೆಯ ಮುಖ್ಯ ಇಂಜನಿಯರ್ ಬಿ. ಗುರುಪ್ರಸಾದ್, ಡಾ|| ಶಾಲಿನಿ ದೊಡ್ಡಣ್ಣಿ ಇವರನ್ನು ಸತ್ಕರಿಸಲಾಯಿತು. ಸರ್ವಮಂಗಳಾ ಗುಂಡಪ್ಪ ಅವರು ಪ್ರಸಾದ ದಾಸೋಹ ಸೇವೆ ವಹಿಸಿಕೊಂಡಿದ್ದರು.

ಮರು ದಿವಸ ಸಮಾರೋಪ ಸಮಾರಂಭ ಹಾಗೂ ನೀಲಾಂಬಿಕಾ ತಾಯಿಯ ಷಷ್ಠಿಯು ಪೂಜ್ಯ ಮಾತಾಜಿಯವರ ದಿವ್ಯ ಸಾನ್ನಿಧ್ಯದಲ್ಲಿ ವೈಭವದಿಂದ ಜರುಗಿತು. ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಡಿ.ಪಿ. ಪ್ರಕಾಶ ಅವರು ಕಲ್ಯಾಣ ಮರು ಪ್ರವೇಶ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಎಸ್. ಪುಟ್ಟರುದ್ರ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಹೈದರಾಬಾದ್‌ನ ಪ್ರಾಧ್ಯಾಪಿಕೆ ಡಾ|| ಉಮಾದೇವಿ ಎಂ. ಶಿವಪ್ರಸಾದ್, ಎಂಪ್ಲಾಯ್‌ಮೆಂಟ್ ಇಲಾಖೆಯ ಉಪ ನಿರ್ದೇಶಕ ಎಂ. ಮುದ್ದಣ್ಣ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು: ಪುಷ್ಪಾ ಪರಂಜ್ಯೋತಿ ಅವರು ಪ್ರಸಾದ ದಾಸೋಹ ಸೇವೆ ವಹಿಸಿಕೊಂಡಿದ್ದರು.

ಜನಾಕರ್ಷಿಸಿದ ಪಥ ಸಂಚಲನ


ನಂತರ ಪ್ರಾರಂಭಗೊಂಡ ಭವ್ಯ ಪಥ ಸಂಚಲನಕ್ಕೆ ಪೂಜ್ಯ ಮಾತಾಜಿ ಚಾಲನೆ ನೀಡಿದರು. ವಿಶ್ವಗುರು ಬಸವಣ್ಣನವರ ಆಕರ್ಷಕ ಭವ್ಯ ಭಾವಚಿತ್ರದೊಂದಿಗೆ ಸಾವಿರಾರು ಶರಣ ಶರಣೆಯರು ಅತ್ಯಂತ ಶಿಸ್ತಿನಿಂದ, ಸಂಭ್ರಮ - ಸಡಗರದಿಂದ ಪುರಭವನದಿಂದ ವಿಶ್ವಗುರು ಬಸವಣ್ಣನವರ ಪುತ್ಥಳಿಯವರೆಗೆ ಸಾಗಿದರು.




812 ನೆಯ ಬಸವ ಲಿಂಗೈಕ್ಯ ಸಂಸ್ಮರಣೆ ನಡೆದ ಬೆಂಗಳೂರು ಸಿಟಿ ಮಾರುಕಟ್ಟೆ ಬಳಿ ಇರುವ ಪುಟ್ಟಣ್ಣ ಚೆಟ್ಟಿ ಪುರಭವನ



ಗುರು ಬಸವಣ್ಣನವರಿಗೆ ಪುಷ್ಪಾರ್ಚನೆ ಮತ್ತು ಆರತಿ. ಶರಣ. ಯಡೆಯೂರಪ್ಪ ಅವರಿಂದ



ಶರಣ ದರ್ಶನ ಪ್ರದರ್ಶನ ಉದ್ಘಾಟನೆ. (ನಿ).ಲೋಕಾಯುಕ್ತ ವೆಂಕಟಾಚಲ ಅವರಿಂದ.
ಸಚಿವ ರಾಮಚಂದ್ರಗೌಡರು ಜೊತೆಯಲ್ಲಿದ್ದಾರೆ.



ನಾಗೇಂದ್ರ, ಬೆಂಗಳೂರು ಮೆಟ್ರೋದ ಎಕ್ಸಿಕ್ಯುಟಿವ್ ಡೈರೆಕ್ಟರ್ ಅವರಿಗೆ ಸತ್ಕಾರ.




ಶರಣ ದರ್ಶನ ಪ್ರದರ್ಶನ



ಧರ್ಮಪಿತ ಬಸವಣ್ಣನವರ ವಚನಗಳನ್ನು ಮರಾಠಿಗೆ ಭಾಷಾಂತರ ಮಾಡಿ, ಪ್ರಕಟಿಸಿರುವ
ಕಾಲಿನ ದೊಡ್ಡನಿ ಅವರಿಗೆ ಸತ್ಕಾರ



ಪೂಜ್ಯ ದಯಾನಂದ ಸ್ವಾಮಿಗಳಿಗೆ ಸತ್ಕಾರ



ದಿ.19-8-2007 ನೀಲಾಂಬಿಕಾ ಷಷ್ಠಿಯ ಉದ್ಘಾಟನೆ ಹೈದರಾಬಾದಿನ ಡಾ।। ಮುದಿಗೊಂಡ ಶಿವಪ್ರಸಾದ್ ಅವರಿಂದ
ಅವರ ಪತ್ನಿ ಡಾ।।ಪ್ರೊ.ಉಮಾದೇವಿ ಚಿತ್ರದಲ್ಲಿದ್ದಾರೆ



ಬೆಂಗಳೂರು ಮೆಟ್ರೋದಲ್ಲಿ ಚೀಫ್ ಎಂಜಿನಿಯರ್ ಆಗಿರುವ ಬಿ.ಗುರುಪ್ರಸಾದ ಅವರಿಗೆ
ಪದೋನ್ನತಿಗಾಗಿ ಸತ್ಕಾರ. ಪಕ್ಕದಲ್ಲಿ ಪತ್ನಿ ಗಾಯತ್ರಿದೇವಿ



(ನಿ)ಲೋಕಾಯುಕ್ತ ಎನ್.ವೆಂಕಟಾಚಲ ಅವರಿಗೆ ಸತ್ಕಾರ ಮತ್ತು ನೆನಪಿನ ಕಾಣಿಕೆ ನೀಡಿಕೆ



ಬಸವ ಪಂಚಮಿ ಕಾರ್ಯಕ್ರಮದ ಏರ್ಪಾಡಿಗೆ ವಿಶೇಷ ಸೇವೆ ಸಲ್ಲಿಸಿದ ಭುಜೇಂದ್ರ, ಅವರಿಗೆ ಸತ್ಕಾರ



ಇಷ್ಟಲಿಂಗ ಯೋಗ ವಿಜ್ಞಾನ ಕುರಿತು ವಿಶೇಷ ಉಪನ್ಯಾಸ ನೀಡಿದ ಶರಣ.ಬಸವರಾಜಪ್ಪ ಮೆಣಸಿನಕಾ
ಅವರಿಗೆ ಯುವ ನ್ಯಾಯವಾದಿ ಕರಿಬಸಪ್ಪ ಕೋರಿಶೆಟ್ಟರ ಅವರಿಂದ ಸತ್ಕಾರ




ಗುರು ಬಸವಣ್ಣನವರಿಗೆ ವಂದನೆ ಸಲ್ಲಿಸಿದ ಗೀತಾ ಅಕ್ಯಾಡಮಿಯ ನೃತ್ಯ ತಂಡದವರು



ದಿ.19-8-07ರಂದು ಮೆರವಣಿಗೆಗೆ ಶೋಭೆ ತಂದ ಸುಮಂಗಲಿ ಸೇವಾಶ್ರಮದ ಮಕ್ಕಳ ಬ್ಯಾಂಡ್ ತಂಡ



ಬಸವ ಪಂಚಮಿ ದಿನ ನಾಗರ ಕಲ್ಲಿಗೆ, ಹುತ್ತಕ್ಕೆ ಹಾಲೆರೆಯುವ ಮೂಢತೆ ಬಿಡಿಸಲು ರಾಷ್ಟ್ರೀಯ ಬಸವ ದಳ,
ಬೆಂಗಳೂರು ಇವರಿಂದ ಆಸ್ಪತ್ರೆಯಲ್ಲಿ ಕುಷ್ಠ ರೋಗಿಗಳಿಗೆ ಹಣ್ಣು-ಹಾಲು ಹಂಚಿಕೆ




ಬಸವ ಪಂಚಮಿ, ದಿ19-8-2007ರಂದು ನವ ದೆಹಲಿಯ ಬಸವ ಮಂಟಪದಲ್ಲಿ
Lord Basava Computer Academyಯ ಪ್ರಾರಂಭೋತ್ಸವ






ದೆಹಲಿಯ ಮಹಾನಗರ ಪಾಲಿಕೆಯ ಸದಸ್ಯೆ ಸುದೇಶವತಿ ದಾಸ್ ಅವರಿಂದ ಕಂಪ್ಯೂಟರ್ ಚಾಲನೆ



ದೆಹಲಿಯ ಕರ್ನಾಟಕ ಭವನದಲ್ಲಿ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರನ್ನು ಭೇಟಿ ಮಾಡಿದ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ



ಉಪ ಮುಖ್ಯ ಮಂತ್ರಿ ಯಡೆಯೂರಪ್ಪ ಅವರಿಗೆ ಬಸವ ರಕ್ಷೆ ಹೊದ್ದಿಸಿ ಬಸವ ಕುಮಾರ ಸ್ವಾಮಿಗಳು ಮತ್ತು ದಯಾನಂದ ಸ್ವಾಮಿಗಳಿಂದ ಸತ್ಕಾರ



ಲಕ್ನೋದಲ್ಲಿ ನಡೆದ ಇನ್ಸಾನ್ ದೋಸ್ತಿ ಕಾನ್‌ಫರೆನ್ಸ್‌ನಲ್ಲಿ ಸ್ವಾಮೀಜಿ ಭಾಷಣ



ಪೂಜ್ಯ ಮಾತಾಜಿಯವರಿಂದ ನೆನಪಿನ ಕಾಣಿಕೆಯ ಕೊಡುಗೆ







ದಿ.19-8-2007 ಬೆಂಗಳೂರಿನ ಮುಖ್ಯ ರಸ್ತೆಗಳಲ್ಲಿ ನಡೆದ ಮೆರವಣಿಗೆಗೆ ಪುಷ್ಪವೃಷ್ಟಿ ಮೂಲಕ ಚಾಲನೆ.



CPMG/KA/BGW-55/2006-2008 WPP (W)-17 R.No.19980/70









